TIGHT BINDING BOOK

UNIVERSAL LIBRARY
OU_200476
UNIVERSAL LIBRARY

*Department of Public Instruction, Mysore.*

# ಕಥಾವಳಿ.

## ಮೊದಲನೆಯ ಭಾಗ.

BY

B. SUBBA RAO, B. A.

Third edition 10,000 copies.

BANGALORE CITY.
PRINTED AT THE B. B. D. POWER PRESS.
1918

# ಕಥಾವಳಿ.

## PART I.


| ನಂ. | ಕಥೆಗಳು. | ಪುಟ ಸಂಖ್ಯೆ. |
|---|---|---|
| ೧ | ಕಾಗಕ್ಕ ಗುಬ್ಬಕ್ಕ ... ... | ೧ |
| ೨ | ಕೋತಿಯೂ ಬೆಕ್ಕಿನಮರಿಯೂ ... ... | ೨ |
| ೩ | ಇಲಿಗಳ ಉಪಾಯ ... ... | ,, |
| ೪ | ಮಂಕರೂ ಟೋಪಿಯೂ ... ... | ೩ |
| ೫ | ನಾಗವಲ್ಲಿಯ ಕಥೆ (೧ನೆಯ ಭಾಗ) ... ... | ೪ |
| ೬ | ಅದೇ (೨ನೆಯ ಭಾಗ) ... ... | ೫ |
| ೭ | ಅದೇ (೩ನೆಯ ಭಾಗ) ... ... | ೭ |
| ೮ | ಅದೇ (೪ನೆಯ ಭಾಗ) ... ... | ೯ |
| ೯ | ಅದೇ (೫ನೆಯ ಭಾಗ) ... ... | ೧೨ |
| ೧೦ | ಕಾಗೆಯೂ ಗುಬ್ಬಿಯೂ ... ... | ೧೪ |
| ೧೧ | ನಾಯಿಯ ಕಥೆ ... ... | ೧೫ |
| ೧೨ | ಎರಡು ನದಿಗಳು ... ... | ,, |
| ೧೩ | ಸುಳ್ಳು ಹುಡುಗ ... ... | ೧೬ |
| ೧೪ | ಚಿಕ್ಕದೇವರಾಜ ಒಡೆಯರು ... ... | ೧೭ |
| ೧೫ | ಬಕಾಸುರನ ಕಥೆ ... ... | ೧೯ |
| ೧೬ | ಮಾವಿನಗಿಡ, ಗೊಬ್ಬಳಿಯಗಿಡ ... ... | ೨೧ |
| ೧೭ | ಕೋಳಿಯೂ ರತ್ನವೂ ... ... | ೨೩ |
| ೧೮ | ಇರುವೆಯೂ ಚಿಮ್ಮಂಡೆ ಹುಳುವೂ ... ... | ೨೪ |
| ೧೯ | ಅಭಿಮನ್ಯುವಿನ ಕಥೆ ... ... | ೨೫ |
| ೨೦ | ಶಿವಾಜಿ ಮಹಾರಾಜ ... ... | ೨೮ |
| ೨೧ | ರಾಗಿರಾಮಾಯಣ ... ... | ೩೦ |
| ೨೨ | ಉತ್ತರನ ಕಥೆ ... ... | ೩೨ |
| ೨೩ | ವಿಜಯನಗರ ... ... | ೩೪ |
| ೨೪ | ನಾಗಲೋಕ (೧ನೆಯ ಭಾಗ) ... ... | ೩೫ |
| ೨೫ | ನಾಗಲೋಕ (೨ನೆಯ ಭಾಗ) ... ... | ೩೭ |
| ೨೬ | ನಾಗಲೋಕ (೩ನೆಯ ಭಾಗ) ... ... | ೩೮ |

| ನಂ. | ಕಥೆಗಳು. | ಪುಟ ಸಂಖ್ಯೆ. |
|---|---|---|
| ೨೭ | ಹಾವಾಡಿಗನೂ, ಹಾವೂ, ಇಲಿಯೂ ... ... | ೪೦ |
| ೨೮ | ಕಳ್ಳ ಮತ್ತು ಜೇನುಹುಳು ... ... | ೪೧ |
| ೨೯ | ನಾಯಿಯ ಸ್ನೇಹ ... ... | ೪೨ |
| ೩೦ | ಧ್ರುವರಾಯನ ಕಥೆ ... ... | ೪೩ |
| ೩೧ | ಕಬ್ಬು ತೆಂಗು ... ... | ೪೫ |
| ೩೨ | ಮೃಗಗಳು ರಾಜನನ್ನು ಗೊತ್ತುಮಾಡಿಕೊಂಡ ಬಗೆ ... | ೪೬ |
| ೩೩ | ವರಲಕ್ಷ್ಮೀ ಕಥೆ ... ... | ೫೦ |
| ೩೪ | ಕಡುವಿನ ಕಥೆ ... ... | ೫೧ |
| ೩೫ | ಹುಡುಗನೂ ಗಿಣಿಯೂ ... ... | ೫೩ |
| ೩೬ | ಕೆಲಸದ ಹೆಂಗಸರೂ ಕೋಳಿಯೂ ... ... | ೫೩ |
| ೩೭ | ಶ್ರೀರಾಮನೂ ಚಂದ್ರನೂ ... ... | ೫೪ |
| ೩೮ | ಲವಕುಶರ ಕಾಳಗ ... ... | ೫೬ |
| ೩೯ | ಪಿಂಡಾರಿಯವರು ... ... | ೫೮ |
| ೪೦ | ವಿನಾಯಕನ ಕಥೆ ... ... | ೫೯ |
| ೪೧ | ಮರಗಳು ರಾಜನನ್ನು ಗೊತ್ತುಮಾಡಿಕೊಂಡುದು ... | ೬೧ |
| ೪೨ | ಬಲಿಕ್ರವರ್ತಿ ... ... | ೬೪ |
| ೪೩ | ಟಿಪ್ಪೂ ಸುಲ್ತಾನ ... ... | ೬೫ |
| ೪೪ | ರಾಜನು ಜೇಡರ ಹುಳುವಿನಿಂದ ಬದುಕಿದುದು ... | ೬೬ |
| ೪೫ | ಸಾವಿತ್ರಿಯ ಕಥೆ (೧ನೆಯ ಭಾಗ) ... ... | ೬೭ |
| ೪೬ | ಅದೇ (೨ನೆಯ ಭಾಗ) ... ... | ೬೮ |
| ೪೭ | ಕಂಠೀರವ ನರಸರಾಜ ಒಡೆಯರವರು ... ... | ೭೦ |
| ೪೮ | ಬೇಸಿಗೆಕಾಲ ಮಳೆಗಾಲ ... ... | ೭೧ |
| ೪೯ | ಪುಷ್ಪಮಂಜರಿಯ ಕಥೆ (೧ನೆಯ ಭಾಗ) ... ... | ೭೩ |
| ೫೦ | ಅದೇ (೨ನೆಯ ಭಾಗ) ... ... | ೭೫ |
| ೫೧ | ಅದೇ (೩ನೆಯ ಭಾಗ) ... ... | ೭೭ |
| ೫೨ | ಅದೇ (೪ ನೆಯ ಭಾಗ) ... ... | ೭೯ |

# ಕಥಾವಳಿ.

## ಪೀಠಿಕೆ.

ಬಾಲವಿದ್ಯಾಭ್ಯಾಸವು ಈಚೆಗೆ ಬಾಲಲೀಲೆಯಾಗಿ ಪರಿಣಮಿಸಿರುವುದು. ಇದಕ್ಕೆ ಪಾಶ್ಚಾತ್ಯರಲ್ಲಿ ಪ್ರಸಿದ್ಧರಾದ ಉಪಾಧ್ಯಾಯರ ನವೀನಪಾಠಕ್ರಮವೇ ಕಾರಣವು. ಈ ಪಾಠಕ್ರಮವು ಮಕ್ಕಳ ಚಿತ್ತವೃತ್ತಿಯನ್ನು ಅನುಸರಿಸಿರುವುದು. ಮಕ್ಕಳ ಚಿತ್ತವು ಆಟದಲ್ಲಿ ಅನುರಕ್ತವಾಗಿರುವುದೆಂಬುದನ್ನು ತಿಳಿದು ಜ್ಞಾನೇಂದ್ರಿಯವಿಕಾಸಕ್ಕೆ ಆಟಪಾಟದಲ್ಲಿಯೇ ಅನೇಕಸಾಧನೆಗಳನ್ನು ಕಲಿಸಿರುವರು. ಹೀಗೆ ಕಲ್ಪಿಸಿರುವ ಸಾಧನಗಳಲ್ಲಿ ಕಥೆ ಹೇಳುವುದೂ ಒಂದು.

ಕಥೆ ಹೇಳುವುದಕ್ಕೆ ಯಾರಿಗೆ ತಾನೆ ಬಾರದು? ಎಂದು ಹೇಳಬಹುದು. ಆದರೆ ಒಂದು ಸನ್ನಿವೇಶವನ್ನು ವರ್ಣಿಸಿ, ಅಲ್ಲಿ ನಡೆವ ವಿಚಾರವನ್ನು ವಿವರಿಸುತಿದ್ದರೆ, ಕಥೆಯನ್ನು ಕೇಳುವವರು ಆ ಸಂದರ್ಭದಲ್ಲಿದ್ದುಕೊಂಡು, ಅಲ್ಲಿ ಸಂಭವಿಸುವ ಸುಖದುಃಖಗಳಿಗೆ ಭಾಗಿಗಳಾಗಿ ‘ ಮುಂದೇನುಗತಿ ? ಹೇಗೆ ಪರಿಣಮಿಸುವುದು? ಸೌಖ್ಯವು ಎಂದಿಗೆ ಉಂಟಾದೀತು ?” ಎಂಬ ರೀತಿಯಲ್ಲಿ ಕಾತರಪಡುವಂತೆ ಕಥೆಯನ್ನು ಹೇಳುವುದು ಜನಸಾಮಾನ್ಯಕ್ಕೆ ಸುಲಭವಲ್ಲ. ಕಥೆಯನ್ನು ಮನೋಹರವಾಗಿ ಹೇಳುವುದೂ ಒಂದು ವಿದ್ಯೆಯೇ ಸರಿ. ಇದು ಎಲ್ಲರಲ್ಲಿಯೂ ಸಾಮಾನ್ಯವಾಗಿ ಇಲ್ಲದ ವಿದ್ಯೆಯಾದರೂ ಕಥೆಯನ್ನು ಹೇಳುವವರು ಹೇಳಬೇಕೆಂದಿರುವುದನ್ನು ತಿಳಿವಂತೆ ಹೇಳುವುದಲ್ಲದೆ ಕೂಡಿದ ಮಟ್ಟಿಗೂ ಮನೋಹರವಾಗಿರುವಂತೆ ಹೇಳಲೂ ಯತ್ನಿಸಬೇಕು.

ಒಂದು ಕಥೆಯಲ್ಲಿ ಹೇಳಬೇಕಾದುದನ್ನೆಲ್ಲಾ ಪುಸ್ತಕದಲ್ಲಿ ಬರೆವುದು ಸಾಧ್ಯವಲ್ಲ; ಪುಸ್ತಕದಲ್ಲಿ ಬರೆವುದನ್ನೆಲ್ಲಾ ಹೇಳಬೇಕಾದ ಅವಶ್ಯವೂ ಇಲ್ಲ. ಆದುದರಿಂದ ಕಥೆಗೆ ಬೇಕಾದ ಸಾಮಗ್ರಿಗಳನ್ನು ಕೂಡಿದಮಟ್ಟಿಗೆ ಇಲ್ಲಿ ಒದಗಿಸಿದೆ. ಇವನ್ನು ತೆಗೆದುಕೊಂಡು ರುಚಿಯಾದ ಪಾಕವನ್ನು ಇಳಿಸುವ ಜಾಣ್ಮೆಯು ಉಪಾಧ್ಯಾಯರದಾಗಿರುವುದು. ಈ ಪುಸ್ತಕವನ್ನು ಉಪಯೋಗಿಸುವವರು ಇಲ್ಲಿರುವ ಕಥೆಗಳನ್ನು ಗಟ್ಟಿಮಾಡಿ ಬಾಲಕರ ಮುಂದೆ ಒಪ್ಪಿಸದೆ ಕಥಾವಿಷಯವನ್ನು ಮಾತ್ರ ತೆಗೆದುಕೊಂಡು, ಬಾಲಕರ ಯೋಗ್ಯತೆಯನ್ನು ಅರಿತು, ಅವರಿಗೆ ರುಚಿಸಬಹುದಾದ ಕಥೆಯನ್ನು, ಸಾಧಾರಣವಾಗಿ ಮಾತನಾಡುವ ರೀತಿಯಲ್ಲಿ ಹೇಳಬೇಕು. ಕಥೆ ಹೇಳೋಣದರಲ್ಲಿ ಕಥಾವಿಷಯವನ್ನು ತಿಳಿಸುವುದೇ ಮುಖ್ಯವಾದುದರಿಂದ ಭಾಷೆಗೆ ಅಷ್ಟು ಗಮನಕೊಡ

ಬೇಕಾದುದಿಲ್ಲ. ಕಥೆಯನ್ನು ಹೇಳುವುದೇ ಆಗಲಿ ಕೇಳುವುದೇ ಆಗಲಿ, ಅದೂ ಒಂದು 'ಪಾಠ' ವೆಂಬ ಬೇಸರವು ಯಾರಲ್ಲೂ ಉಂಟಾಗಬಾರದು.

ಕಥೆಯನ್ನು ಹೇಳುವಾಗ ಉಪಾಧ್ಯಾಯರು ಮಕ್ಕಳ ಚಿತ್ತವೃತ್ತಿಯನ್ನು ಪರೀಕ್ಷಿಸುತ್ತಿರಬೇಕು. ಒಂದೇ ಮನಸ್ಸಿನಿಂದ ಮಕ್ಕಳು ಕೇಳುತ್ತಿದಾರೆಂಬುದನ್ನು ತಿಳಿಯಲು ಮಧ್ಯೇಮಧ್ಯೇ ಪ್ರಶ್ನೆಯನ್ನು ಹಾಕುತ್ತಿರಬೇಕು. ವಿಷಯವನ್ನು ಮಕ್ಕಳು ಚೆನ್ನಾಗಿ ಗ್ರಹಿಸಿದರೆಂದು ದೃಢಪಡಿಸಿಕೊಂಡಲ್ಲದೆ ಕಥೆಯನ್ನು ಮುಂದಕ್ಕೆ ಸಾಗಿಸಬಾರದು. ಮಕ್ಕಳಿಗೆ ತಿಳಿಯಲಿ, ತಿಳಿಯದಿರಲಿ, ಮುಗಿಸಿದರೆ ಆಯಿತೆಂದು ಭಾವಿಸಿ ಕಥೆಯನ್ನು ಮುಂದೆ ಮುಂದೆ ಸಾಗಿಸಿದ ಮಾತ್ರದಿಂದಲೇ ಪ್ರಯೋಜನವಿಲ್ಲ. ತಿಳಿಯದುದನ್ನು ಕೇಳಲು ಮಕ್ಕಳಿಗೆ ಅವಕಾಶಕೊಡಬೇಕು. ಅವರಿಗೆ ಅನುಭವವಿಲ್ಲದ ವಿಷಯಗಳನ್ನೂ (ಯುದ್ಧ ವಿಚಾರ, ಸೃಷ್ಟಿಯ ಚಮತ್ಕಾರ) ತಿಳಿಯದ ಶಬ್ದಗಳನ್ನೂ ವಿವರಿಸಿ ಮುಂದಕ್ಕೆ ಕಥೆಯನ್ನು ಸಾಗಿಸಬೇಕು. ಸಾಧ್ಯವಾದೆಡೆಯಲ್ಲೆಲ್ಲಾ ದೇವರ ಮಾಹಾತ್ಮ್ಯವನ್ನೂ, ಸೃಷ್ಟಿಯ ವೈಚಿತ್ರ್ಯವನ್ನೂ, ಸಸ್ಯ ಮೃಗಾದಿಗಳ ಸ್ವಭಾವವನ್ನೂ ವ್ಯಕ್ತಗೊಳಿಸುತ್ತಿರಬೇಕು. ತಿರ್ಯಗ್ಜಂತುಗಳಲ್ಲಿ ದಯೆಯೂ, ದುಃಖಿಗಳಲ್ಲಿ ಅನುತಾಪವೂ, ಸದ್ವೃತ್ತಿಯಲ್ಲಿ ಅಭಿಲಾಷೆಯೂ, ಸ್ವಜನರಲ್ಲಿ ನಯವೂ, ಸಾಧುಜನರಲ್ಲಿ ಪ್ರೀತಿಯೂ, ಶೂರರಲ್ಲಿ ಸ್ನೇಹವೂ, ದೀನರಲ್ಲಿ ಕ್ಷಮೆಯೂ ಉಂಟಾಗುವ ಕಥಾಸಂದರ್ಭಗಳನ್ನು ಮಕ್ಕಳ ಲಕ್ಷ್ಯಕ್ಕೆ ಅವಶ್ಯವಾಗಿ ತರಬೇಕು. ಕಥೆಯನ್ನು ಹೇಳಿ ಪೂರೈಸಿದ ಅನಂತರ, ಅದರಿಂದ ತಿಳಿಯಬೇಕಾದ ಅಂಶಗಳನ್ನು ಮಕ್ಕಳಿಂದಲೇ ಹೇಳಿಸಬೇಕು. ಮೇಲಣ ತರಗತಿಗಳಲ್ಲಿ ಕಥೆಯ ಛಾಯೆಯನ್ನು ಮಾತ್ರ ಕೊಟ್ಟು ಕಥಾಸಂದರ್ಭವನ್ನೆಲ್ಲಾ ಪುಷ್ಟೀಕರಿಸಿ ವಿವರಿಸುವಂತೆ ಬಾಲಕರಿಗೆ ಹೇಳಬೇಕು.

ಕಥಾವಳಿಯ ಮೊದಲನೆಯ ಭಾಗದಲ್ಲಿ ಬಾಲಕರು ಸಾಮಾನ್ಯವಾಗಿ ನೋಡಿರುವ ಜೀವಜಂತು, ಸಸಿ, ಹಿಂದೂಜನರು ಆಚರಿಸುವ ಮುಖ್ಯವಾದ ಹಬ್ಬ ಹಾಡಿಯು, ಇವುಗಳ ವಿಚಾರವಾದ ಕಥೆಗಳೂ, ಕಲ್ಪಿತ ಕಥೆಗಳೂ, ನೀತಿ ಕಥೆಗಳೂ, ಇತಿಹಾಸಗಳೂ, ಜೀವಿತಚರಿತ್ರೆಗಳೂ ಕೆಲಕೆಲವು ಇರುವುವು. ಇವುಗಳನ್ನು ಇಲ್ಲಿ ಕೊಟ್ಟಿರುವ ಕ್ರಮದಲ್ಲಿಯೇ ಹೇಳಬೇಕಾದ ಆವಶ್ಯಕತೆ ಏನೂ ಇಲ್ಲ. ಒಂದೊಂದು ದಿನ ಒಂದೊಂದರ ಮೇರೆ, ಬಾಲಕರ ಯೋಗ್ಯತೆಯನ್ನರಿತು, ಪುಸ್ತಕಭಾಷೆಯನ್ನು ಮರೆತು, ಸಾಧಾರಣವಾಗಿ

ಮಾತನಾಡುವ ಭಾಷೆಯಲ್ಲಿಯೇ ಕಥೆಯನ್ನು ಹೇಳಬೇಕು. ಇದರಿಂದ ಮಕ್ಕಳಲ್ಲಿ ಕಲ್ಪನಾಶಕ್ತಿಯು ವೃದ್ಧಿಗೊಳ್ಳುವುದು; ಅನುಕಂಪಾಧೈರ್ಯೋತ್ಸಾಹಾದಿಗುಣಗಳು ವಿಕಾಸಗೊಳ್ಳುವುವು. ಮುಖ್ಯಜ್ಞಾನೇಂದ್ರಿಯಾಭಿವೃದ್ಧಿಗೆ ಕಥೆಗಳು ವಿಶೇಷ ಸಹಕಾರಿಯಾಗಿ ಪರಿಣಮಿಸುವುವು.

ಈ ಕಥಾವಳಿಯನ್ನು ಬರೆಯಲು ಸಹಾಯಮಾಡಿದ ನನ್ನ ಮಿತ್ರರಿಗೆ ನಾನು ತುಂಬ ಕೃತಜ್ಞನಾಗಿರುವೆನು.

ಮೈಸೂರು,
15th March 1904

BAPU SUBBA RAO.

## ವಿಷಯಸೂಚಿಕೆ.

### ಪ್ರಾಣಿ ವಿಷಯವಾದ ಕಥೆಗಳು Stories of Animal-life.


| ಕಥೆ. | | ಪುಟ |
|---|---|---|
| ೨ | ಕೋತಿಯೂ ಬೆಕ್ಕನ ಮರಿಯೂ ... ... | ೨ |
| ೩ | ಇಲಿಗಳ ಉಪಾಯ ... ... | ೨ |
| ೧೦ | ಕಾಗೆಯೂ ಗುಬ್ಬಿಯೂ ... ... | ೧೪ |
| ೧೧ | ನಾಯಿಯ ಕಥೆ ... ... | ೧೫ |
| ೧೭ | ಕೋಳಿಯೂ ರತ್ನವೂ ... ... | ೨೩ |
| ೧೮ | ಇರುವೆಯೂ-ಚಿಮ್ಮಂಡಿ ಹುಳು ... ... | ೨೪ |
| ೨೭ | ಹಾವಾಡಿಗನೂ-ಹಾವೂ-ಇಲಿಯೂ ... ... | ೪೦ |
| ೨೮ | ಕಣಜ ಮತ್ತು ಜೇನು ಹುಳ ... ... | ೪೧ |
| ೨೯ | ನಾಯಿಯ ಸ್ನೇಹ ... ... | ೪೨ |
| ೩೨ | ಮೃಗಗಳು ರಾಜನನ್ನು ಗೊತ್ತುಮಾಡಿಕೊಂಡ ಬಗೆ ... | ೪೬ |
| ೩೫ | ಹುಡುಗನೂ ಗಿಣಿಯೂ ... ... | ೫೩ |
| ೩೬ | ಕೆಲಸದ ಹೆಂಗಸರೂ ಕೋಳಿಯೂ ... ... | ೫೩ |
| ೪೪ | ರಾಜನು ಜೇಡರ ಹುಳುವಿನಿಂದ ಬದುಕಿದುದು ... | ೬೬ |


### ಸಸ್ಯ ವಿಷಯವಾದ ಕಥೆಗಳು. Stories of Plant-life.


| | | |
|---|---|---|
| ೧೬ | ಮಾವಿನಗಿಡ-ಗೊಬ್ಬಳಿಗಿಡ ... ... | ೨೧ |
| ೨೧ | ರಾಗಿ ರಾಮಾಯಣ ... ... | ೩೦ |
| ೩೧ | ಕಬ್ಬೂ ತೆಂಗೂ ... ... | ೪೫ |
| ೪೧ | ಮರಗಳು ರಾಜನನ್ನು ಗೊತ್ತುಮಾಡಿಕೊಂಡುದು ... | ೬೧ |


### ಪುರಾಣ ಪ್ರಸಿದ್ಧವಾದ ಕಥೆಗಳು Puranic Tales and Legends.


| | | |
|---|---|---|
| ೧೫ | ಬಕಾಸುರನ ಕಥೆ ... ... | ೧೯ |
| ೧೯ | ಅಭಿಮನ್ಯುವಿನ ಕಥೆ ... ... | ೨೫ |

| ಕಥೆಗಳು. | | | | ಪುಟ ಸಂಖ್ಯೆ. |
|---|---|---|---|---|
| ೨೨ | ಉತ್ತರನ ಕಥೆ | ... | ... | ೩೨ |
| ೩೦ | ಧ್ರುವಚರಿತ್ರೆ | ... | ... | ೪೩ |
| ೩೮ | ಲವಕುಶರ ಕಾಳಗ | ... | ... | ೫೬ |

## ಹಬ್ಬ ಹಾಡಿಯುದ ಕಥೆಗಳು. Hindu Feasts.

| | | | | |
|---|---|---|---|---|
| ೩೩ | ವರಲಕ್ಷ್ಮೀ ಕಥೆ | ... | ... | ೫೦ |
| ೪೦ | ವಿನಾಯಕನ ಕಥೆ | ... | ... | ೫೯ |
| ೪೨ | ಬಲಿಚಕ್ರವರ್ತಿಯ ಕಥೆ | ... | ... | ೬೪ |
| ೪೫ | ಸಾವಿತ್ರಿಯ ಕಥೆ-೧ನೆಯ ಭಾಗ | ... | ... | ೬೭ |
| ೪೬ | ,, ೨ನೆಯ ಭಾಗ | ... | ... | ೬೮ |

## ಇತಿಹಾಸಗಳು. Historical Tales.

| | | | | |
|---|---|---|---|---|
| ೧೪ | ಚಿಕ್ಕದೇವರಾಜ ಒಡೆಯರು | ... | ... | ೧೭ |
| ೨೦ | ಶಿವಾಜಿ ಮಹಾರಾಜ | ... | ... | ೨೮ |
| ೨೩ | ವಿಜಯನಗರ | ... | ... | ೩೪ |
| ೩೯ | ಪಿಂಡಾರಿಯವರು | ... | ... | ೫೮ |
| ೪೩ | ಟೀಪುಸುಲ್ತಾನ್ | ... | ... | ೬೫ |
| ೪೭ | ಕಂಠೀರವ ನರಸರಾಜ ಒಡೆಯರವರು | ... | ... | ೭೦ |

## ಕಲ್ಪಿತ ಕಥೆಗಳು. Imaginary Tales.

| | | | | | |
|---|---|---|---|---|---|
| ೫ | ನಾಗವಲ್ಲಿಯು ಕಥೆ, | ೧ನೆಯ ಭಾಗ | ... | ... | ೪ |
| ೬ | ,, | ೨ ,, | ... | ... | ೫ |
| ೭ | ,, | ೩ ,, | ... | ... | ೭ |
| ೮ | ,, | ೪ ,, | ... | ... | ೯ |
| ೯ | ,, | ೫ ,, | ... | ... | ೧೨ |
| ೨೪ | ನಾಗಲೋಕ | ೧ನೆಯ ಭಾಗ | ... | ... | ೩೫ |
| ೨೫ | ,, | ೨ ,, | ... | ... | ೩೭ |
| ೨೬ | ,, | ೩ ,, | ... | ... | ೩೯ |
| ೪೯ | ಪುಷ್ಪಮಂಜರಿಯ ಕಥೆ | ೧ನೆಯ ಭಾಗ | ... | ... | ೭೩ |
| ೫೦ | ,, | ೨ ,, | ... | ... | ೭೫ |
| ೫೧ | ,, | ೩ ,, | ... | ... | ೭೧ |
| ೫೨ | ,, | ೪ ,, | ... | ... | ೭೯ |

## ಕಟ್ಟು ಕಥೆಗಳೇ ಮುಂತಾದುವು. Fables Etc.

| | | | | |
|---|---|---|---|---|
| ೧ | ಕಾಗಕ್ಕ ಗುಬ್ಬಕ್ಕ | ... | ... | ೧ |
| ೪ | ಮಂಕರೂ ಭೀರಯ್ಯೂ | ... | ... | ೩ |
| ೧೩ | ಸುಳ್ಳು ಹುಡುಗ | ... | ... | ೧೬ |
| ೩೪ | ಕಡುಬಿನ ಕಥೆ | ... | ... | ೫೧ |
| ೩೭ | ಶ್ರೀರಾಮನೂ ಚಂದ್ರನೂ | ... | ... | ೫೪ |

# ಕಥಾವಳಿ.

## ಪ್ರಥಮ ಭಾಗ.

### ಕಾಗಕ್ಕ ಗುಬ್ಬಕ್ಕ.

ಒಂದು ಮರದ ಕೊಂಬೆಯ ಮೇಲೆ ಒಂದು ಕಾಗೆಯೂ, ಒಂದು ಗುಬ್ಬಿಯೂ ಹತ್ತಿರ ಹತ್ತಿರ ಗೂಡುಗಳನ್ನು ಕಟ್ಟಿಕೊಂಡು ಇದ್ದುವು, ಒಂದುದಿನ ಗುಬ್ಬಿಗೆ ಬಲು ಹಸಿವಾಗಿದ್ದಿತು. ಕಾಗೆಯ ಗೂಡಿನಿಂದ ಒಳ್ಳೆಯ ದೋಸೆಯ ವಾಸನೆ ಬಂದಿತು. ಆಗ ಗುಬ್ಬಿಯು, ಕಾಗೆಯ ಗೂಡಿನ ಹತ್ತಿರಕ್ಕೆ ಬಂದು,- ಕಾಗಕ್ಕಾ, ಕಾಗಕ್ಕಾ, ಸ್ವಲ್ಪ ಬಾಗಿಲು ತೆಗೆ-ಎಂದಿತು. ಕಾಗಕ್ಕನು ದೋಸೆಯನ್ನು ತಿನ್ನುತ್ತಾ- ನನ್ನ ಕೂಸಿಗೆ ನೀರು ಹಾಕುತಿದ್ದೇನೆ, ಸ್ವಲ್ಪ ತಾಳು- ಎಂದಿತು. ಒಂದು ಗಳಿಗೆ ಬಿಟ್ಟು ಗುಬ್ಬಿಯು- ಕಾಗಕ್ಕಾ, ಕಾಗಕ್ಕಾ, ಸ್ವಲ್ಪ ಬಾಗಿಲು ತೆಗೆಯೇ-ಎಂದು ಮತ್ತೆ ಕೂಗಿತು. ಆಗ ಕಾಗಕ್ಕನು-ನನ್ನ ಕೂಸನ್ನು ಮಲಗಿಸುತ್ತಿದೇನೆ, ತಾಳಮ್ಮ ಎಂದಿತು.

ಹಸಿವನ್ನು ತಡೆಯಲಾರದೆ ಗುಬ್ಬಿಯು ಹಾರಿಹೋಗಿ ಎಲ್ಲಿಂದಲೋ ಹತ್ತು ಕಡಲೆಕಾಳುಗಳನ್ನು ತಂದು ಗೂಡಿನಲ್ಲಿಟ್ಟು, ಬಾಗಿಲನ್ನು ಹಾಕಿಕೊಂಡು, ಒಳಗೆ ಕಟುಂ, ಕುಟುಂ, ಎಂದು ತಿನ್ನುತ್ತಿದ್ದಿತು. ಈ ಸದ್ದನ್ನು ಕಾಗಕ್ಕನು ಕೇಳಿ, ಸಡಗರದಿಂದ ಬಂದು- ಎಲೆ ಗುಬ್ಬಕ್ಕಾ, ಗುಬ್ಬಕ್ಕಾ! ಅದೇನೆ ಕಟುಂ, ಕುಟುಂ, ಎಂದು ಅಷ್ಟು ಗಟ್ಟಿಯಾಗಿ ತಿನ್ನುತ್ತಿರುವುದು? ಬಾಗಿಲು ತೆಗೆಯೇ! ಎಂದಿತು. ಗುಬ್ಬಕ್ಕನು- ಅದು ಹುರಿಗಡಲೇ ಕಾಣೆ- ಎಂದು ಉತ್ತರವನ್ನು ಕೊಟ್ಟಿತು. ಕಾಗೆಯು- ನನಗೊಂದೆರಡು ಕೊಟ್ಟೀಯೇನೆ? ಎಂದು ಕೇಳಿತು. ಅದಕ್ಕೆ ಗುಬ್ಬಿಯು- ಊ! ನೀನು ದೋಸೆ ಕೊಟ್ಟಹಾಗೆ-ಎಂದಿತು.

## ೨. ಕೋತಿಯೂ ಬೆಕ್ಕಿನ ಮರಿಯೂ.

ಒಬ್ಬ ಹುಡುಗನು ಒಂದು ಕೋತಿಯನ್ನೂ ಒಂದು ಬೆಕ್ಕಿನ ಮರಿಯನ್ನೂ ಸಾಕುತ್ತಿದ್ದನು. ಆ ಕೋತಿಯು ಬೆಕ್ಕಿನ ಮರಿಯೊಂದಿಗೆ ಬಹಳ ಸ್ನೇಹವಾಗಿದ್ದಿತು.

ಒಂದು ದಿವಸ ಇವೆರಡೂ ಆಡುತ್ತಿರುವಾಗ ಕೋತಿಯು ಬೆಕ್ಕಿನ ಬಾಲವನ್ನು ಹಿಡಿದು ಎಳೆಯಿತು. ಬೆಕ್ಕಿಗೆ ಕೋಪಬಂದು ಕೋತಿಯನ್ನು ಪರಚಿತು. ಬೆಕ್ಕಿನ ಉಗುರು ಸಾಧಾರಣವಾಗಿ ಒಳಗೆ ಇರುವುದರಿಂದ ಬೆಕ್ಕಿಗೆ ಮೊನಚಾದ ಉಗುರುಗಳು ಇರುವುವೆಂದು ಕೋತಿಗೆ ತಿಳಿದೇ ಇರಲಿಲ್ಲ.

ಆದುದರಿಂದ ಕೋತಿಯು ಬೆಕ್ಕಿನ ಕಾಲುಗಳನ್ನು ಹಿಡಿದುಕೊಂಡು ಯಾವುದರಿಂದ ತನಗೆ ನೋವು ಆಯಿತೆಂದು ಚೆನ್ನಾಗಿ ನೋಡಿತು. ಆಗ ಒಳಗೆ ಸೆಳೆದುಕೊಂಡಿದ್ದ ಉಗುರುಗಳನ್ನು ಕಂಡುಹಿಡಿದು ಅವೇ ತನ್ನನ್ನು ಪರಚಿದುವೆಂದು ತಿಳಿದು ಒಂದೊಂದನ್ನಾಗಿ ಅವುಗಳನ್ನೆಲ್ಲಾ ಹಲ್ಲಿನಿಂದ ಸೆಳೆದು ಕಿತ್ತುಹಾಕಿತು.

ಅದು ಮೊದಲು ಬೆಕ್ಕು ಕೋತಿಯಮೇಲೆ ಬಿದ್ದು ಪರಚಿದಾಗೆಲ್ಲಾ ಕೋತಿಯು ಅದನ್ನು ಹಿಡಿದುಕೊಂಡು ಮತ್ತೆ ಮತ್ತೆ ಬೆಳೆದ ಉಗುರನ್ನು ಕಿತ್ತುಹಾಕುತಿದ್ದಿತು. ಇದರಿಂದ ಉಂಟಾದ ನೋವನ್ನು ತಡೆಯಲಾರದೆ ಬೆಕ್ಕು ಪರಚುವುದನ್ನು ಬಿಟ್ಟುಬಿಟ್ಟಿತು. ಕೋತಿಯು ಬೆಕ್ಕಿನ ಉಗುರು ಮುರಿದುಹಾಕುವುದನ್ನೂ ಬಿಟ್ಟುಬಿಟ್ಟಿತು.

---

## ೩. ಇಲಿಗಳ ಉಪಾಯ.

ಇಲಿಗಳಿಗೆ ಕೋಳಿಯ ಮೊಟ್ಟೆಗಳನ್ನು ಕಂಡರೆ ಬಹಳ ಆಶೆ. ಅವು ಮೊಟ್ಟೆಗಳಿರುವ ಸ್ಥಳವನ್ನು ಹುಡುಕಿ, ಅವನ್ನು ಬಹು ಉಪಾಯದಿಂದ ತಮ್ಮ ಬಿಲಕ್ಕೆ ಸಾಗಿಸಿ, ಅಲ್ಲಿ ತಿನ್ನುವುವು.

ಒಬ್ಬ ಒಕ್ಕಲಿಗನ ಮನೆಯಲ್ಲಿ ಇಪ್ಪತ್ತು ಮೂವತ್ತು ಕೋಳಿಗಳಿದ್ದುವು. ಅವು ಇಟ್ಟ ಮೊಟ್ಟೆಗಳನ್ನು ಅವನು ಬೆಳಗ್ಗೆ ಎಣಿಸಿಕೊಂಡು ಹೋಗಿ

ತಿರುಗಿ ರಾತ್ರಿ ಬಂದು ನೋಡುವಲ್ಲಿ ಕೆಲವು ಕಡಿಮೆಯಾಗಿರುತ್ತಿದ್ದುವು. ಈ ಕಳ್ಳತನವನ್ನು ಕಂಡು ಹಿಡಿಯಬೇಕೆಂದು ಒಂದುದಿನ ಆ ಒಕ್ಕಲಿಗನು ಸ್ವಲ್ಪ ಮರೆಯಾಗಿ ಅಲ್ಲಿಯೇ ಕಣ್ಣಿಟ್ಟು ನೋಡುತಿದ್ದನು.

ಸ್ವಲ್ಪ ಹೊತ್ತಿನಲ್ಲಿಯೆ, ಒಂದು ಇಲಿಯು ಬಂದು ಸುತ್ತು ಮುತ್ತೂ ನೋಡಿ, ಮೆಲ್ಲನೆ ಮೊಟ್ಟೆಗಳ ಹತ್ತಿರಕ್ಕೆ ಹೋಗಿ, ಹಿಂದಿರುಗಿ ಬುಡು ಬುಡನೆ ಓಡಿ ಬಿಲವನ್ನು ಸೇರಿತು. ಆಮೇಲೆ ಮೂರು ನಾಲ್ಕು ಇಲಿಗಳು ಒಟ್ಟಿಗೆ ಬಂದುವು.

ಒಂದು ಇಲಿಯು ಮೆತ್ತಗೆ ಒಂದು ಮೊಟ್ಟೆಯ ಹತ್ತಿರ ಹೋಗಿ ಮಲಗಿಕೊಂಡು ತನ್ನ ಬಾಲವನ್ನು ಆ ಮೊಟ್ಟೆಯ ಸುತ್ತಲೂ ಬೀಸಿತು. ಆಮೇಲೆ, ಮೊಟ್ಟೆಯ ಸುತ್ತೂ ಬಂದಿದ್ದ ತನ್ನ ಬಾಲದ ತುದಿಯನ್ನು ಬಾಯಿಯಿಂದ ಕಚ್ಚಿಕೊಂಡಿತು. ಆ ಬಳಿಕ ಉಳಿದ ಇಲಿಗಳು ಮೊಟ್ಟೆಯೊಡನೆ ಇದ್ದ ಆ ಇಲಿಯ ಕುತ್ತಿಗೆಯನ್ನು ಕಚ್ಚಿಕೊಂಡು ಹೊರಟುವು. ಹೀಗೆ ಮೊಟ್ಟೆಯು ಸುಲಭವಾಗಿ ಬಿಲಕ್ಕೆ ಸಾಗಿಹೋಗುತಿದ್ದಿತು.

ಅದನ್ನು ನೋಡಿ ಒಕ್ಕಲಿಗನು–ಓಹೋ! ಕಳ್ಳರು ಸಿಕ್ಕಿದರು! ಕಳ್ಳರು ಸಿಕ್ಕಿದರು! ಎಂದು ಎದ್ದು ಚಪ್ಪಾಳೆಯನ್ನು ತಟ್ಟಿದನು. ಕೂಡಲೆ ಮೊಟ್ಟೆಯನ್ನು ಅಲ್ಲಿಯೇ ಬಿಟ್ಟು ಇಲಿಗಳೆಲ್ಲಾ ಓಡಿಹೋದುವು.

---

## ೪. ಮಂಕರೂ–ಭೇರಿಯೂ.

ಒಂದು ರಾತ್ರಿ ಹಾಲು ಚೆಲ್ಲಿದಹಾಗೆ ಬೆಳದಿಂಗಳು ಬಂದಿತು. ಆ ರಾತ್ರಿ ಇಬ್ಬರು ಮಂಕರು ಜತೆಯಾಗಿ ಎಲ್ಲೋ ಹೋಗುತಿದ್ದರು. ಅವರಿಗೆ ಇದಿರಾಗಿ ಒಂದು ಮೆರವಣಿಗೆ ಬರುತಿದ್ದಿತು. ಅದರ ಮುಂದುಗಡೆಯಲ್ಲಿ ಭೇರಿಯನ್ನು ಬಾರಿಸುತ ಒಬ್ಬನು ಬರುತಿದ್ದನು. ಈ ಇಬ್ಬರು ಮಂಕರೂ ಆ ಭೇರಿಯ ಶಬ್ದವನ್ನು ಕೇಳಿ ಅದನ್ನೇ ನೋಡುತ್ತ ನಿಂತರು. ಭೇರಿಯನ್ನು ಗಟ್ಟಿಯಾಗಿ ಬಾರಿಸಿದಹಾಗೆಲ್ಲಾ ಶಬ್ದವು ಹೆಚ್ಚಾಗಿ ಆಗುತಿದ್ದಿತು.

ಆ ಇಬ್ಬರು ಮಂಕರೂ ಆ ದೊಡ್ಡ ಭೇರಿಯೊಳಗೆ ಯಾರೋ ಇರುವರೆಂದೂ ಗಟ್ಟಿಯಾಗಿ ಹೊಡೆದ ಹಾಗೆಲ್ಲಾ ಅವರು ಕೂಗಿಕೊಳ್ಳುವರೆಂದೂ ತಿಳಿದುಕೊಂಡರು. ತರುವಾಯ ಹೇಗಾದರೂ ಮಾಡಿ ಅದರ ಒಳಗೆ ಇರುವವರನ್ನು ಬಿಡಿಸಬೇಕೆಂದು ಎಣಿಸಿ ಅವರಿಬ್ಬರೂ ಆ ಮೆರವಣಿಗೆಯ ಜತೆಯಲ್ಲಿಯೇ ಹೊರಟರು.

ಸ್ವಲ್ಪದೂರ ಹೋದಮೇಲೆ, ಭೇರಿಯವನು ಹುಲ್ಲು ಕಸ ಕಡ್ಡಿಯನು ಹಚ್ಚಿ, ಭೇರಿಯನ್ನು ಕಾಯಿಸಲಿಕ್ಕೆ ಇಳಿಸಿ, ದೀಪದ ಕಡ್ಡಿಯನ್ನು ತರಲಿಕ್ಕೆ ಸ್ವಲ್ಪ ಹಿಂದಕ್ಕೆ ಹೋದನು.

ಅದೇ ಸರಿಯಾದ ಸಮಯವೆಂದು ಆ ಮಂಕರು ಒಂದೊಂದು ಕಡೆಯ ಚರ್ಮವನ್ನು ಒಬ್ಬೊಬ್ಬನು ಹರಿದು ಹಾಕಿ ಒಳಗೆ ಕೈ ನೀಡಿ ಯಾರು ಇರುವರೆಂದು ತಡಕಾಡುತಿದ್ದರು. ಅಲ್ಲಿ ಒಬ್ಬನ ಕೈ ಇನ್ನೊಬ್ಬನಿಗೆ ಸಿಕ್ಕಲು, ನನ್ನ ಕೈಗೆ ಸಿಕ್ಕಿದನೆಂದು ಒಬ್ಬ ಮಂಕನೂ, ತನ್ನ ಕೈಗೆ ಸಿಕ್ಕಿದನೆಂದು ಮತ್ತೊಬ್ಬ ಮಂಕನೂ ಕೂಗಿಕೊಳ್ಳುತಿದ್ದರು.

ಅಷ್ಟರಲ್ಲಿಯೆ ಭೇರಿಯನ್ನು ಬಾರಿಸುವವನು ಬಂದು ನೋಡಿ ಕೋಪಗೊಂಡು, ಇವನಿಗೆ ಒಂದು ಏಟು ಅವನಿಗೆ ಒಂದು ಏಟು ಕೊಟ್ಟು ಇಬ್ಬರನ್ನೂ ಓಡಿಸಿದನು.

---

## ೫. ನಾಗವಲ್ಲಿಯ ಕಥೆ—(೧ನೆಯ ಭಾಗ.)

ನಾಗವಲ್ಲಿಯು ನಕುಲರಾಯನೆಂಬ ಒಬ್ಬ ದೊರೆಯ ಒಬ್ಬಳೇ ಮಗಳು. ಇವಳು ಒಂದು ದಿನ ಸಾಯಂಕಾಲ ತನ್ನ ಜತೆಗಾತಿಯರೊಡನೆ ಊರಿಗೆ ಹತ್ತಿರದಲ್ಲಿದ್ದ ಒಂದು ಉದ್ಯಾನವನಕ್ಕೆ ಹೋಗಿ ಹೂಗಳನ್ನು ಕೊಯ್ಯುತ್ತಿರಲು, ಎಲ್ಲೋ ದೂರದಲ್ಲಿ ಒಂದು ನವಿಲು ಕೇಗುಹಾಕಿದಂತೆ ಕೇಳಬಂದಿತು. ಒಡನೆಯೆ ಸುತ್ತಲೂ ನೋಡಿದಳು. ಹತ್ತಿರದಲ್ಲಿಯೆ ಕಾಮನ ಬಿಲ್ಲಿನಂತೆ ಗರಿಯನ್ನು ಎತ್ತಿಕೊಂಡು ಆಡುತಿದ್ದ ಬಹು ಸುಂದರವಾದ ಒಂದು ನವಿಲನ್ನು ಕಂಡಳು.

ಆ ನವಿಲನ್ನು ಹಿಡಿಯಬೇಕೆಂದು ನಾಗವಲ್ಲಿಯು ತನ್ನ ಜತೆಗಾತಿಯರೊಡನೆ ಓಡಿದಳು. ಆ ನವಿಲು, ನಾಗವಲ್ಲಿಯ ಕೈಗೆ ಸಿಕ್ಕಿಯೂ ಸಿಕ್ಕದಹಾಗೆ ಓಡುತ್ತಾ ಕಾಡಿಗೆ ನುಗ್ಗಿತು. ಅಷ್ಟು ಹೊತ್ತಿಗೆ ಸ್ವಲ್ಪ ಕತ್ತಲಾದುದರಿಂದ ಜತೆಗಾತಿಯರು ಮುಂದೆ ಹೋಗದೆ ಅಲ್ಲಲ್ಲಿಯೇ ನಿಂತು ನಾಗವಲ್ಲಿಯನ್ನು ಹಿಂದಿರುಗೆಂದು ಕೂಗುತಿದ್ದರು. ನಾಗವಲ್ಲಿಯು ಮಾತ್ರ ಎಷ್ಟು ಹೊತ್ತಾದರೂ ಆ ನವಿಲನ್ನು ಹಿಡಿದುಕೊಂಡೇ ಬರುವೆನೆಂದು ಕಾಡಿಗೆ ನುಗ್ಗಿದಳು.

ಆ ವೇಳೆಗೆ ಚೆನ್ನಾಗಿ ಕತ್ತಲಾಯಿತು. ನವಿಲ ಧ್ವನಿಯು ಕೇಳಬರುತಿದ್ದಿತೇ ಹೊರತು ನವಿಲು ಬೇರೆ ಕಣ್ಣಿಗೆ ಕಾಣಿಸುತಿರಲಿಲ್ಲ. ಅದರ ಧ್ವನಿಯನ್ನೇ ಹಿಡಿದು ಮುಂದೆ ಮುಂದೆ ಹೋಗುವಲ್ಲಿ ಕಾಡು ನಿಬಿಡವಾಗುತ ಬಂದಿತು. ಎಲ್ಲೆಲ್ಲೂ ಗಿಡ, ಇದರಮೇಲೆ ಗಾಢಾಂಧಕಾರ, ದಾರಿಯೇ ತೋರದು. ಮುಂದೆ ನಾಗವಲ್ಲಿಯು ಏನು ಮಾಡಬೇಕು ? ಏನುಮಾಡುವುದಕ್ಕೂ ತೋರದೆ ಗಟ್ಟಿಯಾಗಿ ಅಳುವುದಕ್ಕೆ ಮೊದಲು ಮಾಡಿದಳು. ಕಾಡಿನಲ್ಲಿ ಅತ್ತರೆ ಕೇಳುವವರು ಯಾರು ? ಅತ್ತು ಅತ್ತು ಸಾಕಾಯಿತು. ಮತ್ತೆ ದಾರಿ ಹುಡುಕಿದಳು. ದಾರಿ ಹುಡುಕಿ ತಡಿಕಿ ಸಾಕಾಯಿತು. ಕೈಕಾಲುಗಳೆಲ್ಲಾ ಮುಳ್ಳು ಮುರಿದು ಹಜ್ಜೆ ಇಡಲು ಆಗದೆ ಹೋಯಿತು. ನಿಂತ ಕಡೆಯೆ ನೆಲಕ್ಕೆ ಬಿದ್ದುಬಿಟ್ಟಳು.

## ೬. ನಾಗವಲ್ಲಿಯ ಕಥೆ—(೨ ನೆಯ ಭಾಗ.)

ಕಾಡಿನಲ್ಲಿ ಬಿದ್ದ ಹಾಗೆಯೇ ನಾಗವಲ್ಲಿಗೆ ನಿದ್ದೆ ಬಂದಿತು. ನಿದ್ದೆಯಲ್ಲಿದ್ದಾಗ ಅವಳು ಒಂದು ಕನಸು ಕಂಡಳು. ಕನಸಿನಲ್ಲಿ ತಾನು ಮಲಗಿರುವ ಸ್ಥಳಕ್ಕೆ ಸಮೀಪದಲ್ಲಿಯೆ ಒಂದು ದೊಡ್ಡ ಹುತ್ತ ಇರುವಂತೆಯೂ, ಆ ಹುತ್ತದಲ್ಲಿ ಬಹು ಸುಂದರನಾದ ಒಬ್ಬ ದೊರೆ ಮಗನು ಇರುವಂತೆಯೂ, ಆ ದೊರೆ ಮಗನ ಸಹಾಯದಿಂದ ತಾನು ತನ್ನ ಮನೆಯನ್ನು ಸೇರಿದಂತೆಯೂ, ಆ ದೊರೆ ಮಗನು ಎಲ್ಲೋ ಬೇಗ ಮಾಯವಾದಂತೆಯೂ ಆಗಿ ಅವಳಿಗೆ ಎಚ್ಚರವಾಯಿತು.

ಕಣ್ಣು ಬಿಟ್ಟು ನೋಡಲು ಮರುದಿನ ಸೂರ್ಯನು ಪಶ್ಚಿಮದಿಕ್ಕಿನಲ್ಲಿ ಸೌಮ್ಯವಾಗಿ ಕಾಣುತ್ತಿದ್ದನು. ಅವಳು ಆಯಾಸದಿಂದ, ಎಷ್ಟೊಂದುಹೊತ್ತು ಮೈ ಮರೆತು ಮಲಗಿರಬಹುದು! ನೀವೇಯೋಚಿಸಿ. ಎಚ್ಚರಗೊಂಡಮೇಲೆ ತಿರುಗಿ ಶ್ರಮವು ತೋರುವುದಕ್ಕೆ ಮೊದಲಾಯಿತು. ತಡೆಯಲಾರದಷ್ಟು ಹಸಿವು, ಬಾಯಾರಿಕೆ. ಎಲ್ಲಾದರೂ ಹೋಗಿ ಅಲ್ಲಲ್ಲಿ ಉದುರಿರುವ ಹಣ್ಣು ನ್ನಾದರೂ ತಿನ್ನಬೇಕೆಂದರೆ ಹಜ್ಜೆ ಇಡುವುದಕ್ಕೆ ಆಗದು. ಆದರೂ ಅವಳು ಹಾಗೆಯೆ ಸ್ವಲ್ಪ ಚೇತರಿಸಿಕೊಂಡು ಮೆಲ್ಲಮೆಲ್ಲನೆ ಹೊರಟಳು.

ಅಷ್ಟರಲ್ಲಿಯೇ ಸೂರ್ಯನು ಮುಳುಗಿದನು. ಕತ್ತಲೂ ಆಯಿತು. ಹುಲಿಗಳ ಆರ್ಭಟ, ನರಿಯ ಕೂಗು, ಹೆದರಿಕೆ. ಹಾಗೆಯೆ ಅವಳು ಮುಂದೆ ಮುಂದೆ ಹೋಗುತ್ತಿರಲು, ನಕ್ಷತ್ರಗಳಂತೆ ಥಳಥಳಿಸುವ ಮಿಣಕು ಹುಳುಗ ಗಳಿಂದ ಬೆಳಕಾಗಿದ್ದ ಒಂದು ಪ್ರದೇಶವು ಕಾಣಬಂದಿತು. ಅಲ್ಲಿಗೆ ಹೋಗಿ ನೋಡಿದಳು. ಅಲ್ಲಿ ಒಂದು ದೊಡ್ಡ ಹುತ್ತವು ಇದ್ದಿತು. ಹುತ್ತವನ್ನು ನೋಡಿದೊಡನೆ ತನ್ನ ಸ್ವಪ್ನವು ಜ್ಞಾಪಕಕ್ಕೆ ಬಂದಿತು. 'ಇದೇನು! ಆಶ್ಚ ರ್ಯವಾಗಿರುವುದು. ಒಳ್ಳೆಯದು! ಈ ಹುತ್ತದಲ್ಲಿ ಯಾವ ರಾಜಕುಮಾ ರನಾದರೂ ಇರುತ್ತಾನೆಯೋ ನೋಡೋಣ' ಎಂದು, ಆ ಹುತ್ತದ ಹತ್ತಿರ ಹೋಗಿ; 'ಹಾ! ದೈವವೆ! ಮುದುಕರಾದ ತಂದೆ ತಾಯಿಗಳನ್ನು ಬಿಟ್ಟು ನನ್ನ ಇಷ್ಟಜನರಿಂದ ಅಗಲಿ ಕಾಡುಪಾಲಾಗಿ ಹಸಿದು ಬಾಯಾರಿಕೆ ಸಂಕಟ ಪಡುತ್ತಾ, ದುಷ್ಟ ಮೃಗಗಳ ಬಾಯಿಗೆ ತುತ್ತಾಗಿರುವ ನನ್ನನ್ನು ಕಾಪಾ ಡುವ ಮಹಾತ್ಮರು ಯಾರಾದರೂ ಇಲ್ಲಿ ಇರುವರೆ?' ಎಂದು ಬೇಡಿದಳು. ಕೂಡಲೆ ಆ ಹುತ್ತದೊಳಗಿನಿಂದ ಒಂದು ಧ್ವನಿಯು ಕೇಳಿಸಿತು.

ಆ ಧ್ವನಿಯನ್ನು ಕಿವಿಗೊಟ್ಟು ಕೇಳಿ, "ಏನು! ನಾನು ನಾಗರಾಜನ ಮಗನು. ಭೂಲೋಕವನ್ನು ನೋಡುವುದಕ್ಕೆ ಬಂದಿರುವೆನು. ನೀನು ನನ್ನನ್ನು ಮದುವೆಯಾಗುವುದಾದರೆ ನಾನು ನಿನಗೆ ಸಹಾಯ ಮಾಡು ವೆನು" ಎಂದೋ, ಚೆನ್ನಾಯಿತು? ಈ ಹುತ್ತದಲ್ಲಿ ಹಾವಿರುವುದೋ ಚೇಳೇ ಇರುವುದೋ? ಕಂಡವರಾರು? ನಾನೇನುಮಾಡಲಿ? ಕಾಣದವರನನ್ನು ನಾನು ಮದುವೆಯಾಗುವುದು ಹೇಗೆ? ಅಯ್ಯೋ? ಈಸಲಹೆಗೆ ಒಪ್ಪದಿದ್ದರೆ ನಾನು ಭಯಂಕರವಾದ ಈ ಕಾಡನ್ನು ಬಿಟ್ಟು ಊರು ಸೇರುವ ಬಗೆ ಹೇಗೆ?

ದೇವರಚಿತ್ತದಲ್ಲಿ ಇದ್ದುದು ಆಗಲಿ. ಈ ಸಲಹೆಗೆ ನಾನು ಒಪ್ಪಿಕೊಳ್ಳುವುದು ಉತ್ತಮ ” ಎಂದು ಯೋಚಿಸಿ ‘ ಎಲೈ! ಮಹಾತ್ಮನೆ! ನಾನು ನಿನ್ನ ಸಲಹೆಗೆ ಒಪ್ಪುವೆನು. ನನ್ನನು ಹೇಗಾದರೂ ಕಾಪಾಡು ’ ಎಂದಳು. ಅದಕ್ಕೆ, ಹುತ್ತದೊಳಗಿನಿಂದ ‘ ಹಾಗಾದರೆ ನೀನು ಈಗ ಊರಿಗೆ ಹೋಗಿ ಒಂದು ಭಂಗಾರದ ಕತ್ತಿಯನ್ನು ತಂದು ಈ ಹುತ್ತವನ್ನು ಸೀಳು. ನಾನು ಎದ್ದು ಬಂದು ನಿನ್ನನ್ನು ಮದುವೆಯಾಗುವೆನು ನಿನ್ನನು ಇಲ್ಲಿಗೆ ಕರೆತಂದ ಆ ನವಿಲೇ ಈಗ ನಿನಗೆ ದಾರಿಯನ್ನು ತೋರಿಸುವುದು , ಎಂದು ಕೇಳಿಸಿತು. ಇಷ್ಟರಲ್ಲಿಯೇ ಆ ಮಯೂರವು ಧ್ವನಿ ಮಾಡಿತು. ಆಧ್ವನಿಯನ್ನೇ ಹಿಡಿದು ಹೊರಟಳು. ಬೇಗನೆ ಊರು ಸಿಕ್ಕಿತು.

---

## ೭. ನಾಗವಲ್ಲಿಯ ಕಥೆ—೩ನೆಯ ಭಾಗ.

ಇತ್ತಲಾಗಿ ಕಾಡಿನಲ್ಲಿ ನಾಗವಲ್ಲಿಯು ದಾರಿತಪ್ಪಿ ಹೋಗಿರುವಳೆಂದು ರಾಯನು ತಿಳಿದು, ಬೇಟೆಗಾರರನ್ನು ಕರೆಯಿಸಿ. ಕಾಡನ್ನೆಲ್ಲಾ ಚೆನ್ನಾಗಿ ಹುಡುಕಿ, ನಾಗವಲ್ಲಿಯನ್ನು ಕರೆತರಬೇಕೆಂದು ಹೇಳಿ ಕಳುಹಿಸಿದನು. ಒಂದೆರಡು ದಿನಗಳಾದರೂ ಇನ್ನೂ ಹಿಂದಿರುಗಿ ಯಾರೂ ಬರಲಿಲ್ಲವೆಂದು ಯೋಚಿಸುತ್ತ ಕುಳಿತಿದ್ದಾಗ ನಾಗವಲ್ಲಿಯೇ ಬಂದುಸೇರಿದಳು. ಆಗ ರಾಯನು ಮಗಳನ್ನು ಮುದ್ದಿಟ್ಟು ಅವಳು ಬಂದ ವರ್ತಮಾನವನ್ನು ಸಂತೋಷದಿಂದ ಪುರಜನರೆಲ್ಲರಿಗೂ ತಿಳಿಸಿದನು.

ತರುವಾಯ ನಾಗವಲ್ಲಿಯು, ತಾನು ಕಾಡನ್ನು ಹೊಕ್ಕ ಮೊದಲು ಹಿಂದಿರುಗಿಬಂದ ವರೆಗೂ ನಡೆದುದನ್ನೆಲ್ಲಾ ತನ್ನ ತಂದೆ ತಾಯಿಗಳಮುಂದೆ ಹೇಳಿ ಬಹು ದುಃಖದಿಂದ ಕೊನೆಗೆ ‘ ಅಪ್ಪಾಜಿ, ನಾನು ಇಲ್ಲಿ ಇನ್ನು ನಿಲ್ಲುವುದಕ್ಕೆ ಇಲ್ಲ. ನನಗೆ ಒಂದು ಭಂಗಾರದ ಕತ್ತಿಯನ್ನು ತರಿಸಿಕೊಡಿ.ನಾನು ಹೋಗಿ ಬರುವೆನು , ಎಂದಳು ಆಗ ದೊರೆಯು ತನ್ನ ಒಬ್ಬಳೇ ಮಗಳನ್ನು ಕಾಡುಪಾಲು ಮಾಡಲಾರದೆ ಬಹಳವಾಗಿ ಚಿಂತಿಸಿ, ಮಗಳನ್ನೂ ಹೆಂಡತಿಯನ್ನೂ ಸಮಾಧಾನಪಡಿಸಿ, ಮಂತ್ರಿಗೆ ಹೇಳಿ ಕಳುಹಿಸಿದನು. ಮಂತ್ರಿಯು ಒಡನೆಯೆ ಬಂದನು. ರಾಯನು ಮಂತ್ರಿಗೆ ಎಲ್ಲವನ್ನೂ ತಿಳಿಸಿದನು. ಆಗ

ಮಂತ್ರಿಯು ಬಹಳವಾಗಿ ಯೋಚಿಸಿ, ಕೊನೆಗೆ, ಆವೂರಿನಲ್ಲಿ ಚೆಲುವಿಯೆಂದು ಹೆಸರುಗೊಂಡಿದ್ದ ಒಬ್ಬಳನ್ನು ಭಂಗಾರದ ಕತ್ತಿಯೊಡನೆಹುತ್ತದ ಬಳಿಗೆ ಕಳುಹಿಸುವುದೆಂದೂ, ನಾಗವಲ್ಲಿಯನ್ನು ಮನೆಯಲ್ಲಿಯೆ ಇಟ್ಟುಕೊಳ್ಳುವು ದೆಂದೂ,ಒಂದು ಉಪಾಯುವನ್ನು ಹುಡುಕಿಹೇಳಿದನು.ದೊರೆಯೂಒಪ್ಪಿದನು.

ಮರುದಿನ ರಾಯನು ಆ ಸುಂದರಿಯನ್ನು ಕರೆಯಿಸಿ ಅವಳಿಗೆ ಬೇಕಾ ದುದನ್ನು ಕೊಟ್ಟು, ಚಿನ್ನದ ಕತ್ತಿಯೊಡನೆ ಹುತ್ತದ ಬಳಿಗೆಕಳುಹಿಸಿದನು. ಅವಳು ಆ ಹುತ್ತವನ್ನು ಕತ್ತಿಯಿಂದ ಒಂದು ದಿನವೆಲ್ಲಾ ಸೀಳಿದರೂ ಅದು ಸೀಳಲಿಲ್ಲ. ಮರು ದಿನ ಬೆಳಕು ಹರಿವಹೊತ್ತಿನಲ್ಲಿ ' ಈಗ ಎಷ್ಟು ಹೊತ್ತಾ ಗಿರುವುದು ? ' ಎಂಬ ಧ್ವನಿಯು ಹುತ್ತದಿಂದ ಬಂದಿತು. ಆದಕ್ಕೆ, ಅವಳು ಈಗ ಏರುಕಟ್ಟುವ ಹೊತ್ತು ' ಎಂದಳು. ' ಓಹೋ ! ನೀನು ದೊರೆಯುಮ ಗಳಲ್ಲ; ನೀನು ರೈತನ ಮಗಳು. ನೀನು ಹೋಗಿ ದೊರೆಮಗಳನ್ನು ಕಳು ಹಿಸು ' ಎಂದು ಅವಳಿಗೆ ಕೇಳಿಸಿತು. ಅವಳು ನಿಜವಾಗಿಯೂ ರೈತನಮಗ ಳೇ. ಅವಳು ಹಿಂದಿರುಗಿ ಬಂದು ಅಲ್ಲಿ ನಡೆದುದನ್ನೆಲ್ಲಾ ದೊರೆಗೆತಿಳಿಸಿದಳು.

ದೊರೆಯೂ ಮಂತ್ರಿಯೂ ಮೂರನೆಯ ದಿನ ಅವಳಿಗಿಂತಲೂ ಸುಂದ ರಿಯಾಗಿದ್ದ ಒಬ್ಬ ಗಾಣಗಿತ್ತಿಯನ್ನು ಕಳುಹಿಸಿದರು. ಆ ಗಾಣಗಿತ್ತಿಯು ಹುತ್ತವನ್ನು ಒಂದು ದಿನವೆಲ್ಲಾ ಸೀಳಲು ಕಷ್ಟಪಟ್ಟಳು, ಆದರೂ ಪ್ರಯೋ ಜನವಾಗಲಿಲ್ಲ. ಅವಳಿಗೂ, ' ಎಷ್ಟು ಹೊತ್ತಾಗಿರುವುದು ? ' ಎಂಬ ಧ್ವನಿಯು ಕೇಳಿಸಿತು. ಅವಳು ' ಗಾಣಕಟ್ಟುವ ಹೊತ್ತಿರಬಹುದು ' ಎಂದಳು. ಅದಕ್ಕೆ ಹುತ್ತದಿಂದ ' ಛೆ ! ಹೋಗು ; ನೀನು ಗಾಣಗಿತ್ತಿ. ದೊರೆಯ ಮಗಳು ಬಾರದೆ ಇದ್ದರೆ ಇನ್ನುಸ್ವಲ್ಪ ಕಾಲದಲ್ಲಿಯೆ ಪಟ್ಟಣವೆಲ್ಲಾ ನಾಶವಾಗುವುದೆಂದು ಹೇಳು' ಎಂಬ ಧ್ವನಿಯು ಕೇಳಿಸಿತು. ಒಡನೆಯೆ ಅವಳು ಹಿಂದಿರುಗಿ ಬಂದು ರಾಜನಿಗೂ ಮಂತ್ರಿಗೂ ಆ ಸಂಗತಿಯನ್ನುತಿಳಿಸಿದಳು.

ಆಗ ದೊರೆಯು ತನ್ನ ಮಗಳನ್ನೇ ಕಳುಹಿಸಬೇಕಾಗಿ ಬಂದಿತು. ಒಬ್ಬಳೇ ಮಗಳು, ಇವಳನ್ನು ಹೇಗೆ ಕಳುಹಿಸುವುದೆಂದು, ಯೋಚಿಸುತ್ತ ಕುಳಿತಿದ್ದಾಗ, ನಾಗವಲ್ಲಿಯು ಬಂದು ತಂದೆಗೆ ನಮಸ್ಕರಿಸಿ 'ನನ್ನೊಬ್ಬಳಿ ಗೋಸ್ಕರ ಪಟ್ಟಣವು ನಾಶವಾಗುವುದು ಸರಿಯಲ್ಲ. ನನಗೆ ಅಪ್ಪಣೆಯನ್ನು ಕೊಡಿ, ನಾನು ಹೋಗಿ ಬರುವೆನು, " ಎಂದು ಬೇಡಿಕೊಂಡಳು.

ಆ ಮೂರನೆಯ ದಿನ ನಾಗವಲ್ಲಿಯೇ ಹೊರಟಳು. ಪಟ್ಟಣದ ಜನರೆಲ್ಲರೂ ಗೋಳಿಟ್ಟರು. ಅರಮನೆಯಲ್ಲಿದ್ದವರ ದುಃಖವನ್ನಂತೂ ಹೇಳುವುದಕ್ಕೆ ಅಸಾಧ್ಯವು. ಆ ದಿನ ನಗಾರಿ ನೌಪತ್ತು ಆಗಲಿಲ್ಲ. ಊರಿನಲ್ಲಿ ಎಲ್ಲೆಲ್ಲಿ ನೋಡಿದರೂ ಜನರ ಗುಂಪು, ಪಿಸಿಪಿಸಿ ಮಾತು, ಜನರ ರೋದನಧ್ವನಿ, ಈ ರೀತಿಯಲ್ಲಿದ್ದಿತು. ನಾಗವಲ್ಲಿಯು ತನ್ನ ಜತೆಯಲ್ಲಿ ಬರುತ್ತಿದ್ದ ಜನರನ್ನೆಲ್ಲಾ ಸಮಾಧಾನಗೊಳಿಸಿ, ಹಿಂದಕ್ಕೆ ಕಳುಹಿಸಿ, ತಾನೊಬ್ಬಳೇ ಆ ಹುತ್ತವಿದ್ದಲ್ಲಿಗೆ ಹೊರಟಳು.

---

## ೮. ನಾಗವಲ್ಲಿಯ ಕಥೆ.—(೪ ನೆಯ ಭಾಗ)

ನಾಗವಲ್ಲಿಯು, ತನ್ನ ಜನರನ್ನೆಲ್ಲಾ ಕಳುಹಿಸಿ, ಹೊರಟು ಸ್ವಲ್ಪ ಹೊತ್ತಿನಲ್ಲಿಯೇ ಹುತ್ತವನ್ನು ಸೇರಿದಳು. ಅದನ್ನು ಸೀಳುವುದಕ್ಕೆ ಮುಂದೆ, ದೇವರನ್ನು ಪ್ರಾರ್ಥಿಸಿ, ಹುತ್ತಕ್ಕೆ ಪ್ರದಕ್ಷಿಣೆಮಾಡಿ, ಭಂಗಾರದ ಕತ್ತಿಯಿಂದ ಅದನ್ನು ಸೀಳಿದಳು. ಹುತ್ತವು ಎರಡು ಪಾಲಾಯಿತು. ಆಗ ಥಳಥಳಿಸುವ ರತ್ನದ ಕವಚವನ್ನು ತೊಟ್ಟು, ವಜ್ರದ ಕಿರೀಟವನ್ನು ಇಟ್ಟು, ಅಗ್ನಿಯಂತೆ ಪ್ರಕಾಶಿಸುವ ನಾಗರಾಜ ಕುಮಾರನು ಈಚೆಗೆ ಬಂದು, ಅವಳ ಕೈಯನ್ನು ಹಿಡಿದುಕೊಂಡು, 'ಪ್ರಿಯೆ! ನನ್ನೊಡನೆ ನಡೆ' ಎಂದನು.

ನಾಗವಲ್ಲಿಯು ತನಗೆ ತಕ್ಕ ಗಂಡನು ಸಿಕ್ಕಿದುದಕ್ಕಾಗಿ ಬಹಳ ಸಂತೋಷಗೊಂಡು, ನನ್ನ ತಂದೆ ತಾಯಿಗಳೂ ಇಷ್ಟಜನರೂ ನನ್ನನ್ನು ಅಗಲಿ ಬಹಳವಾಗಿ ಚಿಂತಿಸುತ್ತಿರುವರು. ನನಗೆ ಲಭಿಸಿರುವ ಪುಣ್ಯವಿಶೇಷವನ್ನು ಎಲ್ಲರಿಗೂ ತಿಳಿಸಿ ಅವರ ಮನಸ್ಸನ್ನು ಸಂತೋಷಪಡಿಸಿ ಬರುವುದಕ್ಕೆ ಅಪ್ಪಣೆಯನ್ನು ಕೊಡಬೇಕು ಎಂದು ಪ್ರಾರ್ಥಿಸಿದಳು. ಅದಕ್ಕೆ ನಾಗರಾಜ ಕುಮಾರನು ಒಪ್ಪಿ 'ನಾನು ಇಲ್ಲಿ ಬಹಳ ಕಾಲ ನಿಲ್ಲುವುದಕ್ಕೆ ಇಲ್ಲ. ನೀನು ಊರಿಗೆ ಹೋಗಿ, ನಿಮ್ಮ ತಂದೆ ತಾಯಿಗಳೊಡನೆ ಮೂರುಗಳಿಗೆ ಎಂದರೆ ಮೂರೇಗಳಿಗೆ ಇದ್ದು, ಹೊರಟು ಬಾ,' ಎಂದು ಹೇಳಿ ಕಳುಹಿಸಿದನು.

ನಾಗವಲ್ಲಿಯು ಹಿಂದಿರುಗಿ ಬಂದು ತನ್ನ ತಂದೆ ತಾಯಿಗಳನ್ನು ಸಂತೋಷಪಡಿಸಿ ಹೋಗುವುದರಲ್ಲಿ ಒಂದು ಗಳಿಗೆ ಹೆಚ್ಚಾದುದರಿಂದ, ತನ್ನ ಪ್ರಿಯನಿದ್ದೆಡೆಗೆ ಓಡಿ ಓಡಿ ಹೋದಳು.

ಅಲ್ಲಿ ರಾಜಕುಮಾರನೇ ಇರಲಿಲ್ಲ. ತಾನು ಸ್ವಲ್ಪ ಹೊತ್ತಾಗಿ ಬಂದುದರಿಂದ ರಾಜಕುಮಾರನು ಮಾಯವಾದನೆಂದು ಚಿಂತಿಸಿ, ಅವನನ್ನು ಹುಡುಕಿಕೊಂಡು ಕಾಡಿನಲ್ಲಿಯೇ ಹೊರಟಳು. ಗೆಡ್ಡೆ ಗೆಣಸುಗಳನ್ನು ತಿಂದು ಪ್ರಾಣವನ್ನುಳಿಸಿಕೊಂಡು ಕಾಡಿನಲ್ಲೆಲ್ಲಾ ಅಲೆದಳು. ಎಲ್ಲಿಯೂ ತನ್ನ ಪ್ರಿಯನು ಸಿಕ್ಕಲಿಲ್ಲ. ಬಹು ಶ್ರಾಂತಳಾಗಿ ಒಂದು ಮರದ ನೆರಳಲ್ಲಿ ಕುಳಿತುಕೊಂಡಳು. ಹತ್ತಿರದಲ್ಲಿಯೆ ಒಂದು ಗುಡಿಸಲು ಕಾಣಬಂದಿತು. ಪ್ರಿಯನು ಆ ಗುಡಿಸಲಿನಲ್ಲಿಯಾದರೂ ಇರುವನೋ ಎಂದು ತಟ್ಟನೆ ಹೊರಟು ಗುಡಿಸಲನ್ನು ಸೇರಿದಳು.

ಆ ಗುಡಿಸಲಿನಲ್ಲಿ ಕುಳಿತಿದ್ದವನು, ರತ್ನದ ಕವಚವನ್ನು ತೊಟ್ಟು ವಜ್ರದ ಕಿರೀಟವನ್ನು ಇಟ್ಟು ಥಳಥಳಿಸುತಿದ್ದ ಪ್ರಿಯನೆ ? ಅಲ್ಲ. ಕಾವಿಯ ಬಟ್ಟೆಯನ್ನುಟ್ಟು ಬಿಳಿಯ ಗಡ್ಡವನ್ನು ಬಿಟ್ಟು ಕಂಗೊಳಿಸುತ್ತಿದ್ದ ಒಬ್ಬ ಋಷಿಯು. ನಾಗವಲ್ಲಿಯು ಆ ಋಷಿಯ ಪಾದಕ್ಕೆರಗಿ ಕೈ ಮುಗಿದು ನಿಂತಳು. ಋಷಿಯು ನಾಗವಲ್ಲಿಯ ವೃತ್ತಾಂತವನ್ನೆಲ್ಲಾ ತಿಳಿದು, ಅವಳಿಗೆ ಧೈರ್ಯವನ್ನು ಹೇಳಿ, ಮಂತ್ರಿಸಿ ನಾಲ್ಕು ಪದಾರ್ಥಗಳನ್ನು ಕೊಟ್ಟು ' ನಿನ್ನ ಪ್ರಿಯನು ಸಿಕ್ಕುವನು ಹೋಗು ' ಎಂದು ಆಶೀರ್ವದಿಸಿ ಕಳುಹಿಸಿದನು.

ನಾಗವಲ್ಲಿಯು ಆ ಋಷಿಗೆ ನಮಸ್ಕರಿಸಿ, ನಾಗರಾಜನ ಮಗನನ್ನು ಹುಡುಕಿಕೊಂಡು ಆಕಾಡಿನಲ್ಲಿಯೇ ಹೊರಟಳು. ದಾರಿಯಲ್ಲಿ ಒಂದುದೊಡ್ಡ ಬೆಟ್ಟವು ಸಿಕ್ಕಿತು. ಆ ಬೆಟ್ಟವು ಬಹು ಇಳಿಜಾರಾಗಿಯೂ, ನುಣುಪಾಗಿಯೂ ಇದ್ದುದರಿಂದ, ಹತ್ತುವುದಕ್ಕೆ ಅಸಾಧ್ಯವಾಗಿ ತೋರಿತು. ಆಗ ಋಷಿಯೂ ಕೊಟ್ಟಿದ್ದ ಪದಾರ್ಥಗಳಲ್ಲಿ ಮೂರು ವಜ್ರದ ಸೂಜಿಗಳು ಇದ್ದುದನ್ನು ನೋಡಿ ಅವುಗಳನ್ನು ಚುಚ್ಚಿ ಮೆಟ್ಟಲುಗಳಂತೆ ಮಾಡಿಕೊಂಡು ಆ ಬೆಟ್ಟವನ್ನು ದಾಟಿದಳು.

ಅಲ್ಲಿಂದ ಮುಂದೆ ಹೋಗುತಿರುವಾಗ, ಒಂದು ಇಕ್ಕಟ್ಟಾದ ಸ್ಥಳವು ಸಿಕ್ಕಿತು. ಆ ಸ್ಥಳದಲ್ಲಿ ಹರಿತವಾದ ಮೂರು ಕತ್ತಿಗಳು ತಕತಕನೆ ಕುಣಿದಾಡುತ್ತಿದ್ದುವು. ಅವನ್ನು ನೋಡುವುದಕ್ಕೇ ಭಯವಾಗುತ್ತಿದ್ದಿತು. ಇನ್ನು ದಾಟುವುದು ಹೇಗೆ ? ನಾಗವಲ್ಲಿಯು ಧೈರ್ಯವನ್ನು ತಾಳಿ ಋಷಿಯು ಕೊಟ್ಟಿದ್ದುದರಲ್ಲಿ ಒಂದು ಚಕ್ರವಿದ್ದುದನ್ನು ನೋಡಿ, ಅದೂ ಸೂಜಿಯಂತಯೇ ಮಂತ್ರಸಿದ್ಧವಾದ ಚಕ್ರವಿರಬಹುದೆಂದು, ಅದರ ಮೇಲೆ ಕುಳಿತು, ಕತ್ತಿಯ ಹತ್ತಿರ ಉರುಳಿಸಿದಳು. ಕತ್ತಿಗಳಮೇಲೆ ಚಕ್ರವು ಸರ್‍ರನೆ ಹೊರಟು ಅವಳನ್ನು ಆಚೆಗೆ ದಾಟಿಸಿತು.

ಅವಳು ಮುಂದೆ ಮುಂದೆ ಹೋಗುತ, ಕಾಡು ಭಯಂಕರವಾಗುತ ಬಂದಿತೇ ಹೊರತು, ಊರು ಬೇರೆ ಸಿಕ್ಕಲಿಲ್ಲ. ಹುಲಿಗಳ ಅರ್ಭಟ, ಆನೆಗಳ ಕೂಗು, ಸಿಂಹದ ಗರ್ಜನೆ, ಇವು ಬಾರಿ ಬಾರಿಗೂ ಅವಳ ಮೈಯನ್ನೆಲ್ಲಾ ನಡುಗಿಸುತ್ತಿದ್ದುವು. ಆದರೆ ಅಲ್ಲಲ್ಲೆ ಸಿಕ್ಕುತಿದ್ದ ಹುಲ್ಲೆಗಳ ಹಿಂಡು, ನವಿಲುಗಳ ಸಮೂಹ, ಕೋಗಿಲೆಗಳ ಗುಂಪು, ಇವು ಅವಳಿಗೆ ಸಮಾಧಾನವನ್ನುಂಟುಮಾಡುತಿದ್ದುವು. ಹಾಗೆಯೇ ಹೊರಟಳು. ಮುಂದೆ ಒಂದು ದೊಡ್ಡ ಮೈದಾನವು ಸಿಕ್ಕಿತು ಆ ಮೈದಾನದಲ್ಲಿ ಒಂದು ಸೊಗಸಾದ ಕೊಳ. ಆ ಕೊಳದಲ್ಲಿ ನೀರು ಕುದಿಯುತಿದ್ದಿತು. ಅದನ್ನು ನೋಡಿ ಅವಳಿಗೆ ಆಶ್ಚರ್ಯವಾಯಿತು.

ಋಷಿಯು ಕೊಟ್ಟಿದ್ದ ಪದಾರ್ಥಗಳಲ್ಲಿ ಒಂದು ಗೋಲಿ ಯಿದ್ದಿತು. ಅದನ್ನು ಎಲ್ಲಿ ಯಾವಾಗ ಉಪಯೋಗಿಸಬಹುದೆಂದು ಯೋಚಿಸುತ, ಆ ಕೊಳದ ಮೇಲುಗಡೆಯ ಮೆಟ್ಟಿಲಮೇಲೆ ಕುಳಿತಿದ್ದಾಗ, ಮಂತ್ರಸಿದ್ಧವಾದ ಆ ಗೋಲಿಯು ಅವಳ ಕೈಯಿಂದ ಉರುಳಿಹೋಗಿ ಆ ಕುದಿವ ನೀರಿಗೆ ಬಿದ್ದಿತು. ಅದು ಬಿದ್ದೊಡನೆ ಕುದಿಯುತಿದ್ದ ನೀರು ತಣ್ಣಗೆ ಆಗಿ ತಿಳಿಯಿತು. ತಿಳಿದ ನೀರಿನಲ್ಲಿ ಏಳುಪ್ಪರಿಗೆಯ ಅರಮನೆಯೊಂದು ಕಾಣಿಸಿಕೊಂಡಿತು. ಆ ಅರಮನೆಯ ಮೇಲುಗಡೆಯ ಬಿಸಿಲು ಮಚ್ಚಿನಲ್ಲಿ ನಾಗರಾಜ ಕುಮಾರನು ಯೋಚಿಸುತ ಕುಳಿತಿದ್ದಂತೆ ಕಾಣಿಸಿತು. ತನ್ನ ಪ್ರಿಯನನ್ನು ನೋಡಿದ ಸಂತೋಷಕ್ಕೆ ನಾಗವಲ್ಲಿಯು ಅಲ್ಲಿಯೆ ಮೂರ್ಛಿತಳಾದಳು.

---

## ೯. ನಾಗವಲ್ಲಿಯು ಕಥೆ—(೫ ನೆಯ ಭಾಗ.)

ನಾಗವಲ್ಲಿಯು ಮೂರ್ಛೆಯಿಂದ ಚೇತರಿಸಿಕೊಂಡು ಎದ್ದು, ಸರಸರನೆ ಆ ನೀರಿನ ಹತ್ತಿರಕ್ಕೆ ಹೋದಳು. ಆ ತಿಳಿನೀರಿನಲ್ಲಿ ರಾಜಕುಮಾರನು ಇರುವುದನ್ನು ಮತ್ತೆ ನೋಡಿದಳು. ಹೇಗಾದರೂ ಅವನನ್ನು ಸೇರಬೇಕೆಂದು ಆ ನೀರಿನಲ್ಲಿ ದುಮುಕಿದಳು. ನೀರು ದಾರಿಬಿಟ್ಟಿತು. ಒಂದು ಕ್ಷಣದಲ್ಲಿ ಅರಮನೆಯ ಬಾಗಿಲನ್ನು ಸೇರಿದಳು. ಆದರೆ ಅರಮನೆಯ ಒಳಕ್ಕೆ ಇವಳನ್ನು ಯಾರೂ ಬಿಡರು; ಒಬ್ಬರೂ ಮಾತನಾಡಿಸರು; ಎಲ್ಲರೂ ಬಹು ಸಡಗರದಲ್ಲಿದ್ದರು; ನಾಗಕನ್ಯೆಗೆ ನಾಳೆ ಮದುವೆಯೆಂದು ಎಲ್ಲರೂ ಹೇಳಿಕೊಳ್ಳುತಿದ್ದರು. ತಾನು ಹೇಗೆ ರಾಜಕುಮಾರನನ್ನು ಕಂಡು ಮಾತನಾಡುವುದು? ರಾಜಕುಮಾರನು ನಾಗಕನ್ಯೆಯನ್ನು ಮದುವೆಯಾಗುವುದಾದರೆ ತಾನು ಏನು ಮಾಡುವುದು? ತಾನು ಪಟ್ಟ ಕಷ್ಟವೆಲ್ಲಾ ವ್ಯರ್ಥವಾಗುವುದು ಎಂದು ಚಿಂತಿಸುತ್ತಾ, ಅರಮನೆಗೆ ಸ್ವಲ್ಪ ದೂರದಲ್ಲಿದ್ದ ಒಂದು ಮರದ ನೆಳಲಲ್ಲಿ ಕುಳಿತುಕೊಂಡಳು. ಸ್ವಲ್ಪ ಹೊತ್ತಿನಲ್ಲಿಯೆ ಅಲ್ಲಿಗೆ ಒಬ್ಬ ಮುದುಕಿಯು ಬಂದಳು. ಆ ಮುದುಕಿಗೆ ಇವಳು ನಮಸ್ಕಾರಮಾಡಿ, 'ಅಮ್ಮಾ ನಾಳೆ ಯಾರಿಗೆ ಮದುವೆ?' ಎಂದು ಕೇಳಿದಳು. ಮುದುಕಿಯು, ಗಲ್ಲದಮೇಲೆ ಬೆಟ್ಟಿಟ್ಟು, ತಲೆಯೆತ್ತಿ ಇವಳ ಮುಖವನ್ನು ನೋಡಿ, 'ಇದೇನೆ! ಹೀಗೆ ಕೇಳುತೀಯೆ! ಚೆನ್ನಾಯಿತು. ಹೊಸದಾಗಿ ಬಂದಿದಾನಲ್ಲೆ; ನಾಗ ರಾಜಕುಮಾರನಂತಲ್ಲೆ! ಅವನಿಗೆ ನಮ್ಮ ನಾಗಕನ್ಯೆಯನ್ನು ಕೊಡುವರಲ್ಲವೇನೆ! ಅವನಿಗೇನೊ ಮದುವೆ ಬೇಡವಂತೆ; ಮೂರು ಹೊತ್ತು ತಲೆಯ ಮೇಲೆ ಕೈ ಯಿಟ್ಟುಕೊಂಡು ಕುಳಿರುತ್ತಾನಂತೆ! ರಾತ್ರಿ ಒಂದು ಹೊತ್ತಿನಲ್ಲಿ ಸ್ವಲ್ಪ ಹೊರಕ್ಕೆ ಬರುತ್ತಾನಂತೆ! ನನಗೆ ಕೆಲಸವಿದೆ, ನಾನು ಹೋಗಬೇಕು. ನೀನು ಹುಡುಗಿ, ನಿನಗೆ ತಿಳಿಯುದೇ ಇದ್ದುದು ನನಗೆ ತಿಳಿಯುತ್ತದೆಯೆ! ನನ್ನನ್ನು ನೋಡಿದರೆ ನಿಮಗೆ ಹಾಸ್ಯ' ಎಂದುಕೊಂಡು ಹೊರಟುಹೋದಳು.

ನಾಗವಲ್ಲಿಯು ರಾತ್ರಿಯಲ್ಲಿ ಆ ರಾಜಕುಮಾರನು ಹೊರಡುವುದನ್ನೇ ಕಾದಿದ್ದಳು. ರಾತ್ರಿ ಒಂದು ಹೊತ್ತಿನಲ್ಲಿ ರಾಜಕುಮಾರನು, ಏಳನೆಯ ಉಪ್ಪರಿಗೆಯಿಂದ ಬರುತಿದ್ದುದನ್ನು ನೋಡಿದಳು. ತನ್ನ ಪ್ರಿಯನನ್ನು

ಸೇರುವೆನೆಂಬ ಸಂತೋಷದಿಂದ ಮುಂದಾಗಿ ಬಂದಳು. ರಾಜಕುಮಾರ ನಾದರೋ, ಎಂದಿನಂತೆ ಹೊರಗೆ ಸಂಚಾರ ಹೊರಡದೆ ಎರಡನೆಯ ಅಂತಸ್ತಿನ ಮಚ್ಚಿನಮೇಲೆ ನಿಂತನು. ಎಷ್ಟು ಹೊತ್ತಾದರೂ ಕೆಳಕ್ಕೆ ಬರಲಿಲ್ಲ. ಬೆಳಗಾಗುತ್ತಾ ಬಂದಿತು. ಇವಳ ಮನಸ್ಸು ಕಳವಳಿಸುತ್ತಿದ್ದಿತು.

ಆಗ ನಾಗವಲ್ಲಿಯು ಮೆಲ್ಲನೆ ಎರಡನೆಯ ಅಂತಸ್ತಿನ ಕೆಳಗೆ ನಿಂತು, ನಿಶ್ಶಬ್ದವಾಗಿರುವ ಸಮಯದಲ್ಲಿ 'ತಾನು ಕಾಡನ್ನು ಹೊಕ್ಕುದು ಮೊದಲು ಗೊಂಡು, ಇಳಿಜಾರಾದ ಬೆಟ್ಟವನ್ನು ಹತ್ತಿದುದು, ಕುಣಿದಾಡುವ ಕತ್ತಿ ಗಳನ್ನು ದಾಟಿದುದು, ಕುದಿವ ನೀರನ್ನು ಅಣಗಿಸಿದುದು, ಇವೇ ಮುಂತಾದ ತನ್ನ ಕಥೆಯನ್ನೆಲ್ಲಾ ಒಂದು ಗಾನವನ್ನು ಮಾಡಿ, ಅದನ್ನು ಬಹು ಮಧು ರಧ್ವನಿಯಿಂದ ಹಾಡಿದಳು. ಆ ಗಾನವನ್ನು ಕೊನೆಯವರೆಗೂ ಕೇಳಿ, ರಾಜಕುಮಾರನು ತನ್ನ ಪ್ರಿಯೆಯು ಇಲ್ಲಿಯೇ ಬಂದಿರುವಳೆಂದು ತಿಳಿದು ಒಡನೆಯೆ ಕೆಳಕ್ಕಿಳಿದು ಬಂದು ಅಲ್ಲಿ ನಾಗವಲ್ಲಿ ಇದ್ದುದನ್ನು ನೋಡಿ ಬಹು ಸಂತೋಷಪಟ್ಟನು.

ಆಗ ನಾಗರಾಜನು ತಾನು ಕಾಡಿನಲ್ಲಿ ಕಾದಿದ್ದುದು, ತರುವಾಯ ನಾಗಕನ್ನೆಯ ವಶವಾದುದು, ಅವಳು ಮದುವೆಯಾಗಬೇಕೆಂದು ಬಲಾ ತ್ಕರಿಸಿದುದು, ಅದಕ್ಕಾಗಿ ತಾನು ಯೋಚಿಸುತಿದ್ದುದು, ಇವೇ ಮುಂತಾದ ತನ್ನ ವೃತ್ತಾಂತವನ್ನೆಲ್ಲಾ ಹೇಳಿ ನಾಗವಲ್ಲಿಯನ್ನು ಸಮಾಧಾನಪಡಿಸಿದನು. 'ನಾಗರಾಜ! ನಾವಿನ್ನು ಇಲ್ಲಿರುವುದು ಸರಿಯಲ್ಲ. ನನ್ನಲ್ಲಿ ಆ ಋಷಿಯು ಆಶೀರ್ವದಿಸಿ ಕೊಟ್ಟಿರುವ ಒಂದು ಪದಾರ್ಥವಿರುವುದು. ಅದನ್ನು ಈಗ ಉಪಯೋಗಿಸಬಹುದು' ಎಂದು ತನ್ನಲ್ಲಿದ್ದ ಒಂದು ಸಣ್ಣ ಪೆಟ್ಟಿಗೆಯನ್ನು ತೆಗೆದಳು. ಅದರಲ್ಲಿ ಒಂದುವಿಧವಾದ ಸಿದ್ಧರಸವು ಇದ್ದಿತು. ಅದನ್ನು ನಾಗರಾಜಕುಮಾರ ನಾಗವಲ್ಲಿಯರು ಕಾಲಿಗೆ ಹಚ್ಚಿಕೊಂಡರು. ಆ ರಸವು ಇವರಿಗೆ ಗಂಧರ್ವರಂತೆ ಆಕಾಶದಲ್ಲಿ ಸಂಚಾರಮಾಡುವ ಶಕ್ತಿಯನ್ನು ಕೊಟ್ಟಿತು. ಅಲ್ಲಿಂದ ಇಬ್ಬರೂ ಹೊರಟು ಬರುತಿರುವಾಗ ದಾರಿಯಲ್ಲಿ ಆ ಋಷಿಯ ಪರ್ಣಶಾಲೆ ಸಿಕ್ಕಿತು. ಅಲ್ಲಿಳಿದು, ಋಷಿಗೆ ಇಬ್ಬರೂ ನಮಸ್ಕರಿ ಸಿದರು. ನಾಗವಲ್ಲಿಯು ನಡೆದುದನ್ನೆಲ್ಲಾ ಋಷಿಗೆ ತಿಳಿಸಿದಳು. ಋಷಿಯು

ನಾಗವಲ್ಲಿಯ ಸಾಹಸಕ್ಕೆ ಮೆಚ್ಚಿ ಆಶೀರ್ವದಿಸಿ, ಅವರಿಬ್ಬರನ್ನೂ ನಕುಲ ರಾಯನಲ್ಲಿಗೆ ಕಳುಹಿಸಿಕೊಟ್ಟನು. ಅಲ್ಲಿ ನಾಗರಾಜಕುಮಾರ ನಾಗವಲ್ಲಿಯರಿಗೆ ಮದುವೆಯು ಬಹು ಸಂಭ್ರಮದಿಂದ ನೆರವೇರಿತು.

---

## ೧೦. ಕಾಗೆಯೂ ಗುಬ್ಬಿಯೂ.

ಒಂದು ದಿನ ಬೆಳಿಗ್ಗೆ ಒಂದು ಬಾವಿಯ ಕಟ್ಟೆಯಮೇಲೆ ಒಂದು ಗುಬ್ಬಿಯು ಕುಳಿತುಕೊಂಡು ತನ್ನ ಗರಿಯನ್ನು ಸರಿಮಾಡಿಕೊಳ್ಳುತಿದ್ದಿತು. ಆಗ ಒಂದು ಕಾಗೆಯು ಎಲ್ಲಿಂದಲೋ ಹಾರಿ ಬಂದು ಅಲ್ಲಿಯೇ ಕುಳಿತು, ತನ್ನ ಕೊಕ್ಕನ್ನು ಮಸೆಯುತ್ತಾ ಹಾಗೆಯೇ ಸ್ವಲ್ಪ ತನ್ನ ಕತ್ತನ್ನು ಸೊಟ್ಟ ಮಾಡಿಕೊಂಡು, ರೆಕ್ಕೆಯನ್ನು ನೋಡಿಕೊಳ್ಳುತಿದ್ದಿತು. ಆಗ ಗುಬ್ಬಿಯು ಕಾಗೆಯನ್ನು ನೋಡಿ- ಏನೇ, ಕಾಗಕ್ಕ! ನಿನ್ನ ಗರಿ ಏನು ಚೆನ್ನಾಗಿದೆ ಎಂದು ನೋಡಿಕೊಳ್ಳುತ್ತೀಯೆ ? ಹೇಳು -ಎಂದಿತು.

ಇದನ್ನು ಕೇಳಿ ಕಾಗೆಯು- ನಿನ್ನದೇನು ಚೆನ್ನಾಗಿದೆ ಹೇಳು?ಎಂದಿತು. ಗುಬ್ಬಿಯು-ನನ್ನ ಗರಿಯೆ ! ನನ್ನ ಗರಿಯ ಬಣ್ಣ ಸೊಗಸಾಗಿದೆ-ಎಂದಿತು. ಕಾಗೆಯು-ನನ್ನಗರಿಯ ಬಣ್ಣವೇ ಸೊಗಸು-ಎಂದಿತು. ಹೀಗೆ ಕಾಗೆಯೂ ಗುಬ್ಬಿಯೂ ಬಹಳ ಹೊತ್ತು ಜಗಳವಾಡುತ್ತಿದ್ದುವು.

ಕೊನೆಗೆ ಕಾಗೆಯು-ಎಲೆ, ಗುಬ್ಬಕ್ಕಾ! ನೀನು ಸಾವಿರ ಹೇಳಿಕೊ ; ನನಗೇನು ! ಇರುವುದನ್ನು ಹೇಳುತ್ತೇನೆ, ಕೇಳು. ಬಿಸಿಲು ಕಾಲಕ್ಕೆ ನಿನ್ನ ಗರಿ ತಡೆದರೂ ತಡೆಯಬಹುದು. ಚಳಿಗಾಲಬಂದರೆ, ನೀನು ನಡುಗುತ್ತ ಕೂತಿರುವುದೇ, ನಾನು ಹಾರಾಡುತಿರುವುದೇ ? ಎಂದು ಭರ್‍ರನೆ ಹಾರಿ ಹೋಯಿತು.

---

## ೧೧. ನಾಯಿಯ ಕಥೆ.

ಒಬ್ಬ ದೊರೆಯು ಒಂದುದಿನ ಬೇಟೆಗಾಗಿ ಬಹುಮಂದಿಯೊಡನೆ ಒಂದು ಕಾಡಿಗೆ ಹೊರಟನು. ಕಾಡಿನಲ್ಲಿ ಇಬ್ಬರು ಮಾತ್ರ ಒಂದು ಜಿಂಕೆಯನ್ನು ಅಟ್ಟಿಕೊಂಡು ಮುಂದೆ ಮುಂದೆ ಹೋದರು. ಜಿಂಕೆಯು ಸಿಕ್ಕಲಿಲ್ಲ. ಆಗ ಅವರವರಿಗೆ ಜಗಳಬಂದು, ಒಬ್ಬನು ತನ್ನ ಜತೆಗಾರನನ್ನು ಹೊಡೆದು ಕೊಂದು ಹಿಂದಿರುಗಿ ಬಂದು ಗುಂಪನ್ನು ಸೇರಿದನು.

ಸತ್ತವನ ನಾಯಿ ಮಾತ್ರ ತನ್ನ ಯಜಮಾನನ ಹೆಣದ ಬಳಿಯಲ್ಲಿಯೇ ಕಾದಿದ್ದಿತು. ಮೂರನೆಯ ದಿನ, ಒಂದು ಕಾಡುಹಂದಿಯನ್ನು ಅಟ್ಟಿಕೊಂಡು ದೊರೆಯೇ ಆ ಮಾರ್ಗವಾಗಿ ಬಂದನು. ಅಲ್ಲಿ ಬಿದ್ದಿದ್ದ ಹೆಣವನ್ನು ನೋಡಿ ತನ್ನ ಕಡೆಯವನೆಂದು ತಿಳಿದು, ಒಪ್ಪಮಾಡಿಸಿ, ಆ ನಾಯಿಯನ್ನು ಕರೆದುಕೊಂಡು ಹಿಂದಿರುಗಿದನು.

ಅವನು ಸತ್ತ ಬಗೆಯನ್ನು ತನ್ನ ಪಾಳಯದಲ್ಲಿ ದೊರೆಯು ವಿಚಾರಿಸಲು ಯಾರೂ ಹೇಳಲಿಲ್ಲ. ಕೊಂದವನು ತಲೆ ಮರೆಸಿಕೊಂಡು ಇದ್ದನು. ಕೆಲವು ದಿನಗಳಾದುವು. ದೊರೆಯ ಬಳಿಯಲ್ಲಿಯೇ ಈ ನಾಯಿ ಇದ್ದಿತು. ಒಂದು ದಿನ ತನ್ನ ಯಜಮಾನನನ್ನು ಕೊಂದವನು ದೊರೆಯ ಹತ್ತಿರಕ್ಕೆ ಒಂದು ಕೆಲಸಕ್ಕಾಗಿ ಬರಲು, ನಾಯಿಯು ಅವನಮೇಲೆ ಬಿದ್ದಿತು; ದೊರೆಯು ಆಗ ಅವನನ್ನು ಹಿಡಿಸಿ ಬೆದರಿಸಲು, ಅವನು ನಡೆದುದನ್ನೆಲ್ಲಾ ನಿಜವಾಗಿ ಹೇಳಿಬಿಟ್ಟನು. ಬಳಿಕ ದೊರೆಯು ಅವನಿಗೆ ಶಿಕ್ಷೆಮಾಡಿದನು.

---

## ೧೨. ಎರಡು ನದಿಗಳು.

ಒಂದು ದೊಡ್ಡ ಬೆಟ್ಟದಲ್ಲಿ ಹತ್ತಿರ ಹತ್ತಿರ ಎರಡು ನದಿಗಳು ಹುಟ್ಟಿ ಹರಿಯಲಿಕ್ಕೆ ಮೊದಲಾದುವು.

ಒಂದು ನದಿಯು ಬಹಳ ಎತ್ತರವಾದ ಸ್ಥಳದಲ್ಲಿ ಹುಟ್ಟಿತಾದುದರಿಂದ ಗುಡ್ಡದಿಂದ ಗುಡ್ಡಕ್ಕೆ ಬಿದ್ದು, ಧಡಧಡನೆ ಹರಿಯುತಿದ್ದಿತು. ಇನ್ನೊಂದು

ಸ್ವಲ್ಪ ಕೆಳಗಡೆ ಸಮನಾದ ಸ್ಥಳದಲ್ಲಿ ಹುಟ್ಟಿತಾದುದರಿಂದ ಅಲ್ಲಲ್ಲೆ ನಿಂತು ಮೆಲ್ಲಮೆಲ್ಲನೆ ಹರಿಯುತಿದ್ದಿತು.

ಸರಸರನೆ ಹರಿದು ಹೋಗುತ್ತಿದ್ದ ನದಿಯು, ಇನ್ನೊಂದನ್ನು ನೋಡಿ 'ಏನು ! ಸೋಮಾರಿಯಂತೆ ತೆವಳಿಕೊಂಡು ಮೆಲ್ಲಗೆ ಹೋಗುತಿದ್ದೀಯೆ ? ನನ್ನನ್ನು ನೋಡು ! ಇನ್ನು ಸ್ವಲ್ಪದೂರ ಹೀಗೆ ಹೋಗಿ ದೊಡ್ಡ ಹೊಳೆಯಾಗಿ ಹರಿದು, ಅನೇಕ ದೇಶಗಳಲ್ಲಿ ಪ್ರವಹಿಸಿ, ಕಾಲುವೆಗಳನ್ನು ಕೊಟ್ಟು ರೈತರಿಗೆ ಬೇಕಾದುದನ್ನೆಲ್ಲಾ ಬೆಳೆಯಲೂ ಸಹಾಯವಾಗಿ, ಅನೇಕ ಸಣ್ಣಸಣ್ಣ ನದಿಗಳೊಡನೆ ಕೂಡಿ ಸಮುದ್ರವನ್ನು ಸೇರುವೆನು' ಎಂದು ಹರಿದು ಮುಂದೆ ಮುಂದೆ ಹೋಗುತಿದ್ದಿತು.

ಮೆಲ್ಲಗೆ ಹರಿಯುತಿದ್ದ ನದಿಯು ಯಾವ ಉತ್ತರವನ್ನು ಕೊಡದೆ ತನ್ನ ಪಾಡಿಗೆ ತಾನು ಮೆಲ್ಲನೆ ಹರಿದು ಬಯಲಿಗೆ ಬೀಳಲು, ಇತರ ಸಣ್ಣ ಸಣ್ಣ ನದಿಗಳು ಬಂದು ಇದರೊಡನೆ ಸೇರಿದುವು. ಆಗ ಇದು ದೊಡ್ಡ ಹೊಳೆಯಾಗಿ, ಜನರಿಗೆ ಬಹು ಉಪಯೋಗವಾಗಿ, ಗಂಭೀರವಾಗಿ ಹರಿಯುತಿದ್ದಿತು. ಮೊದಲು ಡಂಭವನ್ನು ಮಾಡಿಕೊಂಡು ಮುಂದಾಗಿ ಬಂದ ನದಿಯೂ ಸ್ವಲ್ಪದೂರದಲ್ಲಿಯೇ ಇದನ್ನು ಸೇರಿ, ಇದರ ಮೇಲೆ ಹೋಗುತಿದ್ದ ಹಡಗುಗಳನ್ನೂ ಇದಕ್ಕೆ ಕಟ್ಟಿದ್ದ ಆಣೆಕಟ್ಟು ಸೇತುಗಳನ್ನೂ ನೋಡಿ ನಾಚಿಕೊಂಡು ಈ ದೊಡ್ಡ ಹೊಳೆಯಲ್ಲಿಯೆ ಅಡಗಿಹೋಯಿತು.

---

## ೧೩. ಸುಳ್ಳು ಹುಡುಗ.

ಒಂದು ಕಾಡಿನ ಹತ್ತಿರ ಒಂದು ಸಣ್ಣ ಊರು ಇದ್ದಿತು. ಆ ಊರಿನ ದನಗಳನ್ನು ಅಟ್ಟಿಕೊಂಡು ಸಮೀಪವಾಗಿದ್ದ ಒಂದು ಹುಲ್ಲುಗಾವಲಿಗೆ ಒಬ್ಬ ಹುಡುಗನು ಪ್ರತಿದಿನವೂ ಹೋಗುತಿದ್ದನು.

ಒಂದು ದಿವಸ ಸಾಯಂಕಾಲದ ಹೊತ್ತಿನಲ್ಲಿ ಆ ಹುಡುಗನು ಊರ ಬಳಿಗೆ ಬಂದು 'ಏ ! ಹುಲಿ ಬಂದಿತು ; ಬಂದಿತೊ ; ಎಂದು ಬಿಡದೆ

ಗಟ್ಟಿಯಾಗಿ ಅರಚಿಕೊಂಡನು. ಊರಜನರು ಅವನ ಕೂಗನ್ನು ಕೇಳಿ ಮಾಡುತ್ತಿದ್ದ ಕೆಲಸವನ್ನು ಹಾಗೆಯೇ ಬಿಟ್ಟು, ಈಟಿದೊಣ್ಣೆಗಳನ್ನು ತೆಗೆದುಕೊಂಡು ಅಲ್ಲಿಗೆ ಓಡಿಬಂದರು. ಜನರು ಬೇಗ ಬೇಗ ಬರುವುದನ್ನು ನೋಡಿ ಆ ಹುಡುಗನು ನಗುತ ನಿಂತನು. ಜನರೆಲ್ಲರೂ ಅವನನ್ನು ಬೈಯ್ಯುತ್ತಾ ಹಿಂದಿರುಗಿದರು.

ಇನ್ನೊಂದು ದಿನ ಸಂಜೆಯಲ್ಲಿ ನಿಜವಾಗಿಯೂ ಹುಲಿಬಂದಿತು. ಅದೇ ಹುಡುಗನು ಆ ಹೊತ್ತು ಒಂದೇ ಉಸಿರಿನಲ್ಲಿ ಗಟ್ಟಿಯಾಗಿ ಕಿರಿಚಿಕೊಂಡನು. ಊರ ಜನರೆಲ್ಲರೂ ಕೇಳಿದರು. ಆದರೂ ಅದು ಸುಳ್ಳಿರಬಹುದೆಂದು ಯಾರೂ ಅತ್ತಲಾಗಿ ಹೋಗಲೇ ಇಲ್ಲ. ಹುಲಿಯು ಬಂದು ಅವನ ಹಸುವನ್ನು ಎತ್ತಿಕೊಂಡು ಹೊರಟೇಹೋಯಿತು.

## ೧೪. ಚಿಕ್ಕದೇವರಾಜವೊಡೆಯರು.

ನಮ್ಮ ಈ ಮಹಿಸೂರು ಸಂಸ್ಥಾನವನ್ನು ಹಿಂದೆ ಮಹಾಶೂರರಾದ ಅನೇಕ ರಾಜರುಗಳು ಆಳಿರುವರು. ಅವರಲ್ಲಿ ಚಿಕ್ಕದೇವರಾಜ ಒಡೆಯರೆಂಬವರೊಬ್ಬರು. ಇವರು ಬಹು ಸಮರ್ಥರು. ಇವರ ಕಾಲದಲ್ಲಿಯೇ ಬೆಂಗಳೂರು, ತುಮಕೂರು, ಚಿಕ್ಕಮಗಳೂರು, ಮದ್ದಗಿರಿ ಇವು ಮಹಿಸೂರು ಸಂಸ್ಥಾನಕ್ಕೆ ಸೇರಿದುವು. ಊರಿಂದೂರಿಗೆ ಕಾಗದ ಪತ್ರಗಳನ್ನು ಸಾಗಿಸುವ ಅಂಚೆ (ಪೋಸ್ಟ್) ಕಛೇರಿಯನ್ನು ಏರ್ಪಡಿಸಿದವರೂ ಇವರೇ. ರಾತ್ರಿವೇಳೆ ಕಳ್ಳರು ಕಾಕರು ಪ್ರಜೆಗಳಿಗೆ ಹಿಂಸೆಕೊಡದಂತೆ ನೋಡಿಕೊಳ್ಳಲು ಕೊತ್ವಾಲ, ಕಳ್ಳಭಂಟ, ದಂಡಿ ಮುಂತಾದವರನ್ನು ಇವರೇ ಮೊದಲು ಗೊತ್ತುಮಾಡಿದವರು. ರೈತರೆಲ್ಲರೂ ಕ್ರಮವಾಗಿ ತಾವು ಬೆಳೆದ ಬೆಳೆಯಲ್ಲಿ ಒಂದುಪಾಲನ್ನು ಸರಕಾರಕ್ಕೆ ಕೊಡಬೇಕೆಂದು ಕಟ್ಟುಮಾಡಿದವರೂ ಇವರೇ. ಹೀಗೆ ಕಟ್ಟು ಮಾಡಲು, ‘ ಕಾಡು ಭೂಮಿಯನ್ನು ಬಸವಣ್ಣ ಉಳುತ್ತಾನೆ, ದೇವೇಂದ್ರ ಮಳೆಯನ್ನು ಕರೆಯುತ್ತಾನೆ ; ನಾವು ಕಷ್ಟಪಟ್ಟು ಬೆಳೆಮಾಡಿ ದೊರೆಗೇಕೆ

ಕೊಡಬೇಕು ?' ಎಂದು ಕೆಲವು ಮುಂದಿ ಪುಂಡು ಜನರು ಕೂಗಲಿಕ್ಕೆ ಆರಂಭಿಸಿದರು. ದೊರೆಗಳು ಇಂತಹವರನ್ನೆಲ್ಲಾ ಅಡಗಿಸಿದರು. ಹೀಗೆ ಪುಂಡರನ್ನು ಅಡಗಿಸಿ ಒಳ್ಳೆಯವರನ್ನು ಕಾಪಾಡಿ, ಕಳ್ಳರುಕಾಕರಿಗೆ ಆಸ್ಪದಕೊಡದೆ ಈ ದೇಶವನ್ನು ಧರ್ಮದಿಂದ ಆಳುತ್ತಿದ್ದರು. ಆಗ ದೇಶದಲ್ಲಿ ಎಲ್ಲೆಲ್ಲಿ ನೋಡಿದರೂ ಸುಭಿಕ್ಷವು ನೆಲೆಗೊಂಡಿತು.

ಹೀಗಿರಲು, ಮಹಿಸೂರ ಸಂಸ್ಥಾನದಲ್ಲಿ ಬಹಳವಾಗಿ ಹಣ ಸಿಕ್ಕುವುದೆಂದು, ಕೊಳ್ಳೆಹೊಡೆವುದರಲ್ಲಿ ನಿಪುಣರಾದ ಮರಾಟಿಯವರು ಒಂದು ದೊಡ್ಡ ದಂಡನ್ನು ತೆಗೆದುಕೊಂಡು ಬಂದು ಶ್ರೀರಂಗಪಟ್ಟಣದ ಬಳಿಯಲ್ಲಿ ಇಳಿದರು. ಆಗ ಪಟ್ಟಣದಲ್ಲಿ ಮಹಿಸೂರು ಸೈನ್ಯವಿರಲಿಲ್ಲ. ಶ್ರೀರಂಗಪಟ್ಟಣವು ಮರಾಟಿಯವರ ಕೊಳ್ಳೆಗೆ ತುತ್ತಾಯಿತು. ಅಷ್ಟರಲ್ಲಿಯೆ ಮಹಾರಾಜರ ಸೈನ್ಯವೊಂದು ಬಂದು ಬಹು ಉಪಾಯದಿಂದ ಮರಾಟಿಯವರನ್ನು ಓಡಿಸಿ ಶ್ರೀರಂಗಪಟ್ಟಣವನ್ನು ಕಾಪಾಡಿತು.

ಮಹಿಸೂರಿನ ದಳವಾಯಿಯು ಆಗ ಮಾಡಿದ ಉಪಾಯವನ್ನು ಹೇಳುವೆನು ಕೇಳಿ:- ಶ್ರೀರಂಗಪಟ್ಟಣಕ್ಕೂ ಮಹಿಸೂರ ಸೈನ್ಯಕ್ಕೂ ಮಧ್ಯೇ ಮರಾಟಿ ಸೈನ್ಯವು ಇಳಿದಿದ್ದಿತು.ರಾತ್ರಿಯಾಗುವವರೆಗೂ ದಳವಾಯಿಯು ಸುಮ್ಮನಿದ್ದು ಮಧ್ಯರಾತ್ರಿಯಲ್ಲಿ ಎತ್ತಿನ ಕೊಂಬುಗಳಿಗೆ ಪಂಜುಗಳನ್ನು ಕಟ್ಟಿಸಿ ದೀಪವನ್ನು ಹಚ್ಚಿಸಿ, ಮರಾಟಿಯವರ ಮೇಲೆ ಹೊರಡಿಸಿದನು. ಮರಾಟಿಯವರು,ದೀವಟಿಗೆಗಳು ಬರುತ್ತಿದ್ದ ದಿಕ್ಕಿನಿಂದ ಮೈಸೂರ ಸೈನ್ಯವು ಬರುತ್ತಿರುವುದೆಂದು ಇದಿರು ನೋಡುತ್ತಿರಲು, ದಳವಾಯಿಯು ಸುತ್ತಿಕೊಂಡು ಬಂದು ಹಿಂದುಗಡೆಯಿಂದ ಮರಾಟಿಯವರ ಮೇಲೆ ಬಿದ್ದು, ಅವರನ್ನು ದಿಕ್ಕಾಪಾಲಾಗಿ ಓಡಿಸಿದನು. ಮರಾಟಿಯವರು ಚದರಿಹೋದರು. ಶ್ರೀರಂಗಪಟ್ಟಣವು ಉಳಿಯಿತು.

ಈ ಚಿಕ್ಕದೇವರಾಜ ಒಡೆಯರವರು ಪ್ರತಿದಿನವೂ ಬೊಕ್ಕಸಕ್ಕೆ ಎರಡು ಸಾವಿರ ವರಹಗಳು ಬಂದಲ್ಲದೆ ಊಟಮಾಡುತಿರಲಿಲ್ಲ. ಹೀಗೆ ಇವರು ಬಹಳ ಹಣವನ್ನು ಸೇರಿಸಿದ್ದುದರಿಂದ ಇವರನ್ನು 'ನವಕೋಟಿ ನಾರಾಯಣ' ಎಂದು ಜನರು ಕರೆಯುತಿದ್ದರು.

ಇವರ ಸಾಹಸಕ್ಕೂ ಆಳುವಿಕೆಗೂ ಮೆಚ್ಚಿ ದೆಹಲೀ ಚಕ್ರವರ್ತಿಯು ಇವರಿಗೆ 'ರಾಜಾ ಜಗದೇಕ್' ಎಂಬ ಬಿರುದನ್ನು ಕೊಟ್ಟನಲ್ಲದೆ, ನಗಾರಿ ನವಪತ್ತು ಮರ್ಯಾದೆಗಳನ್ನೂ ಜಂತದ ಒಂದು ಸಿಂಹಾಸನವನ್ನೂ ಕಳುಹಿಸಿ ಕೊಟ್ಟನು ಇವರು ಬಹುಕಾಲ ಸುಖವಾಗಿ ಮಹಿಸೂರರಾಜ್ಯವನ್ನಾಳಿದರು.

---

## ೧೫. ಬಕಾಸುರನ ಕಥೆ.

ಮಕ್ಕಳಿರಾ, ನೀವು ಬಕಾಸುರನ ಹೆಸರನ್ನು ಕೇಳಿರಬಹುದು. ಎಷ್ಟು ತಿಂಡಿಯನ್ನು ಕೊಟ್ಟರೂ ಬಕಬಕನೆ ಮುಕ್ಕಿಬಿಟ್ಟು, ಇನ್ನಿಷ್ಟುಕೊಡು, ಮತ್ತಿಷ್ಟು ಕೊಡು, ಎಂದು, ಜಂಡಿ ಹಿಡಿವ ಹುಡುಗರಿಗೆ 'ಇದೇನು ಬಕಾಸುರನ ಹಾಗೆ ಆಡುತ್ತಾನೆ?' ಎನ್ನುವುದನ್ನು ನೀವು ಕೇಳಲಿಲ್ಲವೆ? ಆ ಬಕಾಸುರನ ಕಥೆಯನ್ನು ಈಗ ಹೇಳುವೆನು ಕೇಳಿ:– ಆ ಬಕಾಸುರನು ಒಬ್ಬ ದೊಡ್ಡ ರಾಕ್ಷಸನು. ಅಬ್ಬಬ್ಬ! ಅವನ ಹೆಸರನ್ನು ಕೇಳಿದರೆ ಮೈ ನಡುಗುತ್ತಿದೆ! ಆ ರಾಕ್ಷಸನು ಒಂದಾನೊಂದು ಕಾಲದಲ್ಲಿ ಏಕಚಕ್ರಪುರಿ ಎಂಬ ಒಂದು ಊರಿನ ಹತ್ತಿರ ಒಂದು ಗವಿಯಲ್ಲಿ ವಾಸಮಾಡಿಕೊಂಡಿದ್ದನು. ಅವನು ಪ್ರತಿದಿವಸವೂ ಏಕಚಕ್ರಪುರಿಗೆ ಬಂದು ಬೇಕಾದುದನ್ನೆಲ್ಲಾ ತಿಂದು ಜನರನ್ನು ಕೊಂದು ರಕ್ತವನ್ನು ಹೀರಿ ಹೋಗುತ್ತಿದ್ದನು. ಕೆಲವು ಕಾಲದಲ್ಲಿಯೇ ಊರು ಬರಿದಾಗುತ್ತಾ ಬಂದಿತು. ಆಗ ಉಳಿದ ಜನರೆಲ್ಲರೂ ಸೇರಿ ಗಡಗಡನೆ ನಡಗುತ್ತಾ, ಬಕಾಸುರನು ಬರುವ ವೇಳೆಗೆ ಸರಿಯಾಗಿ, ದೂರದಲ್ಲಿ ಅಡ್ಡಬಿದ್ದು ಹೋ ಎಂದು ಮೊರೆಯಿಟ್ಟರು. ಆ ಗೋಳನ್ನು ಕೇಳಿ, ರಾಕ್ಷಸನ ಮನಸ್ಸು ಸ್ವಲ್ಪ ಕರಗಿತು. ಆಗ ರಾಕ್ಷಸನು—ನಿತ್ಯವೂ ತಪ್ಪದೆ ನೀವು ಒಂದು ಗಾಡಿ ಅನ್ನ, ಒಂದು ಗಾಡಿ ತಿಂಡಿ, ಒಂದು ಭಂಡಿಯತುಂಬ ಪಾನಕ, ನೀರುಮಜ್ಜಿಗೆ, ಒಬ್ಬ ಮನುಷ್ಯ ಇಷ್ಟನ್ನೂ ನನಗೆ ಕೊಡುವುದಾದರೆ ನಿಮಗೆ ಈಗ ಕೊಡುತ್ತಿರುವ ತೊಂದರೆಯನ್ನು ತಪ್ಪಿಸುವೆನು ಎಂದನು. ಅದಕ್ಕೆ ಊರಿನವರೆಲ್ಲರೂ ಒಪ್ಪಿಕೊಂಡು ಅದೇ ರೀತಿಯಲ್ಲಿ ನಡಿಸುತ್ತಾ ಬರುತ್ತಿದ್ದರು.

ಒಂದು ದಿನದ ಸರದಿ ಒಬ್ಬ ಮುದುಕಿಯದಾಗಿದ್ದಿತು. ಆ ಮುದುಕಿಗೆ ಒಬ್ಬನೇ ಒಬ್ಬ ಮಗನಿದ್ದನು. ಅವನಲ್ಲದೆ ಮತ್ತಾರೂ ಇರಲಿಲ್ಲ. ತಾನೇ ಹೋಗಿ ರಾಕ್ಷಸನಿಗೆ ತುತ್ತಾಗುವುದು ಎಂದರೆ, ಬಕನು ಮುದುಕಿಯರನ್ನೂ ಮಕ್ಕಳನ್ನೂ ಮುಟ್ಟುತ್ತಿರಲಿಲ್ಲ. ಮುಖ್ಯವೇನು ? ಅವರನ್ನು ತಿಂದರೆ ಅವನ ಹೊಟ್ಟೆ ತುಂಬುತ್ತಿರಲಿಲ್ಲ. ಮಗನನ್ನು ಕಳುಹಿಸಲು ಮುದುಕಿಗೆ ಮನಸ್ಸಿಲ್ಲ. ಅವಳು ಗೊಳೋ ಎಂದು ಅಳುತ್ತಿದ್ದಳು. ಊರು ಜನರು, ಮಗನನ್ನು ಅಟ್ಟಿಬಿಡಬೇಕು, ಇಲ್ಲದಿದ್ದರೆ ಊರು ಹಾಳಾಗುವುದು ಎಂದು ಮುದುಕಿಯನ್ನು ಬಲಾತ್ಕರಿಸುತಿದ್ದರು.

ಆ ಸಮಯಕ್ಕೆ ಸರಿಯಾಗಿ ಪಂಚ ಪಾಂಡವರಾದ ಧರ್ಮರಾಜ, ಭೀಮ, ಅರ್ಜುನ, ನಕುಲ, ಸಹದೇವ ಇವರು ತಾಯಿಯಾದ ಕುಂತೀದೇವಿಯೊಡನೆ ಬಂದು ಅಲ್ಲಿದ್ದರು. ಆಗ ಆ ಮುದುಕಿಯ ರೋದನವನ್ನು ಕೇಳಿ ಭೀಮನು, 'ಅಮ್ಮಾ, ನಾನು ಹೋಗುವೆನು, ನಮ್ಮ ತಾಯಿಗೆ ನಾನಲ್ಲದೆ ಇನ್ನೂ ನಾಲ್ಕು ಮಂದಿ ಮಕ್ಕಳಿರುವರು. ನಾನು ಸತ್ತರೂ ಚಿಂತೆಯಿಲ್ಲ. ನೀನು ಎಲ್ಲವನ್ನೂ ಸಿದ್ಧಪಡಿಸು, ನಾನು ಹೋಗಿಬರುವೆನು' ಎಂದನು. ಮಗನ ಸಾಮರ್ಥ್ಯವನ್ನು ತಿಳಿದಿದ್ದ ಕುಂತಿಯು ಭೀಮನು ಬಕಾಸುರನಿಗೆ ತುತ್ತಾಗಿ ಹೋಗುವುದಕ್ಕೆ ಸಮ್ಮತಿಸಿದಳು. ನಾನಾ ವಿಧವಾದ ಹುಳಿಯನ್ನ, ಮೊಸರನ್ನ ಇವೆಲ್ಲಾ ಸಿದ್ಧವಾದುವು; ಕಡುಬು ಕಜ್ಜಾಯ ಇವೂ ಒದಗಿದವು. ಪಾನಕ, ನೀರುಮಜ್ಜಿಗೆ ಇವೂ ಅಣಿಯಾದುವು. ಭಂಡಿಗಳು ಸಿದ್ಧವಾದುವು. ಭೀಮನೂ ಹೊರಟನು.

ಹೋಗುಹೋಗುತ ಹಸಿದಿದ್ದ ಭೀಮನು ಒಂದೊಂದುಬಗೆಯ ಅನ್ನವನ್ನಾಗಿ ತಿಂದು ಮುಗಿಸಿ, ಕಡುಬು ಕಜ್ಜಾಯಗಳನ್ನು ನಿಧಾನವಾಗಿ ಮೆದ್ದು, ಗಟಗಟನೆ ಪಾನಕ ನೀರುಮಜ್ಜಿಗೆಗಳನ್ನು ಕುಡಿದು ತೃಪ್ತನಾಗುವ ಹೊತ್ತಿಗೆ ಮಧ್ಯಾಹ್ನವಾಗಿ ಹೋಯಿತು. ಬಕಾಸುರನಿಗೆ, ಆಹಾರವು ಅಂದು ಅಷ್ಟು ಹೊತ್ತಾದರೂ ಬರಲಿಲ್ಲವೆಂದು, ಬಹು ಕೋಪಬಂದಿತು. ಹಸಿವಿನಿಂದ ಕೋಪವು ಅತಿಯಾಗಿ, ಅವನು ಭೂಮಿಯನ್ನು ಅಪ್ಪಳಿಸುತ್ತಿದ್ದನು. ಅಷ್ಟು ಹೊತ್ತಿಗೆ ಭಂಡಿಗಳು ನಿಧಾನವಾಗಿ ಬರುತಿದ್ದುದನ್ನು ನೋಡಿ ಒಂದುಸಲ ಗರ್ಜನೆಮಾಡಿದನು. ಆ ಗರ್ಜನೆಗೆ ಭೀಮನು ಹೆದರಲಿಲ್ಲ. ಭೀಮನು ತಿಂದು ಹೊ

ಟ್ಟೆಯನ್ನು ಸವರಿಕೊಳ್ಳುತ್ತಿದ್ದನು. ಇದನ್ನು ಬಕಾಸುರನು ಕಂಡು, 'ಎಲಾ! ಎಲಾ! ನರಾಧಮ, ನಿನ್ನನ್ನು ಮೊದಲು ತಿಂದು, ಆಮೇಲೆ, ಊಟ ಮಾಡುವೆನು. ತರುವಾಯ ಇಷ್ಟು ಸಾವಕಾಶಮಾಡಿದುದಕ್ಕಾಗಿ ಈ ಪಟ್ಟಣವನ್ನೇ ಸುಟ್ಟುಬಿಡುವೆನು,' ಎಂದು ಆರ್ಭಟಿಸಿ, ಭೀಮನನ್ನು ಭಂಡಿಯಿಂದ ಈಚೆಗೆ ಸೆಳೆಯ ಹೋದನು. ಭೀಮನು ಅಲ್ಲಾಡಲಿಲ್ಲ. ಆಗ ಬಕನಿಗೆ ಇನ್ನೂ ಕೋಪ ಹೆಚ್ಚಿ ಭಂಡಿಯನ್ನು ಒದೆದು ಪುಡಿಪುಡಿಮಾಡಿದನು. ಭೀಮನು ಮೆಲ್ಲನೆ ಈಚೆಗೆ ಬಂದು ನಿಂತನು. ಆಗ ಇಬ್ಬರಿಗೂ ಭಯಂಕರವಾದ ಹೊಡೆದಾಟವು ಆರಂಭವಾಯಿತು. ಒಂದೊಂದಾವೃತ್ತಿ ಭೂಮಿಯನ್ನು ತುಳಿದರೆ ಭೂಮಿಯೆಲ್ಲಾ ನಡುಗಿಹೋಗುತಿದ್ದಿತು. ಅದೇನೋ ಅನರ್ಥ ನಡೆಯುತ್ತಿದೆ ಎಂದು ದೂರದಲ್ಲಿದ್ದ ಏಕಚಕ್ರನಗರಿಯ ಜನರೆಲ್ಲ ಮನೆಯಲ್ಲಿಯೆ ಅಡಗಿಕೊಂಡಿದ್ದರು. ಭೀಮ ಬಕರ ಹೋರಾಟವು ಹೆಚ್ಚಿ ಭೀಮನಿಗೆ ಬಕನು ಒಂದು ಗುದ್ದನ್ನು ಗುದ್ದಿದನು. ಭೀಮನು—ಆಃ! ನಾನು ತಿಂದುದೆಲ್ಲ ಜೀರ್ಣಕ್ಕೆ ಬಂದಿತು. ಇನ್ನು ಪಟುವಾಗಿ ಯುದ್ಧ ಮಾಡುವೆನು-ಎಂದು ಬಕನೊಡನೆ ಯುದ್ಧಮಾಡಿ ಅವನಿಗೆ ಒಂದು ಬಲವಾದ ಗುದ್ದನ್ನು ಹಾಕಿ ಕೆಡವಿ ಅವನ ಪ್ರಾಣವನ್ನೇ ತೆಗೆದನು. ಬಳಿಕ ಬಕನು ಆ ಉದ್ದದಿಂದ ಈ ಉದ್ದದವರೆಗೂ ಕಾಲು ಚಾಚಿಕೊಂಡು ಬಿದ್ದನು.

ಈ ಗದ್ದಲವು ನಿಂತ ಬಹು ಹೊತ್ತಿನಮೇಲೆ ಊರ ಜನರೆಲ್ಲರೂ ಮೆಲ್ಲಮೆಲ್ಲನೆ ಅಲ್ಲಲ್ಲಿ ಸುಳಿದಾಡುತ ರಾಕ್ಷಸನು ಬಿದ್ದಿದ್ದುದನ್ನೂ ಭೀಮನು ಸುಖವಾಗಿ ಓಡಾಡುತಿದ್ದುದನ್ನೂ ಕಂಡರು. ತರುವಾಯ ಅವರೆಲ್ಲರೂ ಬಹು ಸಂತೋಷದಿಂದ ಬಂದು ಭೀಮನನ್ನು ಕೊಂಡಾಡಿ- ಅಂತಹ ಮಗನನ್ನು ಪಡೆದ ಕುಂತಿಯು ಎಂತಹ ಧನ್ಯಳೊ! ನಮ್ಮ ಪಟ್ಟಣವನ್ನೇ ಉಳುಹಿದನಲ್ಲ! ಎಂದು ಹೊಗಳುತ, ಭೀಮನೊಡನೆ ಸುಖವಾಗಿ ಪಟ್ಟಣಕ್ಕೆ ಹಿಂದಿರುಗಿದರು.

---

## ೧೬. ಮಾವಿನಗಿಡ, ಗೊಬ್ಬಳಿಯಗಿಡ.

ಒಂದಾನೊಂದು ಪಟ್ಟಣವಿದ್ದಿತು. ಆ ಪಟ್ಟಣಕ್ಕೆ ಸಮೀಪವಾಗಿಯೇ ಒಂದು ಉದ್ಯಾನವನ. ಆ ವನದಲ್ಲಿ ಮಲ್ಲಿಗೆ, ಜಾಜಿ, ಸಂಪಿಗೆ, ಗುಲಾಬಿ

ಇವೇ ಮುಂತಾದ ಒಳ್ಳೆಯ ಹೂವಿನ ಬಳ್ಳಿಗಳೂ, ಗಿಡಗಳೂ; ತೆಂಗು, ಮಾವು, ಹಲಸು, ಕಿತ್ತಿಳೆ, ನಿಂಬೆ, ಬಾಳೆ ಇವೇ ಮುಂತಾದ ಹಣ್ಣಿನ ಗಿಡಗಳೂ; ಗಿಳಿ, ನವಿಲು, ಪಾರಿವಾಳ ಇವೇ ಮೊದಲಾದ ಪಕ್ಷಿಗಳೂ ತುಂಬಿದ್ದುವು. ಇಂತಹ ಮನೋಹರವಾದ ಉದ್ಯಾನವನದಲ್ಲಿ ಒಂದು ಮಾವಿನ ಮರದ ಬಳಿ ಒಂದೇ ಒಂದು ಗೊಬ್ಬಳಿಯ ಗಿಡವಿತ್ತು. ಆ ಮಾವಿನಮರದಲ್ಲಾದರೋ ಬೇಕಾದಷ್ಟು ಹಣ್ಣುಗಳು ಇದ್ದುವು. ಆ ಹಣ್ಣುಗಳನ್ನು ತೆಗೆದು ತಿನ್ನಬೇಕೆಂದು ಬಂದವರ ಕಾಲಿಗೆ, ಆ ಗೊಬ್ಬಳಿಯ ಮರದ ಸುತ್ತಲೂ ಉದುರಿದ್ದ ಮುಳ್ಳು ಚುಚ್ಚಿಕೊಳ್ಳುತ್ತಿತ್ತು. ಹಣ್ಣು ಸಿಕ್ಕದೆ ಮುಳ್ಳು ಚುಚ್ಚಿದ ವ್ಯಥೆಯಿಂದ ಎಲ್ಲರೂ ಹಿಂದಿರುಗುತ್ತಿದ್ದರು. ಇದನ್ನು ಕಂಡು, ಮಾವಿನ ಮರಕ್ಕೆ ಬಹು ಕೋಪವುಂಟಾಗಿ, ಅದು ಗೊಬ್ಬಳಿಯ ಮರವನ್ನು ಕುರಿತು—ಛೆ! ಪಾಪಿ! ನೀನಂತೂ ಹಣ್ಣುಬಿಡುವುದಿಲ್ಲ. ನನ್ನಲ್ಲಿರುವ ಸವಿಯಾದ ಹಣ್ಣನ್ನು ತಿಂದು ಆನಂದಪಡಲು ಬರುವವರನ್ನೂ ನೀನು ಸೇರಗೊಡೆಯಲ್ಲ! ನೀನು, ನನಗೂ ಜನರಿಗೂ ಎಂತಹ ಕಂಟಕನಾಗಿರುವೆ! ನಿನಗಿಂತಲೂ ಕಂಟಕರಾದವರು ಯಾರಾದರೂ ಉಂಟೆ ? ಈ ಪುಣ್ಯಭೂಮಿಯಲ್ಲಿ ನಿನಗೇನು ಕೆಲಸ ? ನೀನು ಏಕೆ ಬೇಗ ಸಾಯಬಾರದು !- ಎಂದು ಬಹು ಕಠಿನವಾಗಿ ಜರಿಯಿತು.

ಅದಕ್ಕೆ ಗೊಬ್ಬಳಿಯು ಕೋಪಗೊಂಡು 'ಎಲೈ ಮಾವಿನಮರವೇ! ನಿನಗೇಕೆ ಇಷ್ಟು ಅಹಂಕಾರ! ನಿನ್ನ ಹಣ್ಣು ಇರುವುದೆಲ್ಲ ಇನ್ನೆಷ್ಟುದಿನ! ನಿನ್ನಲ್ಲಿ ಒಂದುವರ್ಷ ಹೆಚ್ಚಾಗಿ ಹಣ್ಣು ಬಿಟ್ಟರೆ ಇನ್ನೊಂದುವರ್ಷ ಎಲೆಯೂ ಕೊಂಬೆಯೂ ಹೆಚ್ಚಾಗಿ ಬಿಡುತ್ತವೆ! ನೀನೇ ಟೊಳ್ಳು! ನೀನು ಜನರಿಗೆ ಮಾಡುವ ಅಂತಹ ದೊಡ್ಡ ಉಪಕಾರವೇನು ? 'ನನ್ನ ನೆರಳಲ್ಲಿ ಜನರು ಕೂಡುವರೆಂಬೆಯೋ ?' ಆಗಬಹುದು ಆಗಬಹುದು! ನಿನ್ನಮೇಲೆ ಹರಿದಾಡುವ ಕೆಂಜಿಗದ ಕಡಿತವನ್ನು ಕಾಣದ ಜಪ್ಪರು ಹಾಗೆ ಕೂಡಬೇಕು ! 'ಗಿಣಿಗಳು! ಕೋಗಿಲೆಗಳು ! ಬಂದು ನನ್ನಮೇಲೆ ಕೂಡುವುವು ಎಂಬೆಯೊ?' ಅಹುದು ಅಹುದು ! ನಿನ್ನ ಅಹಂಕಾರವನ್ನು ನೋಡಿ ನಿನ್ನ ಹಣ್ಣನ್ನು ಕಡಿದು ಛಿನ್ನಭಿನ್ನ ಮಾಡಲು ಗಿಳಿಗಳು ಬರುವುವು. ಸಾಕಿದವನನ್ನು ಕಚ್ಚಿ ಅಟ್ಟುವ ಕೆಲಸದಲ್ಲಿ ನಿಪುಣತೆಯುಳ್ಳ ಕೋಗಿಲೆಗಳು ನಿನ್ನ ಮರೆ

ಬೀಳುವುವು. ಮೋಸಗಾರರಿಗಲ್ಲವೆ ನೀನು ಆಶ್ರಯ? ನನ್ನನ್ನು ನೋಡು! ನನ್ನ ಹೂವನ್ನು ನೋಡು. ಎಷ್ಟು ಸುಗಂಧವುಳ್ಳದಾಗಿರುವುದು! ನನ್ನ ಕಾಯನ್ನು ನೋಡು. ಎಷ್ಟು ಉಪಯೋಗವಾಗಿರುವುದು! 'ನಿನ್ನ ಮುಳ್ಳನ್ನು ನೋಡು' ಎಂದರೆ ಅಹುದು; ಮುಳ್ಳಿರುವುದು. ಕಷ್ಟವು ಬೆರೆಯದ ಸುಖವೆಲ್ಲಿರುವುದು? ಮುಳ್ಳಿಲ್ಲದ ಗುಲಾಬಿ ಎಲ್ಲಿ! ನಾನು ಬಹು ಗಟ್ಟಿ, ನನ್ನಿಂದ ಬೇಕಾದ ಮರಮುಟ್ಟುಗಳಾಗುವುವು; ನನ್ನನ್ನು ಅರಿಯದ ಜನರು ಬೇಗನೆ ಕಡಿದುಹಾಕುವರು. ಆದುದರಿಂದ ದೇವರು ನನ್ನ ರಕ್ಷಣೆಗಾಗಿ ಮುಳ್ಳನ್ನು ಕೊಟ್ಟಿರುವನು. ಈ ಹೊತ್ತಿಗಾಯಿತು, ನಾಳೆಯಿಂದ ಇಂತಹ ಮಾತನಾಡಬೇಡ' ಎಂದಿತು.

ಇದಕ್ಕೆ ಮಾವಿನಮರವು—"ನಮ್ಮ ವಂಶಕ್ಕೆ ಮೃತ್ಯುವಾದ ನಿನ್ನೊಡನೆ ನನಗೇನುಮಾತು? ನೀನು ಜನೋಪಕಾರಿ ಎಂದು ಹೇಳಿಕೊಂಡರೆ ಜನರು ನಂಬುವರೆ? ನನ್ನ ಯೋಗ್ಯತೆಯನ್ನು ಹೊಗಳಲು ಮನುಷ್ಯರಲ್ಲಿ ಶ್ರೇಷ್ಠರಾದ ಕವಿಗಳು ಇರುವರು; ಪಕ್ಷಿಗಳಲ್ಲಿ ಕೋಗಿಲೆಗಳಿರುವುವು; ನೀನು ನನ್ನನ್ನು ಸ್ತೋತ್ರಮಾಡಬೇಕೆಂದಿಲ್ಲ. ಕೈಯಲ್ಲಾದರೆ ಪರೋಪಕಾರ ಮಾಡಬೇಕು, ಇಲ್ಲದಿದ್ದರೆ ಉಪಕಾರ ಹೊಂದತಕ್ಕವರಿಗೆ ಕಂಟಕನಾಗಿ ಬಾರದೆ, ತಟಸ್ಥನಾಗಿರಬೇಕು. ನಿನ್ನ ಬಾಳು ಎಂತಹ ಬಾಳು ಹೇಳು" ಎಂದು ಮಾವಿನಮರವು ಸುಮ್ಮನೆ ಆಯಿತು.

---

## ೧೭. ಕೋಳಿಯೂ-ರತ್ನವೂ.

ಒಂದು ಹೆಣ್ಣು ಕೋಳಿಯು ತನ್ನ ಮರಿಗಳನ್ನೆಲ್ಲಾ ಜತೆಯಲ್ಲಿ ಕರೆದುಕೊಂಡು ತಾನಿದ್ದ ಅಂಗಳದಲ್ಲಿದ್ದ ಕಸ ಕಡ್ಡಿಯನ್ನು ಕಾಲಿನಿಂದ ಕೆದಕುತ್ತಾ ಕೊಕ್ಕಿನಿಂದ ಕುಕ್ಕುತ್ತಾ ಕ್ಕೊ ಕ್ಕೊ ಎಂದು ಗಂಟಲಲ್ಲಿಯೇ ಕೂಗುತ್ತಾ ಅಲ್ಲಲ್ಲಿಯೇ ಸುತ್ತಾಡುತಿದ್ದಾಗ ಆ ಕಸದಲ್ಲಿ ಒಂದು ಕಡ್ಡಿಯ ಕೆಳಗೆ ಥಳಥಳನೆ ಹೊಳೆಯುತಿದ್ದ ಒಂದಾನೊಂದು ವಸ್ತುವನ್ನು ಕಂಡಿತು.

ಆಗ ಬಹು ಸಡಗರದಿಂದ, ರೆಕ್ಕೆಯನ್ನು ಬಡಿಯುತ್ತಾ ಕತ್ತನ್ನು ಎತ್ತಿ ಕೊ, ಕೊ, ಕೋ, ಎಂದು ಗಟ್ಟಿಯಾಗಿ ಕೂಗಿ ಕಿಚ್, ಕಿಚ್, ಕಿಚೆನ್ನುತ

ಬಂದ ತನ್ನ ಮರಿಗಳೊಡನೆ ದೊಡ್ಡ ದೊಡ್ಡ ಹಜ್ಜೆಯನ್ನಿಟ್ಟುಕೊಂಡು ಬೇಗನೆ ಆ ಸ್ಥಳಕ್ಕೆ ಹೋಗಿ, ಕಾಲಿನಿಂದ ಕೆದಕಿ, ಥಳಥಳಿಸುತ್ತಿದ್ದುದನ್ನು ಕೊಕ್ಕಿನಿಂದ ತೆಗೆದುಕೊಂಡಿತು.

ಅಯ್ಯೋ ಪಾಪ! ಅದು ಒಂದು ರತ್ನ! ಅದರ ಬೆಲೆಯನ್ನು ಕೋಳಿ ಏನು ಬಲ್ಲದು? ಅದನ್ನು ನೋಡಿ ಕೋಳಿಗೆ ಬಹು ದುಃಖವಾಯಿತು. ಆ ಥಳಥಳಿಸುತ್ತಿದ್ದ ಕೆಂಪನ್ನು ಉಗುಳಿ ಇದಕ್ಕಿಂತಲೂ ಒಂದು ಕಡಲೆ ಕಾಳಾಗಲಿ ಹೆಸರು ಕಾಳಾಗಲಿ ಸಿಕ್ಕಿದ್ದರೆ ನನಗೆ ಸಂತೋಷವಾಗುತ್ತಿತ್ತು? ಎಂದುಕೊಳ್ಳುತ್ತಾ ಆ ತಿಪ್ಪೆಯಲ್ಲಿಯೆ ಕಾಳು ಕಡ್ಡಿಯನ್ನು ಹುಡುಕಾಡುತಿದ್ದಿತು.

---

## ೧೮. ಇರುವೆಯೂ-ಚಿಮ್ಮಂಡೆ ಹುಳುವೂ.

ಚಳಿಗಾಲದಲ್ಲಿ ಒಂದು ದಿನ ಇರುವೆಗಳು ತಾವು ತಿಂಡಿಯನ್ನು ಕೂಡಿ ಹಾಕಿದ್ದ ಗೂಡಿಗೆ ಹೋಗಿದ್ದುವು. ಅಲ್ಲಿಗೆ ಒಂದು ತಾರಿ ಬಡಕಲಾದ ಚಿಮ್ಮಂಡೆ ಹುಳುವು ಬಂದು 'ನಾನು ಹಸಿವಿನಿಂದ ಸಂಕಟಪಡುತ್ತಿದ್ದೇನೆ. ತಿನ್ನುವುದಕ್ಕೆ ಏನಾದರೂ ಸ್ವಲ್ಪ ಕೊಡಿ' ಎಂದು ಇರುವೆಗಳನ್ನು ಕೇಳಿಕೊಂಡಿತು.

ಇರುವೆಗಳು—'ಏಕೆ! ನೀನು ಕೂಡಿಹಾಕಿದ್ದುದು ಏನಾಯಿತು? ನೀನು ಬೇಸಗೆಯಲ್ಲಿ ಕಾಳು ಕಡ್ಡಿಯನ್ನು ಕೂಡಿಹಾಕಲಿಲ್ಲವೆ?' ಎಂದು ಕೇಳಿದುವು. ಅದಕ್ಕೆ ಚಿಮ್ಮಂಡೆ ಹುಳವು—'ಅಯ್ಯೋ! ನನಗೆ ಹೊತ್ತೇ ಇರಲಿಲ್ಲ. ಬೇಸಗೆಯು ಬಹು ಚೆನ್ನಾಗಿದ್ದಿತು. ನಾನು ಮೂರು ಹೊತ್ತೂ ಹಾಡುತ್ತಲೆ ಕಾಲವನ್ನು ಕಳೆದೆನು' ಎಂದಿತು. 'ಓಹೋ! ಸರಿ, ಸರಿ: ಬೇಸಗೆಯಲ್ಲೆಲ್ಲಾ ಹಾಡಿದುದಾಯಿತು. ಈಗ ಚಳಿಗಾಲದಲ್ಲಿ ಹೊಟ್ಟೆಗಿಲ್ಲದೆ ಕುಣಿವುದಕ್ಕೆ ಹೊರಟಿದ್ದೀಯೆ?' ಎಂದು ಇರುವೆಗಳು ಅಪಹಾಸ್ಯ ಮಾಡಿ ನಕ್ಕುವು.

---

# ೧೯. ಅಭಿಮನ್ಯುವಿನ ಕಥೆ.

ಅಭಿಮನ್ಯುವು ಅರ್ಜುನನ ಮಗನು. ಅರ್ಜುನನು ಪಂಚಪಾಂಡವರೆಂಬ ಐದುಮಂದಿ ಅಣ್ಣ ತಮ್ಮಂದಿರಲ್ಲಿ ಒಬ್ಬನು. ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವ, ಇವರೇ ಪಂಚಪಾಂಡವರು. ಇವರಿಗೂ ಇವರ ದಾಯಾದಿಗಳಾದ ಕೌರವರಿಗೂ ರಾಜ್ಯಕ್ಕಾಗಿ ದೊಡ್ಡ ಯುದ್ಧವು ನಡೆಯಿತು. ಆ ಯುದ್ಧದಲ್ಲಿ ಒಂದು ದಿನ ಮಗುವಾದ ಅಭಿಮನ್ಯುವು ತೋರಿಸಿದ ಪರಾಕ್ರಮವನ್ನು ಈ ಹೊತ್ತು ಹೇಳುವೆನು ಕೇಳಿ.

ಕೌರವರಿಗೆಲ್ಲಾ ದುರ್ಯೋಧನನು ದೊರೆಯು. ದುರ್ಯೋಧನನಕಡೆ ಬಹು ಶಕ್ತರಾದ ದ್ರೋಣ, ಕೃಪ, ಅಶ್ವತ್ಥಾಮ, ಕರ್ಣ, ಶಲ್ಯ, ಸೈಂಧವ ಇವರೇ ಮುಂತಾದ ಮಹಾ ಶೂರರೂ, ಅನೇಕಸೈನಿಕರೂ ಇದ್ದರು. ಯುದ್ಧವು ನಡೆಯುತ್ತಿದ್ದಿತು. ದ್ರೋಣಾಚಾರ್ಯರು ಸೇನಾಧಿಪತಿಯಾಗಿದ್ದರು. ಅಂದು ಪಾಂಡವರನ್ನು ಸೋಲಿಸುವೆನೆಂದು ಹಟವನ್ನು ಮಾಡಿದ್ದರು. ಅದಕ್ಕಾಗಿ ಸೈನ್ಯದಿಂದಲೆ ಒಂದುಬಲವಾದ ಕೋಟೆಯನ್ನು ಕಟ್ಟಿದ್ದರು. ಆ ಕೋಟೆಯೊಳಗೆ ನುಗ್ಗಿ ಹೊಡೆಯಲು ಅರ್ಜುನನಿಗೂ, ಅವನ ಸಾರಥಿ ಶ್ರೀ ಕೃಷ್ಣನಿಗೂ ಗೊತ್ತು ಇದ್ದಿತು; ಧರ್ಮರಾಜ ಭೀಮರಿಗೆ ತಿಳಿದಿರಲಿಲ್ಲ. ಕೌರವರು ಉಪಾಯದಿಂದ ಅರ್ಜುನನನ್ನು ಬೇರೆ ಕಡೆ ಯುದ್ಧಕ್ಕೆ ಸೆಳೆದು, ಧರ್ಮರಾಜಭೀಮರಿಗೆ ಈ ಕೋಟೆಯೊಳಕ್ಕೆ ಬಂದು ಯುದ್ಧಮಾಡುವಂತೆ ಹೇಳಿ ಕಳುಹಿಸಿದರು. ಕ್ಷತ್ರಿಯರು ಯುದ್ಧಕ್ಕೆ ಬರಲಾರೆವೆಂದು ಹೇಳಿಕಳುಹಿಸಲು ಆದೀತೆ? ಆಗ ಏನು ಮಾಡಬೇಕು ? ಅರ್ಜುನನಾದರೋ ಬೇರೆ ಹೋಗಿದ್ದನು. ಭೀಮನಿಗೆ ಗದೆ ತಿರುಗಿಸಿ ಶತ್ರುಗಳನ್ನು ಕೊಲ್ಲಲು ಬರುತ್ತಿದ್ದಿತೇ ಹೊರತು ಅಂತಹ ಕೋಟೆಯನ್ನು ಬಾಣದಿಂದ ಭೇದಿಸಲು ಬಾರದು. ನಕುಲ ಸಹದೇವರು ಅಷ್ಟು ಸಮರ್ಥರಾಗಿರಲಿಲ್ಲ. 'ಏನು ಮಾಡುವುದು?' ಎಂದು ಧರ್ಮರಾಯನು ಯೋಚಿಸುತ್ತಿದ್ದಾಗ, ಅಲ್ಲಿ ಓಡಾಡುತ್ತಿದ್ದ ಅಭಿಮನ್ಯುವು, ಧರ್ಮರಾಯನಿಗೆ ನಮಸ್ಕರಿಸಿ, 'ನನಗೆ ಅಪ್ಪಣೆಯನ್ನು ಕೊಡಬೇಕು, ನಾನು ಆಕೋಟೆಯನ್ನು ಮುರಿದು ಕೌರವ ಸೈನ್ಯವನ್ನು ಧ್ವಂಸಮಾಡಿ, ಅತಿರಥ ಮಹಾರಥರನ್ನು ಸೋಲಿಸಿ, ಜಯಶಾಲಿಯಾಗಿ ಬರುವೆನು, ಎಂದನು. ಅದಕ್ಕೆ ಧರ್ಮರಾಯನು ' ನೀನು ಮಗು, ನಿನಗೆ ಸಾಧ್ಯವೆ ? ಯುದ್ಧದಲ್ಲಿ

ಚತುರನಾದ ನಿಮ್ಮ ತಂದೆಗಲ್ಲದೆ ಇನ್ನಾರಿಗೂ ಸಾಧ್ಯವಲ್ಲಪ್ಪ ! ರಣಧೀರನಾದ ಭೀಮನಿಗೂ ಅದು ಕಷ್ಟವಾಗಿರುವುದು. ನಿನಗೇಕೆ ಇದು, ಕಂದ! ಬೇಡ!' ಎಂದು ಹೇಳಲು, ಅಭಿಮನ್ಯುವು ಕೇಳದೆ, 'ನನಗೆ ಅಪ್ಪಣೆಯನ್ನು ಕೊಡಬೇಕು. ನಾನು ಹೋಗಿ ಬರುವೆನು' ಎಂದು ಮುಷ್ಕರ ಹಿಡಿದನು. ಆಗ ಧರ್ಮರಾಯನು ಯುಕ್ತವಿಲ್ಲದೆ ಅಪ್ಪಣೆಯನ್ನು ಕೊಟ್ಟು, ಆಶೀರ್ವದಿಸಿ ಕಳುಹಿಸಲು, ಮಕ್ಕಳು ಚೆಂಡಾಡುವುದಕ್ಕೆ ಕುಣಿಯುತ್ತಾ ಓಡುವಂತೆ ಅಭಿಮನ್ಯುವು ಸಂತೋಷದಿಂದ ರಥವನ್ನು ಸಿದ್ಧಮಾಡೆಂದು ಹೇಳಿ, ಬಿಲ್ಲು ಬಾಣಗಳನ್ನು ತೆಗೆದುಕೊಂಡು ಹೊರಟನು. ಧರ್ಮರಾಯನು ಅವನ ಬೆಂಗಾವಲಿಗೆ ಭೀಮ, ನಕುಲ, ಸಹದೇವರನ್ನು ಕಳುಹಿಸಿದನು.

ಅಭಿಮನ್ಯುವು, ದ್ರೋಣಾಚಾರ್ಯರು ಕಟ್ಟಿದ್ದ ಸೈನ್ಯದ ಕೋಟೆಯು ಒಳಗೆ ಬಂದು, ಬಾಗಿಲಲ್ಲಿ ಅದ್ಭುತಾಕಾರನಾಗಿ ನಿಂತಿದ್ದ ಸೈಂಧವನನ್ನು ಎರಡು ಬಾಣಗಳಿಂದ ಹೊಡೆದು, ಅವನು ಚೇತರಿಸುವುದರೊಳಗಾಗಿಯೇ ಒಳಕ್ಕೆ ನುಗ್ಗಿದನು. ಅಭಿಮನ್ಯುವಿನ ತರುವಾಯ ಬಂದ ಭೀಮ, ನಕುಲ ಸಹದೇವರಿಗೆ ಒಳಕ್ಕೆ ನುಗ್ಗಲು ಆಗಲಿಲ್ಲ. ಅವರು ಹೊರಗೆ ಬಡಿದಾಡುತ್ತಿದ್ದರು. ಬಾಲನಾದ ಅಭಿಮನ್ಯುವಾದರೊ, ಯಾರಿಗೂ ಅಂಜದೆ, ಎಲ್ಲೆಲ್ಲೂ ನುಗ್ಗುತ, ಒಂದೊಂದು ಬಾಣದಿಂದ ನೂರಾರು ಮಂದಿಯನ್ನು ಕೊಲ್ಲುತ, ಇದಿರಾಗಿ ಬಂದ ದ್ರೋಣಾಶ್ವತ್ಥಾಮರನ್ನು ಧಿಕ್ಕರಿಸಲು, ಅವರು, ಮಗು ಏನು ಮಾಡಾನೆಂದು ಇರುವಲ್ಲಿ, ಸ್ವಲ್ಪ ಕಾಲದಲ್ಲಿಯೆ ಸಾವಿರಾರು ಮಂದಿ ಮಡಿದರು. ಜನರ ಕೋಟೆಯು ಸಡಿಲುತ್ತ ಬಂದಿತು. ಆಗ ಕರ್ಣನು ಬಂದನು. ಮಹಾ ಶೂರನಾದ ಆ ಕರ್ಣನನ್ನು ನಾಲ್ಕಾರು ಬಾಣಗಳಿಂದ ಹೊಡೆದು, ಅವನ ಕುದುರೆ, ರಥ, ಧ್ವಜ ಇವೆಲ್ಲವನ್ನೂ ನಾಶಮಾಡಿ ಅಟ್ಟಿದನು. ದ್ರೋಣ, ಕೃಪ, ಅಶ್ವತ್ಥಾಮ ಇವರೆಲ್ಲರೂ, ಹಸುಳೆಯಂದ ಅಭಿಮನ್ಯುವಿನಪೆಟ್ಟಿಗೆ ನಿಲ್ಲಲಾರದೆ ಹೋದರು. ಅವರು ರೇಗಿ ರೇಗಿ ಮೇಲೆಬಿದ್ದ ಹಾಗೆಲ್ಲ, ಅಭಿಮನ್ಯುವು ನಗುನಗುತ ಅವರನ್ನು ಅಟ್ಟಿ, ಅವರ ರಥಗಳನ್ನು ಪುಡಿಪುಡಿಮಾಡಿ, ಅವರ ಕವಚಗಳನ್ನು ಕತ್ತರಿಸಿ, ಅವರ ಬಿಲ್ಲನ್ನು ಮುರಿದು, ರಣರಂಗದಿಂದ ಅವರನ್ನು ಸಾಗಿಸುತ್ತಿದ್ದನು. ಅಭಿಮನ್ಯುವಿನ ಬಾಣಗಳ ಉರಿಯು ಎಲ್ಲೆಲ್ಲೂ ಸುಡಹತ್ತಿತು. ಆನೆ ಕುದುರೆಗಳು ಆ ಬಾಧೆಯನ್ನು

ತಡೆಯಲಾರದೆ ಓಡಲಾರಂಭಿಸಿದುವು. ಎಲ್ಲೆಲ್ಲೂ ಕೋಲಾಹಲ, ಜನರ ಗೋಳು, ಶೂರರ ಆರ್ಭಟ, ಅಭಿಮನ್ಯುವಿನ ಹುಂಕಾರ ಧ್ವನಿ ಇವೇ ತುಂಬಿದ್ದುವು.

ಆಗ ದುರ್ಯೋಧನನು ಕಂಗೆಟ್ಟು ದ್ರೋಣಾಚಾರ್ಯರಲ್ಲಿಗೆ ಬಂದು,- ಒಂದು ಮಗುವಿಗೆ ನಾವು ಇಷ್ಟು ಹೆದರಬೇಕೆ? 'ನಾನು ಕರ್ಣನನ್ನು ಸುಡುತ್ತಿದ್ದೇನು, ನಮ್ಮ ತಂದೆಗೋಸ್ಕರ ಬಿಟ್ಟಿರುವೆನು. ದುಶ್ಶಾಸನನ ತಲೆಯನ್ನು ಚಂಡಾಡುತಿದ್ದೇನು. ನಮ್ಮ ದೊಡ್ಡಪ್ಪ ಭೀಮನಿಗೋಸ್ಕರ ಅವನನ್ನು ಉಳಿಸಿರುವೆನು' ಎಂದು ಅಭಿಮನ್ಯು ಹೇಳಿಕೊಳ್ಳುತ್ತಾ, ಸಿಂಹದ ಮರಿಯಂತೆ ಮೆರೆಯುತ್ತಿರುವನಲ್ಲ! ಏನು ಗತಿ? ಪದಾತಿಗಳು ಓಡುವ ಯೋಚನೆಯನ್ನು ಮಾಡುತ್ತಿರುವರಲ್ಲ! ಮುಂದೇನುಮಾಡುವುದು?-ಎನ್ನಲು ಆಗ ದ್ರೋಣರು ಅಯ್ಯಾ? ಅಭಿಮನ್ಯುವಿನ ಕೈಯಲ್ಲಿ ಆ ಬಿಲ್ಲು ಇರುವವರೆಗೂ ಅವನನ್ನು ಸೋಲಿಸಲು ನಮ್ಮಲ್ಲಿ ಯಾರಿಂದಲೂ ಸಾಧ್ಯವಲ್ಲ-ಎಂದರು. ಆಗ ಅವರಲ್ಲೊಬ್ಬನು,-ನೀವು ಅಭಿಮನ್ಯುವಿಗೆ ಇದಿರಾಗಿ ಯುದ್ಧಮಾಡಿರಿ, ನಾನು ಮೆಲ್ಲನೆ ಹಿಂದಿನಿಂದ ಅವನ ಬಿಲ್ಲನ್ನು ಕತ್ತರಿಸುವೆನು ಎಂದನು. ಆ ಹೇಡಿಯ ಸಲಹೆಗೆ ಆ ಮಹಾಶೂರರೆಲ್ಲರೂ ಒಪ್ಪಿದರು. ಅದೇ ವೇಳೆ ಮತ್ತೆ ಹೊಸ ರಥಗಳನ್ನೇರಿ, ಹೊಸ ಕವಚಗಳನ್ನು ತೊಟ್ಟು ಹೊಸ ಬಾಣಗಳನ್ನು ಹಿಡಿದು ಹೊಸ ಶೂರರಂತೆ ಎಲ್ಲರೂ ಒಟ್ಟಾಗಿ ಬಂದು ಒಂದೇ ಸಮನಾಗಿ ಬೆಳಗ್ಗಿನಿಂದಲೂ ಅಸಹಾಯನಾಗಿ ಯುದ್ಧಮಾಡುತ್ತಿರುವ ಆ ಮಗುವಿನಮೇಲೆ ಬಿದ್ದರು. ಅಭಿಮನ್ಯುವು ಸ್ವಲ್ಪವೂ ಹಿಂದೆಗೆಯದೆ, ಬಾಣದ ಮಳೆಯನ್ನೇ ಅವರಮೇಲೆ ಕರೆದು, ಮತ್ತೆ ಬಾಣವನ್ನು ಹೊಡುತ್ತಿದ್ದನು. ಆಗ ಹಿಂದುಗಡೆಯಿಂದ ಬಂದು ಶೂರನೊಬ್ಬನು ಬಿಲ್ಲಿನ ಹುರಿಯನ್ನು ಕತ್ತರಿಸಿದನು. ಅಭಿಮನ್ಯುವು ಹಿಂದಿರುಗಿ ನೋಡಿ, 'ಆಃ! ಎಂತಹ ಶೂರ' ಎಂದು ಬಿಲ್ಲನ್ನು ಬಿಸಾಟು, ಕತ್ತಿಯನ್ನು ಹಿರಿದು, ಶತ್ರುಗಳ ಮೇಲೆ ಬಿದ್ದನು. ಆಗ ಶತ್ರುಗಳು ಹೊಡೆಯುತ್ತಿದ್ದ ಬಾಣಗಳನ್ನೆಲ್ಲಾ ಅಭಿಮನ್ಯು ಕತ್ತಿಯನ್ನು ತಿರುಗಿಸಿ ತಪ್ಪಿಸುತ್ತಿರಲು, ಒಂದು ಬಾಣವು ಬಂದು ಕೈಯನ್ನು ಕತ್ತರಿಸಿತು. ಆಗ ರಥದ ಚಕ್ರವನ್ನು ಒದೆದು ತೆಗೆದು, ಒಂದುಕೈಯಿಂದಲೆ ತಿರುಗಿಸಿ ತಿರುಗಿಸಿ ಅಪ್ಪಳಿಸುತ್ತಿರಲು, ಇನ್ನೊಂದು ಕೈಯನ್ನೂ ಕತ್ತರಿಸಿದರು. ಅಷ್ಟಾದರೂ

ಒಬ್ಬರನ್ನೂ ಹತ್ತಿರ ಸೇರಿಸದೆ ಇರಲು, ಒಬ್ಬ ವೀರನು ಬಂದು ಮುಷ್ಟಿ ಯುದ್ಧಕ್ಕೆ ಕರೆದನು. ಅದಕ್ಕೂ ಸಿದ್ಧನಾಗಿ ನಿಂತು ವೊಂದು ತೋಳುಗ ಳಿಂದ ಯುದ್ಧವನ್ನು ಮಾಡಿ ಶತ್ರುವನ್ನು ಬಲವಾಗಿ ಹೊಡೆದನು. ಅವನೂ ಒಂದು ಬಲವಾದ ಪೆಟ್ಟನ್ನು ಕೊಡಲು,ಶ್ರಾಂತನಾದ ಅಭಿಮನ್ಯುವು ಅಲ್ಲಿಯೇ ಪ್ರಾಣವನ್ನು ಬಿಟ್ಟನು. ಅವನ ಶತ್ರುವೂ ಅಭಿಮನ್ಯುವಿನ ಏಟಿನಿಂದ ರಕ್ತ ವನ್ನು ಕಾರಿ ಪ್ರಾಣವನ್ನು ಬಿಟ್ಟನು. ಬಾಲಕರಲ್ಲಿ ಶೂರನೆಂದರೆ ಇವನೇ ಅಲ್ಲವೆ ?

---

## ೨೦. ಶಿವಾಜಿಮಹಾರಾಜ.

ಸುಮಾರು ಇನ್ನೂರ ಐವತ್ತು ವರ್ಷಗಳ ಹಿಂದೆ ಮಹಾರಾಷ್ಟ್ರದೇಶ ವನ್ನು ಶಿವಾಜಿ ಮಹಾರಾಜನು ಆಳುತ್ತಿದ್ದನು. ಇವನು ಷಾಜಿಯ ಮಗನು. ಮಗುವಾಗಿದ್ದಾಗಲೇ ಇವನ ತಂದೆಯು ಇವನನ್ನು ಸಾಕಿ ಸಲಹುವುದಕ್ಕೆ ತಕ್ಕ ಏರ್ಪಾಟನ್ನು ಮಾಡಿ ಪುನೆ ಎಂಬ ಒಂದು ಪಟ್ಟಣದಲ್ಲಿ ಬಿಟ್ಟಿದ್ದನು. ಅಲ್ಲಿ ಹುಡುಗರ ಗುಂಪಿನಲ್ಲೆಲ್ಲಾ ಶಿವಾಜಿಯೇ ಮುಂದಾಳಾಗಿದ್ದನು. ಯಾವ ಆಟದಲ್ಲಿಯೂ ಶಿವಾಜಿಯೇ ಮುಂದು ; ಇವನು ಯಾವ ಕುದುರೆ ಯನ್ನಾದರೂ ಏರಲು ಶಕ್ತನಾಗಿದ್ದನು. ಗುರಿ ಕಟ್ಟಿ ಹೊಡೆವುದರಲ್ಲಿ ಶಿವಾ ಜಿಗೆ ಸಮರಾದ ಬಾಲಕರೇ ಆ ಊರಲ್ಲಿರಲಿಲ್ಲ. ಕತ್ತಿ ಕಠಾರಿಗಳನ್ನು ತಿರು ಗಿಸುವುದರಲ್ಲಿ ಶಿವಾಜಿಯು ನಿಪುಣನಾಗಿದ್ದನು. ಇವನಿಗೆ ರಾಮಾಯಣ ಮಹಾಭಾರತಗಳನ್ನು ಕೇಳುವುದರಲ್ಲಿ ಬಹು ಆದರ. ಆ ಪುರಾಣಗಳಲ್ಲಿ ಪ್ರಸಿದ್ಧಿಗೊಂಡ ಶೂರರಂತೆ ತಾನೂ ಹೆಸರುವಾಸಿಯಾಗಬೇಕೆಂಬುದು ಶಿವಾ ಜಿಯ ಆಶೆ. ಅಲ್ಲದೆ ಆಗಿನ ಕಾಲದಲ್ಲಿ ಪ್ರಬಲರಾಗಿದ್ದ ತುರುಕರನ್ನು ಹಿಂದೂ ದೇಶದಿಂದ ಓಡಿಸಿ, ಹಿಂದೂ ರಾಜ್ಯವನ್ನೂ, ಹಿಂದೂಧರ್ಮವನ್ನೂ ಸ್ಥಾಪಿಸ ಬೇಕೆಂಬುದೇ ಶಿವಾಜಿಯ ಸಂಕಲ್ಪ.

ತನಗೆ ಪ್ರಾಯವು ಬರಲು, ಶಿವಾಜಿಯು ತನ್ನ ಜತೆಗಾರರನ್ನು ಸೇರಿ ಸಿಕೊಂಡು, ಹತ್ತಿರ ಹತ್ತಿರ ಇದ್ದ ಹಳ್ಳಿಪಳ್ಳಿಗಳ ಮೇಲೆಬಿದ್ದು ಅವನ್ನು ಸ್ವಾಧೀನ ಮಾಡಿಕೊಂಡು, ಮೆಲ್ಲನೆ ಒಂದು ಕೋಟೆಯನ್ನು ಹಿಡಿದು ಅಲ್ಲಿ

ಸಿಕ್ಕಿದ ಹಣದಿಂದ ಮದ್ದು ಗುಂಡುಗಳನ್ನು ಕೊಂಡುಕೊಂಡು, ಹೆಚ್ಚು ಹೆಚ್ಚು ಜನರನ್ನು ಸೇರಿಸಿ, ತನ್ನದೇ ಒಂದು ಬಲವಾದ ಕೋಟೆಯನ್ನು ಕಟ್ಟಿ ಪ್ರಬಲನಾದನು. ಇವನ ಹಾವಳಿಯನ್ನು ಕೇಳಿ ಇವನನ್ನು ಅಡಗಿಸಬೇಕೆಂದು ಮುಗ್ಲಲ ರಾಜ್ಯದ ತುರುಕರಾಜರು ಎಷ್ಟೋ ಪ್ರಯತ್ನ ಪಟ್ಟರು. ಇವನ ತಂದೆಯನ್ನು ಸೆರೆಯಲ್ಲಿಟ್ಟರು. ಯಾವುದಕ್ಕೂ ಜಗ್ಗಲಿಲ್ಲ. ತಂದೆಯನ್ನು ಬಿಡಿಸಿಕೊಂಡನು. ಕೊನೆಗೆ ಒಂದು ದೊಡ್ಡ ಸೈನ್ಯವನ್ನೂ ಕಳುಹಿಸಿದರು. ಆ ಸೈನ್ಯವು ತನ್ನ ಸೈನ್ಯಕ್ಕಿಂತಲೂ ಬಲವಾಗಿದ್ದುದನ್ನು ನೋಡಿ, ಶಿವಾಜಿಯು ತನಗೆ ಜಯವಾಗಲಾರದೆಂದು ತಿಳಿದು, ಉಪಾಯದಲ್ಲಿ ತುರುಕರ ಸೇನಾಧಿಪತಿಯನ್ನು ಬೇರೆ ಬರುವಂತೆ ಹೇಳಿ ಕಳುಹಿಸಿ ತಾನು ಶರಣಾಗತನಾಗುವೆನೆಂದು ತಿಳಿಸಿ. ಅವನು ಒಬ್ಬನೇ ಬಂದಾಗ ಅವನಮೇಲೆ ಬಿದ್ದು ಅವನ ಹೊಟ್ಟೆಯನ್ನು ಬಗಿದು ಕೊಂದು ಶತ್ರುಗಳನ್ನು ಓಡಿಸಿದನು.

ತರುವಾಯ ದೆಹಲಿ ಚಕ್ರವರ್ತಿಯು ಶಿವಾಜಿಯನ್ನು ಅಡಗಿಸಬೇಕೆಂದು ಒಂದು ದೊಡ್ಡ ಸೈನ್ಯವನ್ನು ಕಳುಹಿಸಿದನು. ಆ ಸೈನ್ಯದವರು ಬಂದು ಇವನ ಪಟ್ಟಣವಾದ ಪುನೆಯನ್ನು ಆಕ್ರಮಿಸಿಕೊಂಡು, ಇವನ ಮನೆಯಲ್ಲಿಯೇ ಅವರ ಸೇನಾಧಿಪತಿಯು ಇಳಿದುಕೊಂಡನು. ಶಿವಾಜಿಯು ಇದನ್ನು ಕೇಳಿ ಮದುವೆಯ ಮೆರೆವಣಿಗೆಯವರೊಂದಿಗೆ ಸೇರಿ ಶತ್ರುಸೇನಾಧಿಪತಿಯ ಮನೆಯೊಳಕ್ಕೆ ನುಗ್ಗಿದನು. ಆಗ ಅವನು ಬಹು ಕಷ್ಟದಿಂದ ತಲೆ ತಪ್ಪಿಸಿಕೊಂಡು ಹೋದನು. ಆದರೂ ಅವನ ಕಿರುಬೆರಳು ಕತ್ತರಿಸಿ ಹೋಯಿತು. ಸೇನಾಧಿಪತಿಯು ಹಿಂದಿರುಗಿ ಬರುವುದರಲ್ಲಿ ಶಿವಾಜಿಯು ಮಾಯವಾಗಿದ್ದನು. ಅನಂತರ ಶಿವಾಜಿಯು ದೆಹಲೀ ಚಕ್ರವರ್ತಿಯೊಡನೆ ಸ್ನೇಹವನ್ನು ಬೆಳಸಿ ದೆಹಲಿಗೆ ಹೋದನು. ಅಲ್ಲಿ ದರ್ಬಾರಿನಲ್ಲಿ ತನಗೆ ಅಪಮಾನವಾಯಿತೆಂದು ಸ್ವಲ್ಪ ಕೂಗಾಡಲು, ಚಕ್ರವರ್ತಿಯು ಶಿವಾಜಿಯನ್ನು ಸೆರೆಯಲ್ಲಿಟ್ಟನು.

ಆ ಸೆರೆಮನೆಯಲ್ಲಿದ್ದಾಗ ಶಿವಾಜಿಗೆ ನಿತ್ಯವೂ ಹಣ್ಣು, ಪಲ್ಯ, ಕಾಯಿ, ಹೂ ಇವನ್ನು ಬುಟ್ಟಿ ಬುಟ್ಟಿಯಲ್ಲಿ ಕಳುಹಿಸುತ್ತಿದ್ದರು. ಶಿವಾಜಿಯು ಬುಟ್ಟಿ ಬುಟ್ಟಿಯಲ್ಲಿ, ಹಣ್ಣನ್ನೂ, ತಿಂಡಿಯನ್ನೂ, ಸರದಾರರಿಗೂ ಬ್ರಾಹ್ಮಣರಿಗೂ ಕಳುಹಿಸುತ್ತಿದ್ದನು. ಒಂದು ದಿನ, ಹಣ್ಣಿನ ಬುಟ್ಟಿಯಲ್ಲಿ ತಾನೇ ಕುಳಿತು

ಕೊಂಡು, ಹೊರಿಸಿಕೊಂಡು, ಹೊರಕ್ಕೆ ಬಂದು ದೆಹಲಿಯಿಂದ ತಪ್ಪಿಸಿಕೊಂಡು, ಸನ್ಯಾಸಿಯಹಾಗೂ ವರ್ತಕನಹಾಗೂ ತೀರ್ಥಯಾತ್ರೆಗೆ ಬಂದವನಹಾಗೂ ವೇಷವನ್ನು ಹಾಕಿಕೊಂಡು ಬಹು ಕಷ್ಟಪಟ್ಟು ಕೊನೆಗೆ ತನ್ನ ದೇಶವನ್ನು ಸೇರಿ, ಅಲ್ಲಿ ಮಹಾರಾಜನೆಂಬ ಬಿರುದನ್ನು ಪಡೆದು, ತನ್ನ ತೂಕ ಭಂಗಾರವನ್ನು ಬ್ರಾಹ್ಮಣರಿಗೆ ದಾನಮಾಡಿ, ಮಹಾರಾಷ್ಟ್ರರಾಜ್ಯವನ್ನು ಕಟ್ಟಿದನು. ಈ ಶೂರನು ತನ್ನ ಐವತ್ತೆರಡನೆಯ ವಯಸ್ಸಿನಲ್ಲಿ ದೈವಾಧೀನವಾದನು.

---

## ೨೧. ರಾಗಿರಾಮಾಯಣ.

ಅಮರಾವತಿ ಎಂಬುದೊಂದು ಪಟ್ಟಣ. ಆ ಪಟ್ಟಣದಲ್ಲಿ ಅಮರಶೇಖರರಾಯನೆಂಬ ಒಬ್ಬ ದೊರೆ. ಆ ದೊರೆಗೆ ಪ್ರಜೆಗಳೆಲ್ಲರೂ ತಾವು ಬೆಳೆದ ಧಾನ್ಯಗಳನ್ನೇ ಕಪ್ಪವಾಗಿ ಕೊಡುತ್ತಿದ್ದರು. ಆದುದರಿಂದ ಆ ದೊರೆಗೆ ಸೇರಿದ ದೊಡ್ಡ ಅರಮನೆಯಲ್ಲಿ ಎಲ್ಲೆಲ್ಲಿ ನೋಡಿದರೂ ರಾಗಿ, ಗೋಧಿ, ಜೋಳ ಭತ್ತ ಇವುಗಳ ರಾಸಿಗಳೇ ಕಾಣಬರುತ್ತಿದ್ದುವು. ಹೀಗಿರುವಾಗ ಒಂದು ದಿನ ರಾತ್ರಿ, ಕಾವಲುಗಾರರು ಬಾಗಿಲುಗಳನ್ನು ಹಾಕಿಕೊಂಡು ಹೊರಗೆ ತೂಕಡಿಸುತ ಕುಳಿತಿದ್ದಾಗ, ಧಾನ್ಯವಿಲಾಸದಲ್ಲಿ ಏನೋ ಗದ್ದಲವಾದಂತೆ ಕೇಳಬಂದಿತು. ಬಾಗಿಲಲ್ಲಿ ಅರ್ಧನಿದ್ರೆಯಲ್ಲಿದ್ದ ಕಾವಲುಗಾರನೊಬ್ಬನೆದ್ದು—ಇದೇನು ಗದ್ದಲವಿರಬಹುದು ? ಎಂದು ಬಾಗಿಲಿಗೆ ಕಿವಿಗೊಟ್ಟು ಕೇಳಿದನು ? ಆಗ ಧಾನ್ಯಗಳೆಲ್ಲೊಂದೊಂದೂ ತಮ್ಮ ತಮ್ಮ ಯೋಗ್ಯತೆಗಳನ್ನು ಹೇಳಿ ಕೊಂಡು, ನಾನು ದೊಡ್ಡದು, ತಾನು ದೊಡ್ಡದು, ಎಂದು ಕೂಗಾಡುತ ಇದ್ದುವು. ಅವುಗಳಲ್ಲೆಲ್ಲಾ ಗೋಧಿಯ ಡಂಭವಾದಮಾತು ಗಟ್ಟಿಯಾಗಿ ಕೇಳಿಬರುತಿದ್ದಿತು. ಗೋಧಿಯು, ಎಲೈ ಧಾನ್ಯರಾಜಗಳಿರಾ ! ನನ್ನ ಯೋಗ್ಯತೆಯನ್ನು ಕುರಿತು ಹೇಳುತ್ತೇನೆ. ಸ್ವಲ್ಪ ಕೇಳಿ, ಸುಮ್ಮನೆ ಎಲ್ಲರೂ ಕೂಗಿಕೊಂಡು ಉಪಯೋಗವೇನು ಎಂದು ಗರ್ಜಿಸಲು, ಎಲ್ಲವೂ ಸುಮ್ಮನಾದುವು. ಆಗ, ಗೋಧಿಯು, ತನ್ನ ಮಾಹಾತ್ಮ್ಯವನ್ನು ಹೇಳ ತೊಡಗಿತು. 'ನನ್ನನ್ನು ಸಾಮಾನ್ಯನೆಂದು ಭಾವಿಸಬೇಡಿ. ಪ್ರಪಂಚದ ಅನೇಕ

ಭಾಗಗಳಲ್ಲಿ ನನ್ನನ್ನು ಬೆಳೆಯುವರು. ಲಕ್ಷಾಂತರ ಜನರು ನನ್ನನ್ನು ತಿಂದು ಜೀವಿಸುವರು. ನನ್ನಿಂದ ಮಾಡತಕ್ಕ ಪದಾರ್ಥಗಳು ಒಂದಕ್ಕಿಂತಲೂ ಒಂದು ಸವಿಯಾಗಿರುವುವು. ರಾಜಾಧಿರಾಜರಿಗೆಲ್ಲ ನಾನೇ ಪುಷ್ಟಿ ಕೊಡತಕ್ಕವನು. ಶುಭಾಶುಭಗಳಲ್ಲಿ ನನ್ನನ್ನು ಉಪಯೋಗಿಸುವರು. ನವಗ್ರಹಗಳಲ್ಲಿ ಶ್ರೇಷ್ಠನಾದ ಸೂರ್ಯನ ಅಭಿಮಾನಕ್ಕೆ ಪಾತ್ರನು. ನನ್ನಿಂದಲ್ಲವೆ ಒಬ್ಬಟ್ಟು, ಚಿರೋಟಿ, ಫೇಣಿ, ಮಂಡಿಗೆ, ಗುಳೋರಿಗೆ, ಸೇವಿಗೆ, ಪೂರಿ, ರೊಟ್ಟಿ, ಬಿಸ ಕತ್ತು ಮುಂತಾದ ಶ್ಲಾಘ್ಯವಾದ ಪದಾರ್ಥಗಳು ಆಗುವುವು. ನನ್ನ ಹೊಳಪೇ ಸಾಕು. ನನ್ನ ರೂಪೇ ಸಾಕು. ನನ್ನ ನಾಟಿಗೆ ನಿಲ್ಲತಕ್ಕ ಧಾನ್ಯವು ಮತ್ತಾವುದುಂಟು. ಎಂದು ಹೇಳುತ್ತಿರುವಷ್ಟರಲ್ಲಿಯೇ, ಅಕ್ಕಿಯು ಎದ್ದು 'ಸಾಕು ! ಸಾಕು ! ನಾನು ಕೇಳಲಾರೆ ! ನಿನ್ನ ಚಿರೋಟಿ, ಫೇಣಿ, ಗುಳೋರಿಗೆ ಇವನ್ನೇ ತಿಂದು ಯಾರು ತಾನೇ ಬದುಕಾರು ? ಹಸಿವನ್ನು ಅಡಗಿಸಲು ನಿನ್ನಿಂದ ಏನು ಸಾಧ್ಯ ! ಲೋಕ ಪ್ರಸಿದ್ಧವಾದ ಕಾವೇರೀ ತೀರ, ಗಂಗಾ ತೀರ, ಇವುಗಳಲ್ಲಿ ನೋಡಿ, ಎಷ್ಟೆಷ್ಟುದೂರ ನೋಡಿದರೂ ನನ್ನ ಆಳುವಿಕೆಯಲ್ಲಿರುವ ಭೂಮಿಯೇ ಗೋಚರವಾಗುವುದು. ನನ್ನನ್ನು ಶಾಲ್ಯನ್ನಮಾಡಿ ದೇವರಿಗೆ ಅಭಿಷೇಕಮಾಡುವರು. ನನ್ನಿಂದ ಕೇಸರಿ ಭಾತ್, ವಾಂಗೀಭಾತ್, ಬಕಾಳಭಾತ್, ಚಿಂಚಾಬಾತ್ ಇವೇ ಮುಂತಾದ ನಾನಾತೆರನಾದ ಅನ್ನಗಳನ್ನು ಮಾಡುವರು. ದಾನದಲ್ಲೆಲ್ಲಾ ಅನ್ನದಾನವೇ ಶ್ರೇಷ್ಠವೆನ್ನುವರು. ನನ್ನ ವಿನಾ ಯಾವ ಶುಭಕಾರ್ಯವೂ ನಡೆಯದು. ನೀವೇ ಯೋಚಿಸಿ. ನಾನು ದೊಡ್ಡವನೇ, ಗೋಧಿರಾಯ ದೊಡ್ಡವನೇ? ಗೋಧಿ, ರಾಗಿ, ಜೋಳ ಇವರು ಬೆಳೆವುದಕ್ಕೆ ಮಳೆ ಬೀಳಬೇಕು. ಇವರು ಹೊರ ಹೊರಡಬೇಕು. ನನಗೆ ಹೊತ್ತಿಗೆ ಇಷ್ಟು ನದೀನೀರು ಬಂದರೆ ಸಾಕು. ಬೇಕಾದ ಹಾಗೆ ಬೆಳೆವೆನು- ಎಂದು ವಾದಿಸಿತು. ಇದನ್ನು ಕೇಳಿ ಒಂದು ಮೂಲೆಯಲ್ಲಿದ್ದ ಜೋಳವು ಎದ್ದು ಬಂದು-ನನ್ನನ್ನು ತಿಂದು ಜನರು ಎಷ್ಟು ಗಟ್ಟಿಮುಟ್ಟಾಗಿರುವರು. ನನ್ನ ಕಡ್ಡಿಯು ಆ ಕಾಮಧೇನುವಿಗೆ ಕೂಡ ಆಹಾರವಾಗಿರುವುದು. ನನ್ನ ಅರಳು, ನನ್ನ ರೊಟ್ಟಿ, ನನ್ನ ಕಡ್ಡಿ, ಇವೇ ಸಾಕು. ನನ್ನ ಗುಣವನ್ನು ಕೊಂಡಾಡುವುವು. ಹೆಚ್ಚು ಮಾತೇಕೆ ? ಎಂದಿತು. ಆಗ ರಾಸಿರಾಸಿಯಾಗಿ ಬಿದ್ದಿದ್ದ ರಾಗಿಯೂ, ಮೆಲ್ಲಮೆಲ್ಲನೆ ನುಣುಚಿಕೊಂಡು ಮುಂದೆ ಬಂದು, ಆಕಾರದಲ್ಲಿ ಸಣ್ಣದಾಗಿಯೂ ಬಣ್ಣದಲ್ಲಿ ಕಪ್ಪಾಗಿಯೂ ಇದ್ದುದರಿಂದ ಗಟ್ಟಿ

ಯಾಗಿ, ‘ ಹಲವು ಮಾತೇಕೆ ! ನಾನೇನೊ ಬಡವರ ಆಧಾರಿ. ದೊಡ್ಡವರ ಆಶ್ರಯು ನನಗೆ ನಿಜವಾಗಿಯೂ ಇಲ್ಲ. ರಾಜಾಧಿರಾಜರುಗಳೂ, ಧನಾಧಿ ಕಾರಿಗಳೂ ನನ್ನನ್ನು ಸೇವಿಸುವುದಿಲ್ಲ. ಬಡವರ ಕೂಗು ಗಗನ ಮುಟ್ಟೀತೆ? ಆದುದರಿಂದ ನನ್ನ ಕೂಗು ಪ್ರಯೋಜನವಿಲ್ಲದಿದ್ದರೂ, ನಾನು ಒಂದೇ ಒಂದು ಮಾತನ್ನು ಹೇಳುವೆನು ಕೇಳಿ, ಯಾವ ಪದಾರ್ಥದ ಯೋಗ್ಯತೆ ಯನ್ನು ಪರೀಕ್ಷಿಸಬೇಕಾದರೂ ಸಾವಕಾಶವಾಗಿ ಪರೀಕ್ಷಿಸಬೇಕು. ನಮ್ಮೆ ಲ್ಲರನ್ನೂ ಒಂದೊಂದು ಕಡೆ ಯಾರಾದರೂ ನಾಲ್ಕಾರುವರ್ಷ ಇಟ್ಟು ತರು ವಾಯ ತೆಗೆಯಲಿ. ಆಗ ನಮ್ಮನಮ್ಮ ಯೋಗ್ಯತೆಯು ಪ್ರಕಾಶವಾಗುವುದು’ ಎಂದಿತು. ಇಷ್ಟರಲ್ಲಿಯೇ ಬೆಳಗಾಯಿತು.

ರಾತ್ರಿ ನಡೆದ ವಿಚಿತ್ರವನ್ನು ಕಾವಲುಗಾರನು ಅಮರಶೇಖರರಾಯ ನಿಗೆ ತಿಳಿಸಿದನು. ಇದನ್ನು ಪರೀಕ್ಷಿಸಬೇಕೆಂದು ಪ್ರತಿಯೊಂದು ಧಾನ್ಯ ವನ್ನೂ ಬೇರೆಬೇರೆ ಹಗೇವುಗಳಲ್ಲಿ ಹಾಕಿ ಮುಚ್ಚಿಡಿಸಿದ್ದು-ಕೆಲವು ವರ್ಷಗಳ ಮೇಲೆ ಒಂದು ದಿನ ರಾಜನು ಓಲಗದಲ್ಲಿ ಜ್ಞಾಪಿಸಿಕೊಂಡು ಹಗೇವುಗಳಲ್ಲಿ ಹೂಳಿದ್ದ ಧಾನ್ಯಗಳನ್ನು ತರಿಸಿದನು. ಅವುಗಳಲ್ಲಿ ರಾಗಿಯೊಂದು ವಿನಾ ಉಳಿದುವೆಲ್ಲವೂ, ಹುಳಿತು, ಕೊಳತು, ಹಾಳಾಗಿ ಹೋಗಿದ್ದುವು. ಅಂದು ರಾಗಿಯೇ ಶ್ರೇಷ್ಠವೆಂದು ಜನರೆಲ್ಲರೂ ಗೊತ್ತುಮಾಡಿದರು. ಇತರ ಧಾನ್ಯ ಗಳೂ ಒಪ್ಪಿಕೊಂಡುವು.

---

## ೨೨. ಉತ್ತರನ ಕಥೆ.

ಉತ್ತರನು ವಿರಾಟರಾಜನ ಮಗನು. ಒಂದು ದಿನ ವಿರಾಟನರಾಜ್ಯಕ್ಕೆ ಶತ್ರುಗಳು ನುಗ್ಗಿ ದಕ್ಷಿಣದಿಕ್ಕಿನಲ್ಲಿ ಮೇಯುತ್ತಿದ್ದ ರಾಜನ ಆಕಳುಗಳನ್ನು ಅಟ್ಟಿಕೊಂಡು ಹೋದರು. ಆ ಶತ್ರುಗಳನ್ನು ಓಡಿಸಿ ಹಸುಗಳನ್ನು ಬಿಡಿಸಿ ಕೊಂಡು ಬರಲು, ವಿರಾಟನು ದೊಡ್ಡ ಸೇನೆಯೊಡನೆ ಹೊರಟನು. ಮರು ದಿನ ಕುಯ್ಯೋ, ಮರ್‍ರೋ ಎಂದು ಉತ್ತರದಿಕ್ಕಿನಿಂದ ಗೋಪಾಲಕರು ಓಡಿ ಬಂದು ಹಸುಗಳನ್ನೆಲ್ಲಾ ಶತ್ರುಗಳು ಅಟ್ಟಿಕೊಂಡು ಹೋದರೆಂದು ಕೂಗಿ

ಕೊಂಡರು. ಈ ಕೂಗು ಅಂತಃಪುರದಲ್ಲಿದ್ದ ಉತ್ತರನಿಗೆ ಮುಟ್ಟಿತು. ಆಗ ತಾಯಿ, ತಂಗಿ, ಮತ್ತು ಇತರ ಹೆಂಗಸರೊಡನೆ ಮಾತನಾಡುತ್ತ ಕುಳಿತಿದ್ದ ಉತ್ತರನು ಆ ಕೂಗನ್ನು ಕೇಳಿ, 'ಏನು ನಮ್ಮ ಹಸುಗಳನ್ನು ಹಿಡಿದಿರುವರೆ? ಅವರಿಗೆ ಎಷ್ಟು ಧೈರ್ಯ' ನಾನು ಇರುವುದನ್ನು ಮರೆತಿರುವರೊ ? ಈಗ ಹೊರಟು ಅವರುಗಳನ್ನು ಪುಡಿ ಪುಡಿ ಮಾಡಿ ಬರುವೆನು. ಎಲ್ಲಿ ನನ್ನ ಸಾರಥಿಯೆಲ್ಲಿ– 'ಹಾ ! ಈ ಸಮಯದಲ್ಲಿ ನನಗೆ ತಕ್ಕ ಸಾರಥಿ ಇಲ್ಲದೆಹೋದನಲ್ಲ' ಸಾರಥಿಯೊಬ್ಬನಿದ್ದರೆ ಆ ದುಷ್ಟ ಕೌರವರ ಅಹಂಕಾರವನ್ನು ಅಡಗಿಸುತ್ತಿದ್ದೆನಲ್ಲ; ಆ ಶತ್ರುಸೇನೆಯಲ್ಲಿರುವ, ಭೀಷ್ಮ, ದ್ರೋಣ, ಕೃಪಾಚಾರ್ಯ ಮೊದಲಾದವರ ಮೇಲೆ ಬಿದ್ದು ನುಗ್ಗಿ ನುಚ್ಚು ನುರಿಮಾಡುತ್ತಿದ್ದೆನಲ್ಲ; ಕರ್ಣ, ಅಶ್ವತ್ಥಾಮ ಮುಂತಾದವರ ಹೆಸರನ್ನೇ ಅಳಿಸಿಬಿಡುತ್ತಿದ್ದೆನಲ್ಲ ; ಯಮಪುರಿಯಲ್ಲಿ ಸ್ಥಳವಿಲ್ಲದಂತೆ ಮಾಡುತ್ತಿದ್ದೆನಲ್ಲ; ಏನುಮಾಡಲಿ; ನನ್ನ ರಥವನ್ನು ನಡೆಯಿಸುವರು ಯಾರೂ ಇಲ್ಲವಲ್ಲ. ಹಾ ! ಎಂದು ಅರ್ಭಟಿಸುತ್ತಿದ್ದನು.

ವಿರಾಟನ ಮಗಳಾದ ಉತ್ತರೆಗೆ ಪಾಠವನ್ನು ಕಲಿಸುತ್ತಿದ್ದ ಬೃಹನ್ನಳೆಯು ಸಾರಥ್ಯದಲ್ಲಿಯೂ ಬಲು ಗಟ್ಟಿಗನೆಂದು ಹತ್ತಿರದಲ್ಲಿದ್ದವರೊಬ್ಬರು ಉತ್ತರೆಗೆ ತಿಳಿಸಲು, ಅವಳು ಬೃಹನ್ನಳೆಯನ್ನು ಸಾರಥ್ಯಕ್ಕೆ ಕರೆದುಕೊಂಡು ಹೋಗಬಹುದೆಂದು ಹೇಳಿದಳು. ಅದಕ್ಕೆ ಉತ್ತರನು ' ಛಿ ! ಬೃಹನ್ನಳೆಗೆ ಏನು ಬರುವುದು ? ಕುಣಿವುದಕ್ಕೆ ಬಂದರೆ ಯುದ್ಧದಲ್ಲಿ ರಥವನ್ನು ನಡಿಸುವುದಕ್ಕೂ ಬಂದೀತೆ ? ಚೆನ್ನಾಯಿತು ' ಎಂದನು. ' ಆಗ ಅಲ್ಲಿದ್ದವರು ಬೃಹನ್ನಳೆಯು ನಮ್ಮ ಅರಮನೆಗೆ ಬರುವುದಕ್ಕೆ ಮುಂಚೆ ಮಹಾಪರಾಕ್ರಮಶಾಲಿಯಾದ ಅರ್ಜುನನಸಾರಥಿ; ತಾವು ಪರೀಕ್ಷಿಸಬಹುದು' ಎಂದರು. ಉತ್ತರನು ಅದಕ್ಕೆ ಒಪ್ಪಿ ಬೃಹನ್ನಳೆಗೆ ರಥವನ್ನು ಸಿದ್ಧಪಡಿಸುವಂತೆ ಹೇಳಿ, ಅಲ್ಲಿದ್ದ ಹೆಂಗಸರಿಗೆಲ್ಲಾ ನಿಮಗೇನು ಬೇಕು ? ನಿಮಗೇನು ತರಲಿ ? ಯುದ್ಧರಂಗದಿಂದ ಯಾವ ರಾಜನ ಆಭರಣವನ್ನು ಬೇಕಾದರೂ ತರುತ್ತೇನೆ ಹೇಳಿ -ಎಂದು ವಿಚಾರಿಸಿಕೊಂಡು ಯುದ್ಧಕ್ಕೆ ಹೊರಟನು.

ಬೃಹನ್ನಳೆಯು ಅತಿವೇಗದಿಂದ ರಥವನ್ನು ಓಡಿಸಿ, ಹಿಂದೆ ಇಟ್ಟಿದ್ದ ತನ್ನ ಬಾಣಗಳನ್ನು ತೆಗಿಸಿಕೊಂಡು ಕೌರವರ ಸೇನೆಗೆ ಇದಿರಾಗಿ ಉತ್ತರನ ರಥವನ್ನು ನಿಲ್ಲಿಸಿದನು. ಆ ಸೇನೆಯ ಕೋಲಾಹಲವನ್ನು ನೋಡಿದೊಡ

ನೆಯೋ ಉತ್ತರನಿಗೆ ದಿಕ್ಕು ತೋರದಂತೆ ಆಯಿತು. ಆ ಶತ್ರುಸೇನೆಯ ಆನೆಗಳ ಕೂಗು, ಕುದುರೆಗಳ ಧ್ವನಿ, ಜನಗಳ ಆರ್ಭಟ, ಶೂರರ ಸಿಂಹನಾದ ಬಾಣಗಳ ಬಿರುಸು ಇವೆಲ್ಲವನ್ನೂ ನೋಡಿ, ಗಡಗಡನೆ ನಡುಗುತ್ತಾ 'ಅಯ್ಯಾ ಬೃಹನ್ನಳೆ! ನಿನ್ನ ದಮ್ಮಯ್ಯ! ನನ್ನನ್ನು ಹಿಂದಕ್ಕೆ ಕರೆದುಕೊಂಡುಹೋಗು. ನನ್ನನ್ನು ಕೊಲ್ಲಿಸಬೇಡ, ಈ ಭಯಂಕರವಾದ ಸೇನೆಯನ್ನು ನಾನು ಕಣ್ಣೆತ್ತಿ ನೋಡಲಾರೆ, ನಾನು ಕೌರವಸೇನೆಯನ್ನು ಚಿತ್ರದಲ್ಲಿ ನೋಡಿದುದೇ ಹೊರತ ಯುದ್ಧರಂಗದಲ್ಲಿ ನೋಡಿದುದೇ ಇಲ್ಲ. ನನ್ನ ಉಪ್ಪುತಿಂದು ನನಗೆ ಎರಡನ್ನು ನೀನು ಬಯಸಬಾರದು. ಹೇಗಾದರೂ ನನ್ನ ತಾಯಿ ತಂದೆಗಳ ಮುಖವನ್ನು ನನಗೆ ತೋರಿಸು' ಎಂದು ಕೂಗಿಕೊಳ್ಳುತ್ತಿರಲು-ಬೃಹನ್ನಳೆಯು ರಥವನ್ನು ಮುಂದೆಮುಂದೆ ತೆಗೆದುಕೊಂಡು ಹೋಗುತ್ತಿದ್ದನು. ಆಗ ಉತ್ತರನು ಹೇಗಾದರೂ ತಪ್ಪಿಸಿಕೊಂಡು ಓಡಿಹೋಗೋಣವೆಂದು ರಥದಿಂದ ಧುಮುಕಲು, ಬೃಹನ್ನಳೆಯು ಅವನನ್ನು ಹಿಡಿದು ರಥದಲ್ಲಿ ಕುಕ್ಕಿರಿಸಿ, ತಾನೇ ಯುದ್ಧಮಾಡಿ ಶತ್ರುಗಳನ್ನು ಜಯಿಸಿ, ಶತ್ರುಗಳ ವಸ್ತ್ರಾಭರಣಗಳನ್ನು ತೆಗೆದುಕೊಂಡು, ಉತ್ತರನೊಡನೆ ಹಿಂದಿರುಗಿದನು. ಈ ಬೃಹನ್ನಳೆಯೇ ಪಂಚಪಾಂಡವರಲ್ಲಿ ಒಬ್ಬನಾದ ಅರ್ಜುನನು. ಅಂತಃಪುರದಲ್ಲಿ ಹೆಂಗಸರೊಂದಿಗೆ ಡಂಭವನ್ನು ಮಾಡಿ, ಯುದ್ಧರಂಗದಲ್ಲಿ ಹೆದರಿ, ಹೇಡಿಯಾಗಿದ್ದ ಉತ್ತರನನ್ನು ಈಗಲೂ ಜನರು 'ಉತ್ತರನ ಪೌರುಷ ಒಲೆಯಮುಂದೆ' ಎಂದು ಎತ್ತಿ ಆಡುವರು.

---

## ೨೩. ವಿಜಯನಗರ.

ತುಂಗಭದ್ರಾ ತೀರದಲ್ಲಿ ಒಂದಾನೊಂದು ಪಟ್ಟಣವಿದ್ದಿತು. ಆ ಪಟ್ಟಣಕ್ಕೆ ವಿಜಯನಗರವೆಂದು ಹೆಸರು. ಆ ಪಟ್ಟಣವನ್ನು ಹುಕ್ಕ ಬುಕ್ಕರೆಂಬುವರು ಕಟ್ಟಿದರು. ಇವರು ಇನ್ನೊಂದು ದೇಶದ ದೊರೆಯ ಹತ್ತಿರಿದ್ದವರು. ಆ ದೇಶಕ್ಕೆ ತುರುಕರು ನುಗ್ಗಲು ದೊರೆಯು ಸೋತುಹೋದನು. ದೇಶವು ತುರುಕರ ವಶವಾಯಿತು. ಹುಕ್ಕಬುಕ್ಕರು ತುರುಕರ ಕೈಗೆ ಸಿಕ್ಕಬಾರದೆಂದು ತುಂಗಭದ್ರಾತೀರಕ್ಕೆ ಬರುತ್ತ ಒಬ್ಬ ಸನ್ಯಾಸಿಯನ್ನು ಕಂಡು

ನಮಸ್ಕರಿಸಿದರು. ಆ ಸನ್ಯಾಸಿಯು ಹುಕ್ಕಬುಕ್ಕರನ್ನು ನೋಡಿ, ಇವರು ರಾಜ್ಯವನ್ನು ಕಟ್ಟುವುದಕ್ಕೂ, ಆಳುವುದಕ್ಕೂ ಸಮರ್ಥರಾಗಿದ್ದಾರೆ. ಇವರಿಂದ ಇಲ್ಲಿ ಒಂದು ಹಿಂದೂ ರಾಜ್ಯವನ್ನು ಕಟ್ಟಿಸಿ ದೇಶಗಳನ್ನೆಲ್ಲಾ ಆಕ್ರಮಿಸುತ್ತಿರುವ ತುರುಕರನ್ನು ತಡೆದು, ಹಿಂದಕ್ಕೆ ಅಟ್ಟಿಸಬೇಕು, ಎಂದುಯೋಚಿಸಿ, 'ಎಲೈ ಸಹೋದರರಿರಾ! ನೀವು ತುಂಗಭದ್ರಾತೀರದಲ್ಲಿ ಒಂದು ರಾಜ್ಯವನ್ನು ಕಟ್ಟಬೇಕು. ಸ್ಥಳವನ್ನು ನೋಡಿಕೊಂಡು ಬನ್ನಿ' ಎಂದನು. ಅವರು ಸ್ಥಳವನ್ನು ಹುಡುಕಿಕೊಂಡು ನದೀತೀರದಲ್ಲಿ ಹೋಗುತ್ತಿರುವಾಗ್ಗ ಒಂದು ಕಾಡು ಸಿಕ್ಕಿತು. ಅಲ್ಲಿ ಒಂದು ಹುತ್ತವನ್ನು ಕಂಡರು. ಆ ಕಾಲದಲ್ಲಿ ಆ ಹುತ್ತದ ಸಮೀಪಕ್ಕೆ ಒಂದು ಹಸು ಬಂದು ತಾನಾಗಿ ಹಾಲನ್ನು ಕರೆಯುತ್ತಿದ್ದಿತು. ಅದನ್ನು ಕಂಡು, ಹಿಂದಿರುಗಿ ಹೋಗಿ, ಈ ವಿಶೇಷವನ್ನು, ಆ ತಪಸ್ವಿಗೆ ತಿಳಿಸಿದರು. ಆಗ ಆ ತಪಸ್ವಿಯು ಅಲ್ಲಿಯೇ ನೀವು ಪಟ್ಟಣವನ್ನು ಕಟ್ಟಿರಿ; ಅದು ಬಹು ಪ್ರಸಿದ್ಧಿಗೆ ಬರುವುದು— ಎಂದನು ಅವರು ಪಟ್ಟಣವನ್ನು ಕಟ್ಟಿದರು. ಹುಕ್ಕರಾಯನು ಮೊದಲು ದೊರೆಯಾದನು. ಸನ್ಯಾಸಿಯಾದವಿದ್ಯಾರಣ್ಯನೇ ಮಂತ್ರಿಯಾದನು. ಹಿಂದೂಜನರಿಗೆಲ್ಲಾ ಆ ಪಟ್ಟಣವು ಆಶ್ರಯವಾಗಿತ್ತು. ದಿನೇದಿನೇ ಪಟ್ಟಣವೂ, ರಾಜ್ಯವೂ ಬಹಳ ಅಭಿವೃದ್ಧಿಗೆ ಬಂದುವು. ತುರುಕರು ಈ ರಾಜರನ್ನು ಕಂಡು ನಡುಗುತ್ತಿದ್ದರು. ಇವರಿಗೂ ಅವರಿಗೂ ಕದನವಿದ್ದೇ ಇರುತ್ತಿತ್ತು. ಬಹುಕಾಲದ ಮೇಲೆ ಒಂದು ದೊಡ್ಡ ಯುದ್ಧವು ನಡೆದು ಅಲ್ಲಿ ವಿಜಯನಗರದ ದೊರೆಯಾದ ರಾಮರಾಜನು ಸೋತನು. ಪಟ್ಟಣವು ಶತ್ರುಗಳ ಪಾಲಾಗಿ ಹಾಳಾಯಿತು. ಈಗಲೂ ಹಂಪೆಯಹತ್ತಿರ ವಿಜಯನಗರದ ದೊಡ್ಡ ದೊಡ್ಡ ದೇವಸ್ಥಾನಗಳೂ, ಹಾಳುಗೋಡೆಗಳೂ ಇವೆ.

---

## ೨೪. ನಾಗಲೋಕ. (೧ನೆಯ ಭಾಗ.)

ಸಮುದ್ರತೀರ. ಅಲ್ಲಿ ಒಂದು ದೊಡ್ಡ ಪಟ್ಟಣ. ಆ ಪಟ್ಟಣವನು ಒಬ್ಬ ದೊರೆಯು ಆಳುತ್ತಿದ್ದನು. ಆ ದೊರೆಗೆ ಇನ್ನೂ ಇಪ್ಪತ್ತು ವರ್ಷ ವಯಸ್ಸು. ಅವನು ರೂಪಿನಲ್ಲಿ ಚೆಲುವನು, ಜನರಲ್ಲಿ ದಯಾಳು, ಯುದ್ಧ

ದಲ್ಲಿ ಚತುರನು. ಆದುದರಿಂದ ಪ್ರಜೆಗಳಿಗೆ ಅವನಲ್ಲಿ ಬಹಳ ಪ್ರೀತಿಯಿದ್ದಿತು. ಹೀಗಿರುವಾಗ ಒಂದಾನೊಂದುದಿನ, ಹಠಾತ್ತಾಗಿ ನೆರೆರಾಜ್ಯದವರು ಇವನ ಮೇಲೆ ದಂಡೆತ್ತಿ ಬಂದರು. ದೊಡ್ಡಯುದ್ಧವು ನಡೆಯಿತು. ಆ ಯುದ್ಧದಲ್ಲಿ ಈ ದೊರೆಯ ಕಡೆಯುವರೆಲ್ಲರೂ ಸೋತುಹೋದರು. ಅನೇಕರು ಸತ್ತುಹೋದರು. ಉಳಿದವರು ಓಡಿದರು. ಆಗ ದೊರೆಯೂ ಓಡಿಹೋಗಬೇಕಾಯಿತು.

ದೊರೆಗೆ ಬಹು ಕಷ್ಟಬಂತು. ತನ್ನ ರಾಜ್ಯವನ್ನು ಬಿಟ್ಟು, ಮುಖಕ್ಕೆ ಮುಸುಕನ್ನು ಹಾಕಿಕೊಂಡು ಯಾರೂ ಕಾಣದಂತೆ ಕಾಡುಬಿದ್ದು ಹೊರಟನು. ಕಾಡಿನಲ್ಲಿ ಗೆಡ್ಡೆಗೆಣಸುಗಳನ್ನು ತಿಂದುಕೊಂಡು ಸ್ವಲ್ಪಕಾಲವಿದ್ದು, ಕೊನೆಗೆ ಒಂದುದಿನ ಸಾಯಂಕಾಲ ಸಮುದ್ರದ ಕರೆಗೆ ಬಂದನು ಆಗ ಇವನಿದ್ದ ಸ್ಥಿತಿಯಲ್ಲಿ ಇವನೇ ದೊರೆಯೆಂದು ಇವನನ್ನು ಹಿಂದೆ ನೋಡಿದ್ದವರೂ ಹೇಳುವುದಕ್ಕೆ ಆಗುತ್ತಿರಲಿಲ್ಲ. ಅಷ್ಟರಮಟ್ಟಿಗೆ ದೊರೆಯು ಕಂಗೆಟ್ಟು ಹೋಗಿದ್ದನು. ಆದಿನ ದೊರೆಯು ಬಹಳ ಹಸಿದಿದ್ದನು. ಅವನಿಗೆ ತಡೆಯಲಾರದಷ್ಟು ಬಾಯಾರಿಕೆ. ಅಲ್ಲಿ ತಿನ್ನುವುದಕ್ಕೆ ತಿಂಡಿಯಿಲ್ಲ. ಎಷ್ಟುದೂರ ನೋಡಿದರೂ ಉಪ್ಪುನೀರು. ಆಗ ದೊರೆಯು ಏನುಮಾಡಬೇಕು ! ಆ ಕಷ್ಟವನ್ನು ಸಹಿಸಲಾರದೆ ಸಮುದ್ರದಲ್ಲಿಯಾದರೂ ಬಿದ್ದು ಪ್ರಾಣವನ್ನು ಕಳೆದುಕೊಳ್ಳಬೇಕೆಂದು ನೀರಿನಲ್ಲಿಳಿದು ಮುಂದೆ ಮುಂದೆ ಹೊರಟನು. "ಪಾಪಿ ಸಮುದ್ರಕ್ಕೆ ಹೋದರೆ ಮೊಳಕಾಲಿನುದ್ದ ನೀರು" ಎಂಬಂತೆ ಅವನು ಎಷ್ಟುದೂರ ಹೋದರೂ ಸಮುದ್ರದಲ್ಲಿ ಆಳವೇ ಇಲ್ಲದಂತೆ ಕಂಡಿತು. ಆಗ ಸಾಯಂಕಾಲ ಸಮಯವಾಯಿತು. ನೀರು, ಆಕಾಶ ಎಲ್ಲವೂ ಕೆಂಪಗೆ ಕಾಣಿಸುತ್ತಿದ್ದುವು. ಮರಳಮೇಲೆ ಬಿದ್ದು ಇದ್ದ ಕಪ್ಪೆಚಿಪ್ಪುಗಳೆಲ್ಲ ಥಳಥಳನೆ ಹೊಳೆಯುತ್ತಿದ್ದುವು. ನೀರಿನಲ್ಲಿದ್ದ ಸಣ್ಣಸಣ್ಣ ಮೀನುಗಳು ಪುಳಪುಳನೆ ನೆಗೆದಾಡುತ್ತಿದ್ದುವು. ಆಕಾಶದಲ್ಲಿ ಪಕ್ಷಿಗಳೆಲ್ಲಾ ಬೇಗಬೇಗನೆ ಹಾರಿ ಹೋಗುತ್ತಿದ್ದುವು. ಗಾಳಿ ಮೆಲ್ಲನೆ ಬೀಸುತ್ತಿದ್ದಿತು. ದುಃಖದಲ್ಲಿ ಮುಳುಗಿದ್ದ ಆ ದೊರೆಗೂ ಆ ಸಾಯಂಕಾಲವು ಸಂತೋಷವನ್ನುಂಟುಮಾಡುತ್ತಿತ್ತು. ದೊರೆಯು ನಡುನೀರಿನಲ್ಲಿ ಒಂದು ಗಳಿಗೆ ಹಾಗೆಯೇ ಸುಮ್ಮನೆ ನಿಂತನು.

ಆಷ್ಟರಲ್ಲಿಯೆ ಸಮುದ್ರದ ಮಧ್ಯೆ ದೂರದಲ್ಲಿ ಒಂದು ಅರಮನೆಯು ಕಾಣಿಸಿತು. ಒಂದು ಕ್ಷಣ ದೃಷ್ಟಿಸಿ ನೋಡಲು ಅದು ಸೊಗಸಾದ ಏಳುಪ್ಪರಿಗೆಯ ಮನೆಯೆಂದು ಗೊತ್ತಾಯಿತು. ಆಗ ದೊರೆಯು 'ನಾನು ಸಾಯುವದೇನೋ ನಿಜ. ನಾನು ಸತ್ತರೆ ಅಳುವವರು ಯಾರು ? ಸಾಯುವೆನೆಂಬ ಹೆದರಿಕೆಯಾಗಲಿ, ವ್ಯಸನವಾಗಲಿ ಯಾವದೂ ನನಗೆ ಇಲ್ಲ. ಆದುದರಿಂದ ಹೇಗಾದರೂ ಆ ಅರಮನೆಯನ್ನು ಸೇರಬೇಕು' ಎಂದು ಯೋಚಿಸುತ್ತಿದ್ದನು.

ಅಷ್ಟರಲ್ಲಿಯೇ ಒಂದು ದೋಣಿಯು ದಡದಕಡೆಗೆ ಹೊಡೆದುಕೊಂಡು ಬರುತ್ತಿತ್ತು. ಅದನ್ನು ನೋಡಿ ಅದು ಬರುವುದನ್ನೇ ಕಾದಿದ್ದು, ಬಂದ ಮೇಲೆ ಅದನ್ನು ಹತ್ತಿ ಅರಮನೆಯಿದ್ದಕಡೆಗೆ ಹೊರಟನು. ಎಷ್ಟುದೂರ ಹೋದರೂ, ಅರಮನೆಯು ಇನ್ನೂ ದೂರವಾಗಿ ಕಾಣುತ್ತಿತ್ತೆ ಹೊರತು ಸಿಕ್ಕುವಂತೆ ಇರಲಿಲ್ಲ. ಅಷ್ಟುಹೊತ್ತಿಗೆ ಬಹು ಕತ್ತಲೆಯಾಯಿತು. ಅರಮನೆಯು ಸಿಕ್ಕಲಿಲ್ಲ, ನಡುಸಮುದ್ರ, ಆ ದೊರೆಯು ಏನು ಮಾಡಬೇಕು ? ಏನಾದರೂ ಆಗಲಿ 'ನಾನು ಸತ್ತರೆ ಅಳುವವರು ಯಾರು ?' ಎಂದು ದೋಣಿಯನ್ನು ಮುಂದೆಮುಂದೆ ನಡೆಯಿಸಿಕೊಂಡು ಹೋದನು.

---

## ೨೫. ನಾಗಲೋಕ. (೨ನೆಯ ಭಾಗ.)

ಹಾಗೆ ಬಹುದೂರ ಹೋದಮೇಲೆ ದೋಣಿಯನ್ನು ಏನೋ ತಡೆದಂತೆ ಆಯಿತು. ಕೂಡಲೆ ದೋಣಿಯಿಂದ ಇಳಿದು ನೋಡುವಲ್ಲಿ ದಡವು ಸಿಕ್ಕಿದಂತೆ ಕಾಣಿಸಿತು. ದಡದಮೇಲೆ ಇಳಿದನು. ಅಷ್ಟು ಕತ್ತಲೆಯಾಗಿದ್ದರೂ ಅಲ್ಲಿ ನಿಲ್ಲದೆ ಆಗಲೇ ಹೊರಟನು. ಎಲ್ಲೆಲ್ಲೂ ಗಿಡಗಳು ಬೆಳೆದಿದ್ದುವು. ದಾರಿಯೇ ಕಾಣದು. ಹಾವು ಹಲ್ಲಿಯ ಓಡಾಟದ ಶಬ್ದವು ಎಲ್ಲೆಲ್ಲೂ ತುಂಬಿದ್ದಿತು. ದುಂಬಿಗಳ ಚೀತ್ಕಾರವು ಕಿವಿ ಚಿಟ್ಟುಹಿಡಿಸುತ್ತಿದ್ದಿತು. ಇವನು ಯಾವುದಕ್ಕೂ ಅಂಜದೆ ಹೋಗುತ್ತಲೇ ಇದ್ದನು. ಆಗ

ಸ್ವಲ್ಪ ದೂರದಲ್ಲಿ ಬೆಳಕು ಕಾಣಿಸಿತು. ಆ ಬೆಳಕನ್ನೇ ಗುರುತಾಗಿಟ್ಟುಕೊಂಡು ಹೊರಟನು. ಹೋಗುಹೋಗುತ ಬೆಳಕು ದೊಡ್ಡದಾಗುತ್ತ ಬಂದಿತು. ಅಲ್ಲಿ ಒಂದು ಸಣ್ಣ ಕಾಲುದಾರಿ ಕಾಣಿಸಿತು.

ಆ ದಾರಿಯನ್ನೇ ಹಿಡಿದು ಹೋಗಲು, ಒಂದು ದೊಡ್ಡ ಮೈದಾನವು ಸಿಕ್ಕಿತು. ಆ ಮೈದಾನದಲ್ಲಿ ಸೂರ್ಯೋದಯವಾಗಿರುವಂತೆ ಬೆಳಕು ತುಂಬಿದ್ದಿತು. ಇದೇನು ಆಶ್ಚರ್ಯ! ಮಧ್ಯರಾತ್ರಿ. ಇಲ್ಲಿ ಈಗ ಸೂರ್ಯನು ಪ್ರಕಾಶಿಸುವಂತಿದೆ. ನೋಡೋಣ—ಎಂದು ಇನ್ನೂ ಮುಂದೆ ಹೋದನು. ಮುಂದೆ ಹೋಗುಹೋಗುತ್ತ ಸುವಾಸನೆಯಾಗಿ ತಂಗಾಳಿ ಬೀಸುತ್ತಿದ್ದಿತು. ಹಗಲಿನಲ್ಲಿ ಹೇಗೊಹಾಗೆ ಪಕ್ಷಿಗಳು ಸುಖವಾಗಿ ಧ್ವನಿ ಮಾಡುತ್ತ ಎಲ್ಲೆಲ್ಲೂ ಹಾರಾಡುತ್ತಿದ್ದುವು. ಇವನ ಆಯಾಸವೆಲ್ಲಾ ಮರೆತು ಹೋಯಿತು, ಹಸಿವು ಬಾಯಾರಿಕೆಗಳೂ ನಿಂತು ಹೋದುವು. ಮನಸ್ಸಿನಲ್ಲಿ ಉಲ್ಲಾಸವುಂಟಾಯಿತು.

ಇವನು ಹಾಗೆ ಬೆರಗಾಗಿ ನಿಂತಿದ್ದಾಗ 'ಮಹಾರಾಜನೆ! ದಯೆಮಾಡು. ನೀನು ಬಹಳ ದೂರದಿಂದ ಆಯಾಸಪಟ್ಟು ಬಂದಿರುವಂತಿದೆ, ಎಂಬ ಧ್ವನಿಯು ಕೇಳಬಂತು. ಆ ಧ್ವನಿ ಬಂದ ದಾರಿಯಲ್ಲಿ ಸ್ವಲ್ಪ ಮುಂದೆ ಹೋಗುತ ಒಬ್ಬ ನಾಗಕನ್ಯೆಯು ಒಂದು ನವಿಲಿನ ಮೇಲೆ ಕುಳಿತಿದ್ದುದನ್ನು ನೋಡಿ ಅಲ್ಲಿಯೇ ನಿಂತನು. ಆ ನಾಗಕನ್ಯೆಯೊಡನೆ ಇದ್ದ ಸಖೀ ಜನರು 'ದಯೆಮಾಡಿ, ಮೃದುವಾಗಿರುವ ಈ ಹೂವಿನ ಹಾಸಿಗೆಯ ಮೇಲೆ ವಿಶ್ರಮಿಸಿಕೊಳ್ಳಿ, ನಿಮಗೆ ಬೇಕಾದುದನ್ನು ತಂದುಕೊಡುವೆವು, ಸ್ವೀಕರಿಸಿ' ಎಂದು ಉಪಚರಿಸಿದರು. ರಾಜನು 'ನನ್ನ ಕೋರಿಕೆಯೊಂದನ್ನು ನಿಮ್ಮ ರಾಣಿಯು ನೆರವೇರಿಸುವುದಾದರೆ, ನಿಮ್ಮ ಆದರವು ನನಗೆ ಹಿತವನ್ನುಂಟುಮಾಡುವುದು' ಎಂದನು. ಇವನ ಧೈರ್ಯಕ್ಕೆ ಮೆಚ್ಚಿ, ನಾಗಕನ್ಯೆಯು 'ನಿಮ್ಮ ಕೋರಿಕೆ ಏನು ? ಎಂದಳು. ರಾಜನು 'ನಾನು ಇಲ್ಲಿಯೇ ವಾಸಮಾಡಬೇಕೆಂದು ಬಂದಿರುವೆನು. ಅದಕ್ಕೆ ನೀವು ಒಪ್ಪಬೇಕು' ಎಂದನು.

ಆಗ ನಾಗಕನ್ಯೆಯು 'ನೀವು ಇಲ್ಲಿ ಬಹಳ ಹೊತ್ತು ಇರಲಾಗದು.

ಇದು ಮನುಷ್ಯಲೋಕವಲ್ಲ. ಮನುಷ್ಯನನ್ನು ನೋಡಿದೊಡನೆ ನಾಗಗಳು ಬಂದು ಕೊಲ್ಲುವವು. ಆದುದರಿಂದ ನಿಮಗೆ ಬೇಕಾದುದನ್ನು ತೆಗೆದು ಕೊಂಡು ಬೇಗ ಇಲ್ಲಿಂದ ಹೊರಟು ಹೋಗಿ ' ಎಂದಳು. ಅದಕ್ಕೆ ರಾಜನು ' ನಾನು ಸತ್ತರೆ ಅಳುವರಿಲ್ಲ. ವ್ಯಸನವಾರಿಗೆ ? ನನಗೆ ಇಲ್ಲ. ಆದಕಾರಣ ನಾನು ಇಲ್ಲಿಯೇ ಇದ್ದು ಸಾಯುವೆನಲ್ಲದೆ ಹಿಂದಕ್ಕೆ ಹೋಗಲಾರೆನು ' ಎಂದನು. ಅದಕ್ಕೆ ನಾಗಕನ್ಯೆಯು ರಾಜನನ್ನು ನೋಡಿ ' ಅಯ್ಯೋ ! ದಾರಿ ತಪ್ಪಿ ರಾಜಕುಮಾರರನೇಕರು ಇಲ್ಲಿಗೆ ಬಂದಿರುವರು. ಬಂದವರೆಲ್ಲರೂ ಇಲ್ಲಿ ನಿಲ್ಲಬೇಕೆಂದು ಹಟ ಹಿಡಿವರು. ನಾನು ಕೇಳುವ ಎರಡು ಪ್ರಶ್ನೆಗಳಿಗೆ ಉತ್ತರಕೊಡಲಾರದೆ ನಾಶವಾಗಿರುವರು. ನೀವು ಹಾಗೆ ಮುಷ್ಕರಮಾಡದೆ, ನಿಮಗೆ ಬೇಕಾದುದನ್ನು ತೆಗೆದುಕೊಂಡು ಹೋಗಿ ಎಂದಳು. ಅದಕ್ಕೆ ರಾಜನು ' ನಾನು ಸತ್ತರೆ ಅಳುವವರು ಇಲ್ಲ. ವ್ಯಸನವಾರಿಗೆ ? ನನಗೆ ಇಲ್ಲ. ಆದುದರಿಂದ ನಿಮ್ಮ ಪ್ರಶ್ನೆಗಳನ್ನು ಹೇಳಿ. ನನ್ನ ಅದೃಷ್ಟವನ್ನು ಬೇಗ ತಿಳಿವೆನು ' ಎಂದನು.

---

## ೨೬. ನಾಗಲೋಕ (೩ನೆಯ ಭಾಗ)

ಆ ನಾಗಕನ್ನಿಕೆಯು ಎಷ್ಟು ವಿಧವಾಗಿ ಹೇಳಿದರೂ ರಾಜನು ಕೇಳದೆ ಇದ್ದುದರಿಂದ. ' ನಿಮ್ಮ ಅದೃಷ್ಟದಲ್ಲಿದ್ದಂತೆ ಆಗಲಿ ! ನನ್ನೀ ಮೊದಲನೆಯ ಪ್ರಶ್ನೆಗೆ ಉತ್ತರವೇನು ? ಈ ಉದ್ಯಾನವನವನ್ನೆಲ್ಲಾ ತುಂಬಿರುವುದೇನು ? ಹೇಳಿ ? ಎಂದಳು. ಅದಕ್ಕೆ ರಾಜನು-ಈ ಉದ್ಯಾನವನವನ್ನೆಲ್ಲಾ ತುಂಬಿರುವುದು ನಿಮ್ಮ ಕಣ್ಣಿನ ಕಾಂತಿಯು. ಎಂದು ಹೇಳಿ. ' ಇದೇ ಕಷ್ಟವಾದ ಪ್ರಶ್ನೆಯೇ ! ' ಎಂದನು. ಈ ಉತ್ತರಕ್ಕೆ ನಾಗಕನ್ಯೆಯು ಸಂತೋಷಪಟ್ಟಳು. ಮಹಾರಾಜ, ನನ್ನೀ ಪ್ರಶ್ನೆಗೆ ಉತ್ತರವನ್ನು ಕೊಟ್ಟರೆ ನಿಮ್ಮ ಅಪೇಕ್ಷೆಯು ಕೈಗೂಡುವುದು. ಯಾವ ರಾಜನ ಕಿರೀಟದಲ್ಲಿಯೂ ಇಲ್ಲದ ಎಂತಹ ಭಂಗಾರದಲ್ಲೂ ಇಲ್ಲದ ಹೊಂಬಣ್ಣದ ಕಾಂತಿಯು ಎಲ್ಲಿರುವುದು ? ' ನೀವು ಏರಿರುವ ನವಿಲಗರಿಯ ಕಣ್ಣಿನಲ್ಲಿರುವ ಹೊಂಬಣ್ಣದ ಕಾಂತಿಯಲ್ಲಲ್ಲದೆ ಮತ್ತೆ ಏತರಲ್ಲಿ ಅಂತಹ ಹೊಂಬಣ್ಣದ ಕಾಂತಿಯು ಇದ್ದೀತು ?' ಎಂದನು.

ಆ ಉತ್ತರಕ್ಕೆ ನಾಗಕನ್ಯೆಯು ಮೆಚ್ಚಿ, 'ಮಹಾರಾಜರೇ ನಿಮಗೆ ನಾಗಲೋಕದಲ್ಲಿ ವಾಸಮಾಡುವುದಕ್ಕೆ ಅಪೇಕ್ಷೆ ಇದ್ದರೆ ನನ್ನೊಡನೆ ಬನ್ನಿ' ಎಂದಳು. ಸಂತೋಷದಿಂದ ಇವನು ಒಂದೆರಡು ಹಜ್ಜೆ ಮುಂದೆ ಇಡುವುದರಲ್ಲಿಯೇ ಥಟ್ಟನೆ ಕತ್ತಲಾಯಿತು. ನಾಗಕನ್ಯೆಯು ಮಾಯವಾದಳು. ಪಕ್ಷಿಗಳೆಲ್ಲಾ ತಮ್ಮ ತಮ್ಮ ಗೂಡುಗಳನ್ನು ಹುಡುಕಿಕೊಂಡು ಮರಗಳನ್ನು ಅಡರುತ್ತಿದ್ದವು. ಅರಳಿದ ಹೂವುಗಳೆಲ್ಲಾ ಬಾಡಿರಬಹುದು ; ಅವು ಬಾಡಿ ಹೋದುದು ಇವನಿಗೆ ಕಾಣಲಿಲ್ಲ ; ಆದರೆ ಸುಗಂಧದಿಂದ ಕೂಡಿ ಬೀಸುತ್ತಿದ್ದ ಗಾಳಿಯು ಬರಿದಾಯಿತು. ರಾಜನು ಭ್ರಾಂತನಾಗಿ, ನಾಗಕನ್ಯೆಯು ಕುಳಿತಿದ್ದ ಸ್ಥಳದ ಹತ್ತಿರಕ್ಕೆ ಎಡವರಿಸಿ ಮುಗ್ಗರಿಸಿಕೊಂಡು ಹೋದನು.

ಅಲ್ಲಿ ತಿಳಿನೀರಿನಿಂದ ಕೂಡಿದ ಒಂದು ಸಣ್ಣ ಕೊಳವನ್ನೂ ಆ ಕೊಳದಲ್ಲಿ ಮಹಾ ಜ್ಯೋತಿಯೊಂದು ಮುಳುಗುತ್ತಿದ್ದುದನ್ನೂ ಕಂಡನು 'ನಾನು ಸತ್ತರೆ ಅಳುವವರು ಯಾರು ? ವ್ಯಸನವು ಯಾರಿಗೆ ? ನನಗೆ ಇಲ್ಲ' ಎಂದು, ಆ ಕೊಳದಲ್ಲಿ ಬೆಳಕಿನ ಜತೆಯಲ್ಲೇ ಹೋಗಬೇಕೆಂದು ತಡಮಾಡದೆ ದುಮುಕಿದನು. ಹಾಗೆ ದುಮುಕಿದೊಡನೆ ನಾಗಕನ್ಯೆಯ ಮಾಯದಿಂದ ಸ್ವಲ್ಪವೂ ಆಯಾಸವಾಗದಂತೆ ಆ ದೊರೆಯು, ನಾಗಲೋಕದಲ್ಲಿದ್ದ ಅರಮನೆಯನ್ನು ಸೇರಿದನು. ಅಲ್ಲಿ ನಾಗಕನ್ಯೆಯ ನಂಟರಿಷ್ಟರು ಇವನನ್ನು ಆದರದಿಂದ ಇದಿರುಗೊಂಡರು. ದೊರೆಯು ಅಲ್ಲಿ ನಾಗಕನ್ಯೆಯನ್ನು ಮದುವೆಯಾಗಿ, ಬಹುಕಾಲ ಸುಖವಾಗಿ ಇದ್ದನು.

## ೨೭. ಹಾವಾಡಿಗನೂ ಹಾವೂ ಇಲಿಯೂ.

ಒಬ್ಬ ಹಾವಾಡಿಗನು ಹಾವಿನ ಬುಟ್ಟಿಯನ್ನು ಅಡ್ಡೆಕಟ್ಟಿ ಹೆಗಲ ಮೇಲೆ ಇಟ್ಟು, ಊರಿಂದೂರಿಗೆ ಹೋಗಿ ಹಾವುಗಳನ್ನು ಆಡಿಸಿಕೊಂಡು ಹಣವನ್ನು ಸಂಪಾದಿಸುತ್ತಿದ್ದನು. ಒಂದು ಊರ ಹೊರಗಿನ ಹಾಳುಗುಡಿಯಲ್ಲಿ ಆ ಹಾವಾಡಿಗನು ಇಳಿದಿದ್ದನು. ಅಲ್ಲಿ ಅವನಿಗೆ ಜ್ವರಬಂದು ಅನ್ನ ನೀರು ಇಲ್ಲದೆ ಸಂಕಟಪಡುತ್ತಿದ್ದನು. ಒಂದೆರಡು ದಿನಗಳಾದುವು. ಹಾವಾಡಿಗನಿಗೂ ಅನ್ನವಿಲ್ಲ, ಹಾವಿಗೂ ತಿಂಡಿಯಿಲ್ಲ.

ಹೀಗಿರುವಲ್ಲಿ ಆ ಗುಡಿಯ ಹಳೆಯ ಉಗ್ರಾಣದಲ್ಲಿ ಸೇರಿಕೊಂಡಿದ್ದ ಒಂದು ಇಲಿಯು ಹಾವಿನ ಬುಟ್ಟಿಯನ್ನು ನೋಡಿ ಕಾಳು ತುಂಬಿಟ್ಟಿರುವ ಬುಟ್ಟಿಯೆಂದು ಮೆಲ್ಲನೆ ಬಂದು, ಸ್ವಲ್ಪಸ್ವಲ್ಪವಾಗಿ ಆ ಬುಟ್ಟಿಯನ್ನು ಕೊರೆದು, ಬಹಳ ಆಶೆಯಿಂದ ಬುಟ್ಟಿಯೊಳಗೆ ನುಗ್ಗಿತು. ಹಸಿದಿದ್ದ ಹಾವಿಗೆ ಇಲಿಯನ್ನು ನೋಡಿ ಬಹುಸಂತೋಷವಾಯಿತು' ಅದು ಒಳಗೆ ಬಂದೊಡನೆ ಹಾವು ಫಕ್ಕನೆ ನುಂಗಿ, ಇಲಿಯು ಮಾಡಿದ ಕನ್ನದಿಂದ ಸರಸರನೆ ಹರಿದು ಹೋಗಿ, ಹತ್ತಿರವಿದ್ದ ಒಂದು ಹುತ್ತವನ್ನು ಸೇರಿತು.

ಇತ್ತಲಾಗಿ ಹಾವಾಡಿಗನು ಸ್ವಲ್ಪ ಚೇತರಿಸಿಕೊಂಡು ಎದ್ದು ನೋಡುವಲ್ಲಿ, ಬುಟ್ಟಿಯು ಬರಿದಾಗಿದ್ದಿತು. ಹಾವೇ ಬುಟ್ಟಿಯನ್ನು ಕೊರೆದು ಕೊಂಡು ಹೋಯಿತೆಂದು ಆಶ್ಚರ್ಯ ಪಡುತ್ತಿದ್ದನು.

---

## ೨೮. ಕಣಜ ಮತ್ತು ಜೇನುಹುಳು.

ಒಂದು ಪಾಳು ಗುಡಿಯ ಗೋಡೆಯ ಮೂಲೆಯಲ್ಲಿ ಒಂದು ಕಣಜವು ಗೂಡು ಕಟ್ಟಿಕೊಂಡು ಇದ್ದಿತು. ಒಂದು ಜೇನು ಹುಳುವು ಗೂಡು ಕಟ್ಟುವುದಕ್ಕೆ ಅನುಕೂಲವಾದ ಸ್ಥಳವನ್ನು ಹುಡುಕುತ್ತಾ ಹುಡುಕುತ್ತಾ, ಆ ಕಣಜದ ಗೂಡಿನ ಹತ್ತಿರಕ್ಕೆ ಬಂದಿತು. ಕಣಜವು ಜೇನು ಹುಳುವನ್ನು ಕರೆದು, ಉಪಚರಿಸಿ, 'ಅಣ್ಣಾ! ನಿನ್ನನ್ನು ಒಂದು ಮಾತು ಕೇಳಬೇಕೆಂದು ಇದ್ದೇನೆ' ಎಂದಿತು. ಜೇನುಹುಳುವು ಅದಕ್ಕೆ 'ಅದೇನು ಕೇಳು. ತಿಳಿದಿದ್ದರೆ ಅಗತ್ಯವಾಗಿ ಹೇಳುತ್ತೇನೆ' ಎಂದಿತು.

ಆಗ ಕಣಜವು 'ಜನರು ನಿನ್ನನ್ನು ಕಂಡರೆ ಆದರಿಸುವುದೇಕೆ? ನನ್ನನ್ನು ಹಿಂಸಿಸುವುದೇಕೆ? ನಾವಿಬ್ಬರೂ ಒಂದೇ ರೀತಿಯಲ್ಲಿಲ್ಲವೆ? ನಮ್ಮಿಬ್ಬರಿಗೂ ಚೆನ್ನಾದ ರೆಕ್ಕೆಗಳಿಲ್ಲವೆ? ನಮ್ಮಿಬ್ಬರಿಗೂ ಸಿಹಿಯಾದ ಪದಾರ್ಥದಲ್ಲಿ ಪ್ರೀತಿಯಿಲ್ಲವೆ? ನಮ್ಮ ಗೋಜಿಗೆ ಜನಗಳು ಬಂದರೆ ನಾವಿಬ್ಬರೂ ಕಚ್ಚುವೆವಲ್ಲವೆ? ಹೀಗಿರುವಾಗ, ನೀನು ಬಂದರೆ ನಿನಗೆ ಎಲ್ಲಾ ಅನುಕೂಲ

ವನ್ನೂ ಮಾಡಿಕೊಡುವರು. ನಾನು ಸಿಕ್ಕಿದರೆ ಒಡನೆಯೆ ಕೊಲ್ಲುವರು. ನಾನು ಜನರಿಗೆ ಮಾಡುವ ಅಪಕಾರವೇನು ? ನೀನು ಮಾಡುವ ಉಪಕಾರ ವೇನು ? ಹೇಳು ' ಎಂದು ಕೇಳಿತು.

ಅದಕ್ಕೆ ಜೇನುಹುಳುವು ' ನೀನು ಮನುಷ್ಯರಿಗೆ ಯಾವ ಉಪಕಾರ ವನ್ನೂ ಮಾಡುವುದಿಲ್ಲ. ಅವರ ಮನೆಯ ಮರ ಮುಟ್ಟನ್ನು ಕೊರೆದು ಹಾಳುಮಾಡುತ್ತೀಯೆ ; ನಾನಾದರೋ ಹಗಲೆಲ್ಲಾ ಕೆಲಸಮಾಡಿ, ಸಿಹಿ ಯಾದ ಜೇನುತುಪ್ಪವನ್ನು ಕೂಡಿಹಾಕುವೆನು. ಜನರಿಗೆ ಅದರಿಂದ ಪ್ರಯೋ ಜನವಾಗುವುದು. ಆದುದರಿಂದ ಜನರು ನನ್ನನ್ನು ಆದರಿಸುವರು. ನೀನು ಜನರಿಗೆ ಕೆಡುಕನ್ನು ಮಾಡದೆ, ಉಪಯೋಗವಾಗಿದ್ದರೆ, ನನ್ನಂತೆ ನಿನ್ನನ್ನೂ ಜನರು ಉಪಚರಿಸುತ್ತಿದ್ದರು.

---

## ೨೯. ನಾಯಿಯ ಸ್ನೇಹ.

ಮಾಳವಿ ಎಂಬವಳಲ್ಲಿ ಒಂದು ನಾಯಿ ಇದ್ದಿತು. ಆ ನಾಯಿಯನ್ನು ಅವಳು ತನ್ನ ಮಗುವಿನೊಡನೆ ಸಾಕುತ್ತಿದ್ದಳು. ಆ ನಾಯಿಯು ಯಾವಾ ಗಲೂ ಆ ಮಗುವಿನಬಳಿಯಲ್ಲಿಯೆ ಆಡಿಕೊಂಡು ಇರುತ್ತಿದ್ದಿತು. ಆ ಮಗುವು ಆಡುವುದಕ್ಕೆ ಎಲ್ಲಿಗೆ ಹೋದರೂ ನಾಯಿಯೂ ಜತೆಯಲ್ಲಿಯೆ ಹೋಗುತ್ತಿ ದ್ದಿತು. ತುಂಟ ಹುಡುಗರು ಆ ಮಗುವಿನ ತಂಟೆಗೆ ಹೋದರೆ ನಾಯಿಯು ಅವರ ಮೇಲೆ ಬಿದ್ದು ಓಡಿಸುವುದು. ಮಗುವು ಊಟಮಾಡುವಾಗಲೂ ಆಡುವಾಗಲೂ, ಮಲಗಿಕೊಳ್ಳುವಾಗಲೂ ನಾಯಿಯು ಜತೆಯಲ್ಲಿಯೇ ಇರುವುದು.

ಹೀಗಿರುತ್ತಿರಲು ಮಗುವಿಗೆ ರೋಗವು ಬಂದಿತು. ಕೆಲವು ದಿನಗ ಳಲ್ಲೇ ಅದು ಸತ್ತೂ ಹೋಯಿತು. ನಾಯಿಯು ಆ ದಿನವೇ ತಪ್ಪಿಸಿಕೊಂ ಡಿತು ; ಎಲ್ಲೆಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ಕೆಲವು ದಿನಗಳಾದಮೇಲೆ ಒಂದು ದಿನ ಆ ಮಗುವಿನ ತಾಯಿಯು ಮಗುವನ್ನು ಮಣ್ಣುಮಾಡಿದ್ದ ಸ್ಥಳಕ್ಕೆ

ಹೋದಳು ; ಅಲ್ಲಿ ನಾಯಿಯೂ ಸತ್ತು ಬಿದ್ದುದನ್ನು ನೋಡಿದಳು. ನಾಯಿಯು ಮೂಗುಜೀವಿಯಾದರೂ, ಆ ಮಗುವಿನಲ್ಲಿ ಅದಕ್ಕೆ ಎಷ್ಟು ಪ್ರೀತಿ ! ಎಷ್ಟು ಸ್ನೇಹ !

---

## ೩೦. ಧ್ರುವರಾಯನ ಕಥೆ.

ಒಂದಾನೊಂದು ದೇಶದಲ್ಲಿ ಬಹು ಕಾಲದ ಹಿಂದೆ ಉತ್ತಾನಪಾದರಾಯನೆಂಬ ಒಬ್ಬ ರಾಜನು ಇದ್ದನು. ಅವನಿಗೆ ಸುಮತಿ, ಸುರುಚಿ ಎಂಬ ಇಬ್ಬರು ಹೆಂಡಿರಿದ್ದರು. ಸುಮತಿಗೆ ಧ್ರುವನೆಂಬ ಒಬ್ಬ ಮಗನಿದ್ದನು. ಸುರಚಿಗೂ ಒಬ್ಬ ಮಗನಿದ್ದನು. ರಾಜನಿಗಾದರೋ ಸುರುಚಿಯಲ್ಲಿ ಬಹಳ ಪ್ರೀತಿ. ಒಂದುದಿನ ರಾಜನು ಸುರುಚಿಯ ಮಗನನ್ನು ಎತ್ತಿ ಮುದ್ದಾಡುತ್ತಾ ಸಿಂಹಾಸನದ ಮೇಲೆ ಕುಳಿತಿದ್ದಾಗ ಧ್ರುವನೂ ತಂದೆಯ ಬಳಿಗೆ ಓಡಿಹೋಗಿ, ಸಿಂಹಾಸನವನ್ನೇರಿ ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳಲು ಹೋದನು. ಆಗ ಹತ್ತಿರದಲ್ಲಿಯೇ ಇದ್ದ ಸುರುಚಿಯು ಧ್ರುವನನ್ನು ರೆಟ್ಟೆ ಹಿಡಿದು ಎಳೆದು, 'ನೀನು ಏಕೆ ಇಲ್ಲಿಗೆ ಬಂದೆ ? ನಡೆ ! ನಿನಗೇಕೆ ಸಿಂಹಾಸನದ ಸೌಖ್ಯ ! ನಡೆನಡೆ !' ಎಂದು ಗದರಿಸಿಕೊಂಡು ಅಟ್ಟಿಬಿಟ್ಟಳು.

ಮಗುವಾದ ಧ್ರುವನು ಅಳುತ್ತಾ ತನ್ನ ತಾಯಿಯಲ್ಲಿಗೆ ಬಂದು 'ಅಮ್ಮಾ, ನನ್ನನ್ನು ಹೀಗೆ ರೆಟ್ಟೆ ಹಿಡಿದು ಎಳೆದುಹಾಕಿಬಿಟ್ಟರು,' ಎಂದು ಬಿಕ್ಕಿ ಬಿಕ್ಕಿ ಅಳುತ್ತಾ ಹೇಳಿಕೊಂಡನು. ತಾಯಿಯು ಏನುಮಾಡಬೇಕು ? ರಾಜನಿಗೆ ಸುಮತಿಯಲ್ಲಿ ಪ್ರೀತಿಯಿರಲಿಲ್ಲ. ಸುರುಚಿಯು ಸುಮತಿಯನ್ನೇ ಆಗಲಿ, ಧ್ರುವನನ್ನೇ ಆಗಲಿ ರಾಜನ ಹತ್ತಿರ ಸೇರಿಸಳು. ಮಗನನ್ನು ಯಾವ ವಿಧವಾಗಿಯೂ ಸಮಾಧಾನಮಾಡಲು ತಿಳಿಯದೆ 'ಅಪ್ಪ, ದೇವರು ನಿನ್ನ ಹಣೆಯಲ್ಲಿ ಆ ಸೌಖ್ಯವನ್ನು ಅನುಭವಿಸಲು ಬರೆದಂತಿಲ್ಲ. ದೇವರೇ ನಿನಗೆ ಸಿಂಹಾಸನವನ್ನು ಕೊಡಿಸಬೇಕು ನಾನೇನು ಮಾಡೇನಪ್ಪ' ಎಂದು ಕಣ್ಣೀರನ್ನು ಸುರಿಸಿದಳು. ಆಗ ಧ್ರುವನು 'ಅಮ್ಮಾ, ಹಾಗಾದರೆ ನಾನು ಆ ದೇವರನ್ನೇ ಕೇಳಿ ಸಿಂಹಾಸನವನ್ನು ಪಡೆಯುವೆನು' ಎಂದು ಹೇಳಿ ಹೊರ

ಟುಹೋದನು. ಮಗು ಸುಮ್ಮನೆ ಮಾತನಾಡುವದೆಂದು ತಿಳಿದ ತಾಯಿ ಯು, ' ಒಳ್ಳೆಯದು; ಹಾಗೆಯೇ ಮಾಡು, ಕಂದ ' ಎಂದಳು.

ಧ್ರುವನು ಹೊರಟೇ ಹೊರಟನು. ದೇವರನ್ನು ಇವನು ಕಾಣುವು ದೆಂದರೇನು! ಏನು ಕಥೆ! ಬಹು ದೂರ ಹೋದನು. ದೇವರನ್ನೂ ಕಾಣ ಲಿಲ್ಲ, ಯಾರನ್ನೂ ಕಾಣಲಿಲ್ಲ. ಅಷ್ಟುಹೊತ್ತಿಗೆ ಕತ್ತಲಾಯಿತು. ಕಾಡು ಸಿಕ್ಕಿತು. ಗೊಂಡಾರಣ್ಯ. ಹುಲಿ, ಆನೆ, ಕರಡಿ ಇವುಗಳ ಆರ್ಭಟ. ಯಾವುದಕ್ಕೂ ಧ್ರುವನು ಹೆದರದೆ, ಹಸಿವು ಬಾಯಾರಿಕೆ ಎನ್ನದೆ ದೇವರ ನ್ನು ಕಾಣಬೇಕೆಂಬ ಒಂದೇ ಮನಸ್ಸಿನಿಂದ ಹೋಗುತ್ತಿದ್ದನು. ಹೀಗೆ ಹೋಗುತಿರುವಾಗ ದೇವರನ್ನು ಕಂಡ ನಾರದರು ಬಂದರು. 'ಅಪ್ಪಾ ಮಗು ನೀನು ಯಾರಪ್ಪ ? ಈ ಗೊಂಡಾರಣ್ಯದಲ್ಲಿ ಒಬ್ಬನೆ ಎಲ್ಲಿ ಹೋಗು ತ್ತೀಯೆ' ಎಂದು ಕೇಳಲು ಧ್ರುವನು ನಡೆದುದನ್ನೆಲ್ಲಾ ನಾರದರಿಗೆ ತಿಳಿಸಿ ದನು. ಆಗ ನಾರದರು ಧ್ರುವನ ಧೈರ್ಯಕ್ಕೆ ಮೆಚ್ಚಿ ' ಅಪ್ಪ, ನೀನು ಈ ರೀತಿಯಲ್ಲಿ ದೇವರನ್ನು ಧ್ಯಾನಿಸಿದರೆ ದೇವರು ನಿನಗೆ ಪ್ರಸನ್ನನಾಗುವನು ' ಎಂದು ಹೇಳಿದರು.

ಧ್ರುವನು ಅದೇರೀತಿಯಲ್ಲಿ ದೇವರಧ್ಯಾನ ಮಾಡತೊಡಗಿದನು. ಬಹು ಕಾಲ ಹಾಗೆ ದೇವರ ಧ್ಯಾನದಲ್ಲಿಯೇ ಧ್ರುವನಿರಲು ದೇವರು ಮೆಚ್ಚಿ ಬಂದು ' ಅಪ್ಪ ಮಗು! ನಿನ್ನ ಧ್ಯಾನಕ್ಕೆ ಮೆಚ್ಚಿ ಬಂದಿರುವೆನು, ಇಗೋನೋಡು' ಎಂದು ದಿವ್ಯಸ್ವರೂಪವನ್ನು ತೋರಿ, 'ನಿನಗೆ ಏನುಬೇಕು' ಎಂದು ಕೇಳಲು, ' ನನಗೆ ಸಿಂಹಾಸನದಮೇಲೆ ಕುಳಿತುಕೊಳ್ಳುವ ಯೋಗ್ಯತೆಯನ್ನು ಕೊಡು' ಎಂದು ಬೇಡಿದನು. ದೇವರು, ' ಮಗು, ನಿನಗೆ ಶಾಶ್ವತವಾದ ಪದವಿ ಯನ್ನು ಕೊಟ್ಟಿರುವೆನು ' ಎಂದು ಹೇಳಿ ಮಾಯವಾದನು.

ಇತ್ತಲಾಗಿ ತಂದೆ ತಾಯಿಗಳು ಧ್ರುವನನ್ನು ಕಾಣದೆ, ಹಂಬಲಿಸುತ್ತಾ ಧ್ರುವನು ಎಲ್ಲಿ ಹೋದನೋ ಎಂದು ಪೇಚಾಡುತ್ತಾ, ಮಗುವನ್ನು ತಳ್ಳಿ ಬಿಟ್ಟೆವೆಂದು ಕೊರಗುತ್ತಾ ಇರಲು, ನಾರದರು ಬಂದು ಧ್ರುವನ ವೃತ್ತಾಂ ತವನ್ನೆಲ್ಲಾ ತಿಳಿಸಿದರು. ತರುವಾಯ ತಂದೆ ತಾಯಿಗಳು ಹೋಗಿ ಧ್ರುವ ನನ್ನು ಉಪಚರಿಸಿ ಕರೆತಂದು ಪಟ್ಟವನ್ನು ಕಟ್ಟಿದರು. ಬಹುಕಾಲ ರಾಜ್ಯ

ವನ್ನಾಳಿ, ತರುವಾಯ ದೇವರು ಕೊಟ್ಟ ಶಾಶ್ವತಪದವಿಯನ್ನು ಸೇರಿ ಈಗಲೂ ಆಕಾಶದಲ್ಲಿ ಉತ್ತರದಿಕ್ಕಿನಲ್ಲಿ ನಿತ್ಯದಲ್ಲೂ ಒಂದೇ ಸ್ಥಳದಲ್ಲಿ ಪ್ರಕಾಶಿಸುತ್ತ ಧ್ರುವನಕ್ಷತ್ರವೆಂದು ಪ್ರಸಿದ್ಧಿಗೊಂಡಿರುವನು.

---

## ೩೧. ಕಬ್ಬೂ ತೆಂಗೂ.

ಒಂದು ಕಬ್ಬಿನ ಗದ್ದೆ. ಅಲ್ಲಿ ಕಬ್ಬು ಬಹು ಚೆನ್ನಾಗಿಬೆಳೆದು ಗದ್ದೆಯು ಶುಂಬಾ ತುಂಬಿದ್ದಿತು. ಗದ್ದೆಯ ಬದುವಿನಮೇಲೆ ಒಂದೇ ಒಂದು ತೆಂಗಿನ ಗಿಡವು ಬೆಳೆದಿದ್ದಿತು. . ಅದರಲ್ಲಿಯೂ ಹದವಾದ ಎಳೆನೀರುಗಳು ತುಂಬಿದ್ದುವು. ಒಂಟಿಯಾಗಿ ನಿಂತಿದ್ದ ತೆಂಗನ್ನ ನೋಡಿ, ಗುಂಪುಗುಂಪಾಗಿ ಬೆಳೆದಿದ್ದ ಕಬ್ಬು ಅಪಹಾಸ್ಯಮಾಡಲು ತೊಡಗಿತು. ‘ ಎಲೈ ! ತೆಂಗೇ ನೀನು ಹುಟ್ಟಿ ಇದುವರಿಗೆ ಹತ್ತು ಹನ್ನೆರಡು ವರ್ಷಗಳಾಗಿರಬಹುದು. ನಿನ್ನಿಂದ ಏನು ಪ್ರಯೋಜನ ! ನೀನು ಬಿಟ್ಟಿರುವ ಫಲವು ಆಕಾಶದಲ್ಲಿರುವುದು. ನಿನ್ನ ಮೈಯೋ-ಶುದ್ಧ ಒರಟು; ನಿನ್ನನ್ನು ಹತ್ತಿ, ನಿನ್ನ ಫಲವನ್ನು ತೆಗೆದುಕೊಳ್ಳುವುದು ಎಲ್ಲರಿಗೂ ಸಾಧ್ಯವಲ್ಲ. ಹೀಗಿರುವಾಗ ನೀನು ಹೆಮ್ಮೆಯಿಂದ ತಲೆಯನ್ನೆತ್ತಿಕೊಂಡು— ಬಾಯಾರಿದವರೆಲ್ಲರೂ ಬಂದು ನೋಡಿ; ದ್ರಾಕ್ಷಿ ಹಣ್ಣು ಸಿಕ್ಕದೆ ನರಿ ತಲೆಯನ್ನು ಜೋಲು ಹಾಕಿಕೊಂಡು ಹೋದಂತೆ, ಮುಖವನ್ನು ಒಣಗಿಸಿಕೊಂಡು ಹೋಗಿರಿ- ಎಂಬಂತೆ ನಿಂತಿರುತ್ತೀಯೆ ! ನನ್ನನ್ನು ನೋಡು ! ನಾನು ಹುಟ್ಟಿದ ಒಂದು ವರ್ಷ ಒಂಬತ್ತು ತಿಂಗಳಲ್ಲಿಯೇ, ಎಷ್ಟು ಉಪಯೋಗವಾಗಿರುವೆನು. ನನ್ನ ಮೈಯೆಲ್ಲಾ ಸಿಪ್ಪೆ, ಬುಡ ಮೊದಲು ಕೊನೆಯವರೆಗೂ ನಾನು ಜನರಿಗೆ ಬೇಕಾಗಿರುವೆನು. ನಾನು ಆ ಮಹಾ ವಿಷ್ಣುವಿನ ಮಗನಾದ ಮನ್ಮಥನಿಗೆ ಬಿಲ್ಲಾಗಿರುವೆನು. ನನ್ನ ಗರಿಯೇ ನನ್ನನ್ನು ಕಾಪಾಡುವುದು. ನಾನು ಜನರಿಗೆ ನಾನಾ ತೆರದಲ್ಲಿ ಬೇಕಾಗಿರುವೆನು. ಬೇಕಾದರೆ ಜನರು ನನ್ನನ್ನು ಹಾಗೆಯೇ ಉಪಯೋಗಿಸಬಹುದು; ಇಲ್ಲವಾದರೆ ನನ್ನ ರಸವನ್ನು ತೆಗೆದು ಬೆಲ್ಲವನ್ನು ಮಾಡಬಹುದು. ನನ್ನ ಬೆಲ್ಲವನ್ನು ಚೆನ್ನಾಗಿ ಶೋಧಿಸಿ ದಿವ್ಯವಾದ ಸಕ್ಕರೆಯನ್ನು ಮಾಡಬಹುದು. ನನ್ನ ಸಿಪ್ಪೆಯನ್ನೂ ನನ್ನ ಗರಿಯನ್ನೂ ಒಲೆಗೆ

ಉಪಯೋಗಿಸಿಕೊಳ್ಳಬಹುದು. ನನ್ನ ಚಕ್ಕೆಯಿಂದ ಬರೆವಕಾಗದವನ್ನು ಮಾಡಬಹುದು. ಭೂಮಿಯಮೇಲೆ ಜನ್ಮವೆತ್ತಿದರೆ ನನ್ನ ಹಾಗೆ ಜನರಿಗೆ ಉಪಯೋಗವಾಗಿದ್ದರೆ ಸಾರ್ಥಕ. ನಿನ್ನ ಜನ್ಮವನ್ನು ಸುಡು ' ಎಂದಿತು.

ಇದುವರೆಗೂ ಸುಮ್ಮನೆ ಇದ್ದು, ಗಂಭೀರವಾಗಿ ಕೇಳುತ್ತಿದ್ದ ತೆಂಗು ' ಮಿಣಕು ಹುಳಕ್ಕೂ ನಕ್ಷತ್ರಕ್ಕೂ ಸಾಟಿಯೆ! ನೀನು ಈ ಹೊತ್ತು ಇದ್ದು ನಾಳೆನಾಶವಾಗುವವನು. ನಾನು ನಾಲ್ಕಾರು ತಲೆ ನಿಂತು, ನನ್ನನ್ನು ನಟ್ಟವನ ಮಕ್ಕಳೂ ಮೊಮ್ಮಕ್ಕಳವರೆಗೂ, ಇವನ ಉಪಕಾರವನ್ನು ತಲೆಯ ಮೇಲೆ ಹೊತ್ತು, ಬೇಕಾದಾಗ, ಅಪೇಕ್ಷಿಸಿದವರಿಗೆ ಪ್ರತಿಯಾಗಿ ಉಪಕಾರವನ್ನು ಮಾಡುವೆನು. ನಿನ್ನನ್ನಾದರೆ, ರಸವನ್ನು ಹಿಂಡಿ ಒಲೆಗೆ ಎಸೆವರು. ಹುಟ್ಟಿದ ಒಂದೆರಡು ವರ್ಷದಲ್ಲಿ ನೀನು ನಿರ್ನಾಮವಾಗುವೆ. ನಾನಾದರೋ ಜನರಿಗೆ ಮನೆಕಟ್ಟಿಕೊಳ್ಳುವುದಕ್ಕೆ ಉಪಯೋಗವಾಗಿರುವೆನು. ಅಡಿಗೆಗೆ ಉಪಯೋಗವಾಗಿರುವೆನು. ಬ್ರಾಹ್ಮಣರು ರಾಜನನ್ನು ನೋಡಲಿಕ್ಕೆ ಹೋದಾಗಲೂ, ಜನರು ದೇವರನ್ನು ನೋಡಲಿಕ್ಕೆ ಹೋದಾಗಲೂ ನನ್ನ ಫಲವನ್ನು ತೆಗೆದುಕೊಂಡು ಹೋಗಿ ಒಪ್ಪಿಸುವರು. ನನ್ನ ನಾರಿನಿಂದ ಹಗ್ಗವನ್ನು ಮಾಡುವರು. ನನ್ನ ಕರಟದಿಂದ ಸೌಟನ್ನು ಮಾಡುವರು. ನನ್ನ ತಾಳಿಂದ ತೊಲೆಯನ್ನು ಮಾಡುವರು ನನ್ನ ಗರಿಯಿಂದ ಮಟ್ಟೆಯನ್ನು ಮಾಡುವರು. ನನ್ನ ನಾರಿನಿಂದ ಬೆಂಕಿಯನ್ನು ಹೊತ್ತಿಸುವರು. ನಾನಿದ್ದಷ್ಟು ದಿನವೂ ಒಂದಲ್ಲ, ಒಂದು ತೆರನಾಗಿ ಜನರಿಗೆ ಉಪಯೋಗವಾಗಿರುವೆನು. ಈ ಹೊತ್ತು ಹುಟ್ಟಿ, ನಾಳೆ ಬೆಳದು, ಮೈಯೆಲ್ಲಾ ಗಂಟುಗಂಟಾಗಿ, ಸೋಗೆ ಹರಿತವಾಗಿ, ನಾಡಿದ್ದು ಸಾಯುವ ನಿನಗೆ, ಎಷ್ಟು ಅಹಂಕಾರ ? ಸಾಕುಮಾಡು ' ಎಂದಿತು.

---

## ೩೨. ಮೃಗಗಳು ರಾಜನನ್ನು ಗೊತ್ತುಮಾಡಿಕೊಂಡ ಬಗೆ.

ದಂಡಕಾರಣ್ಯವೆಂಬುದು ಒಂದು ಮಹಾಟವಿ. ಆ ಅಡವಿಗೆ ದೊರೆಯಾದ ಮೃಗರಾಜನು ಒಂದು ದಿನ ಬೆಳಗ್ಗೆ ಸತ್ತು ಬಿದ್ದಿದ್ದನು. ಆ ಸತ್ತ ಸಿಂಹರಾಜನ ಬಳಿಯಲ್ಲಿ ಅವನ ಸಣ್ಣ ಮರಿಗಳು ಕಣ್ಣೀರನ್ನು ಸುರಿಸುತ್ತಾ

ಕುಳಿತಿದ್ದವು. ಅಷ್ಟು ಹೊತ್ತಿಗೆ ಸರಿಯಾಗಿ ಮಂತ್ರಿಶ್ರೇಷ್ಠನಾದ ಜಂಬುಕನು (ನರಿಯು) ಬಂದು ರಾಜಪುತ್ರರಿಗೆ ಸಮಾಧಾನವನ್ನು ಹೇಳಿ, ಹೆದರಬೇಡಿ ಯೆಂದು ಇತರ ಸಣ್ಣ ಸಣ್ಣ ಮೃಗಗಳಿಗೆ ಧೈರ್ಯವನ್ನು ಕೊಟ್ಟು, ಮುಂದಣ ಕ್ರಮವನ್ನು ನಡೆಸಲು, ಬಹುಬೇಗ ಒಂದು ಉಪಾಯವನ್ನು ತನ್ನೊಳಗೆ ತಾನೇ ಯೋಚಿಸಿತು. ‘ ಈಗಲಾದರೋ ನಮ್ಮ ಮಹಾರಾಜ ಸಿಂಹರಾಜನು ಸತ್ತು ಬಿದ್ದಿರುವನು. ಅವನಿಗೆ ಪರಮಮಿತ್ರನಾದ ನಾನು ಅವನ ಹಿರಿಯ ಮಗನಿಗೆ ಪಟ್ಟವನ್ನು ಕಟ್ಟಿ, ಅವನು ದೊಡ್ಡವನಾಗುವವರೆಗೂ ನಾನೇ ನಿಂತು ರಾಜ್ಯಭಾರವನ್ನು ಮಾಡುವುದು ಧರ್ಮ. ಆದರೆ ನನಗೆ ಸಲಹೆ ಕೊಡುವುದಕ್ಕೆ ಬರುವುದೇ ಹೊರತು ನಿಂತು ರಾಜ್ಯಭಾರವನ್ನು ಮಾಡುವುದಕ್ಕೆ ತಿಳಿಯದು. ನನಗೆ ತಿಳಿಯದ ಕೆಲಸವನ್ನು ಮಾಡುವುದಕ್ಕೆ ಹೋಗಿ, ನಾನು ಅವಿವೇಕಿ ಎನ್ನಿಸಿಕೊಳ್ಳಬಾರದು. ನನ್ನ ಮಂತ್ರಿತ್ವವೇನೋ ನನಗೆ ಉಳಿಯಬೇಕು ; ರಾಜನು ಯಾವನಾದರೇನು ? ನನ್ನ ಮಾತನ್ನು ಕೇಳುವವನು ಸಿಕ್ಕಿದರೆ ನನಗೆ ಬೇರೆ ದೊರೆತನವೇಕೆ ? ದೊರೆತನದ ಕಷ್ಟವಿಲ್ಲದೆ ದೊರೆಯ ಸುಖವನ್ನೆಲ್ಲಾ ನನ್ನ ಮನಸ್ಸು ಬಂದ ಹಾಗೆ ನಾನು ಅನುಭವಿಸಬಹುದು. ಇದಕ್ಕಾಗಿ ನಾನೇ ಮುಖ್ಯಮುಖ್ಯವಾದ ಪ್ರತಿಯೊಂದು ಜಾತಿಯ ಮೃಗದ ಬಳಿಗೂ ಹೋಗಿ—ಸಮಯವು ಹೀಗೆ ಇದೆ, ನೀನೇ ಹೇಗಾದರೂ ದೊರೆಯಾಗಬೇಕೆಂಬುದು ನನ್ನ ಮನಸ್ಸು ; ತಕ್ಕ ಪ್ರಯತ್ನವನ್ನು ಮಾಡು—ಎಂದು ಹೇಳಿಬರುವೆನು. ಯಾರಾದರೂ ನನ್ನನ್ನೇ ಆಪ್ತನೆಂದು ಕರೆವರು ಎಂದು ಯೋಚಿಸಿ, ಹೊರಟು, ಆ ಕಾಡಿನಲ್ಲಿದ್ದ ಮೃಗಗಳಿಗೆಲ್ಲಾ ವರ್ತಮಾನವನ್ನು ಕೊಟ್ಟನು ಆಗ ಪ್ರತಿಯೊಂದು ಮೃಗವು “ ಮಂತ್ರಿಯೆಂದರೆ ಜಂಬುಕನೇ ಮಂತ್ರಿ, ನಾನು ದೊರೆಯಾದರೆ ಅವನನ್ನೇ ಮಂತ್ರಿಯಾಗಿ ಇಟ್ಟುಕೊಳ್ಳುವೆನು. ನಮಗೆ ಎಂತಹ ಮಿತ್ರ, ’ ಎಂದುಕೊಂಡು ಸಿಂಹರಾಜನ ಅರಮನೆಯಾಗಿದ್ದ ಒಂದು ದೊಡ್ಡ ಗವಿಯ ಬಳಿಗೆ ಬಂದು ಸೇರಿತು. ನರಿಯೂ ಅಷ್ಟು ಹೊತ್ತಿಗೆ ಅಲ್ಲಿಗೆ ಬಂದು, ‘ ಎಲೈ, ಮೃಗಶ್ರೇಷ್ಠರಿರಾ ! ನಮ್ಮ ಮಹಾರಾಜನು ದೈವಾಧೀನನಾಗಿರುವನು. ಅವನ ಮಕ್ಕಳು ಶಕ್ತರೇ ಆದರೂ ಇನ್ನೂ ಚಿಕ್ಕವರಾಗಿರುವರು. ಅವರು ದೊಡ್ಡವರಾಗುವವರೆಗೂ ರಾಜ್ಯಭಾರವನ್ನು ನಿಮ್ಮಲ್ಲಿ ಯೋಗ್ಯರಾದವರಿಗೆ ಒಪ್ಪಿಸಬೇಕೆಂದು ಯೋಚಿಸಿರುವರು. ಆದುದರಿಂದ ನಿಮ್ಮಲ್ಲಿ ಶ್ರೇಷ್ಠ

ರಾದವರು ರಾಜ್ಯಭಾರವನ್ನು ವಹಿಸಬೇಕೆಂದು ನಮ್ಮ ಕೋರಿಕೆ,' ಎಂದು ಹಿಂಗಾಲುಗಳ ಮೇಲೆ ನಿಂತು, ಮುಂಗಾಲುಗಳನ್ನು ಮುಗಿದು ತಲೆ ತಗ್ಗಿಸಿ, ಬಹು ವಿನಯದಿಂದ ಬಿನ್ನಹ ಮಾಡಿಕೊಂಡಿತು.

ಅಲ್ಲಿ ನೆರೆದಿದ್ದ ಆನೆ, ಹುಲಿ, ಕರಡಿ, ಕತ್ತೆ, ಕುದುರೆ, ನಾಯಿ, ನರಿ, ಕೋತಿ, ಗಿಳಿ ಮುಂತಾದುವುಗಳು ಸ್ವಲ್ಪ ಹೊತ್ತು ಒಂದರ ಮುಖವನ್ನು ಒಂದು ನೋಡಿದುವು. ತರುವಾಯ ಒಂದು ಗುಟರೆಯನ್ನು ಹಾಕಿ, ಹುಲಿ ಎದ್ದು, ಬಾಲವನ್ನು ನೆಲಕ್ಕೆ ಅಪ್ಪಳಿಸಿ, ತಲೆಯನ್ನು ಒದರಿ ಮೈಯನ್ನು ಮುರಿದು, ಮತ್ತೆ ಒಂದುಸಲ ಸಣ್ಣಸಣ್ಣ ಮೃಗಗಳು ನಡಗುವಂತೆ ಆರ್ಭಟಿಸಿ,-ರಾಜವಂಶಕ್ಕೆ ಸೇರಿದವನಾಗಿಯೂ,ಗತಿಸಿದ ಸಿಂಹರಾಜನಿಗೆ ಸಮೀಪ ಬಂಧುವಾಗಿಯೂ ಇರುವ ನಾನಲ್ಲದೆ ಈ ದೊರೆತನಕ್ಕೆ ಇನ್ನು ಯಾರು ತಾನೆ ಅರ್ಹರು ?- ಎಂದಿತು.

ಹುಲಿಯ ಸಡಗರವನ್ನೂ, ಆರ್ಭಟವನ್ನೂ ಧಿಕ್ಕರಿಸುವ ನೋಟದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ನೋಡುತ್ತಿದ್ದ ಕರಡಿಯು, ಗುರ್ರೆಂದು ಗೇಣುಗೇಣುದ್ದ ಕೂದಲುಳ್ಳ ತನ್ನ ಮೈಯನ್ನು ಒಂದಾವೃತ್ತಿ ಕೊಡವಿ, ಹಿಂಗಾಲಮೇಲೆ ನಿಂತು, ಹುಲಿಯನ್ನು ಕುಸ್ತಿಗೆ ಕರೆಯುವಂತೆ ಮುಂಗಾಲುಗಳನ್ನು ಎತ್ತಿ ಬೀಸುತ್ತಾ, 'ಹುಲಿಯೆ! ಸಾಕು! ನಿಲ್ಲಿಸು! ನಾನಿಲ್ಲಿರುವಾಗ ನೀನು ಯಾರು? ಬಲದಲ್ಲಿ ನಾನು ನಿನಗೆ ಕಡಿಮೆಯೆ? ಪ್ರಾಣಿಗಳನ್ನು ಹಿಂಸಿಸುವುದರಲ್ಲಿ ನಾನು ಯಾರಿಗೆ ಕೀಳು? ಧೈರ್ಯದಲ್ಲಿ ನನಗೆ ಇದಿರಾರುಂಟು? ಇವೆಲ್ಲಾ ಹಾಗಿರಲಿ, ಶತ್ರುವು ಮರವನ್ನೇರಿದರೆ, (ಇತರ ಮೃಗಗಳ ಕಡೆಗೆ ತಿರುಗಿ) ಈ ಬೆಪ್ಪ, ಮರವನ್ನೇರೀತೇ? ಶತ್ರುವಿನಿಂದ ನಿಮ್ಮನ್ನೆಲ್ಲಾ ಸಂರಕ್ಷಿಸೀತೇ? ನಾನೇ ಎಂದೆಂದಿಗೂ ರಾಜನಾಗಿರುವುದಕ್ಕೆ ತಕ್ಕವನು. ನನ್ನ ಶಕ್ತಿ ಆ ಸಿಂಹಕ್ಕೂ ಇಲ್ಲ. ನನ್ನ ಯೋಗ್ಯತೆಯನ್ನು ನೀವು ಚೆನ್ನಾಗಿ ತಿಳಿದು ಯೋಚಿಸಿರಿ,' ಎಂದು ಮೃಗಗಳು ಬೆದರಿ ಓಡಿಹೋಗುವಂತೆ ಕೋಪದಿಂದ ಗುರುಗುಟ್ಟಿತು.

ಇವೆರಡರ ಆರ್ಭಟವನ್ನೂ ಗಂಭೀರವಾಗಿ ನೋಡುತ್ತಿದ್ದ ಗಜರಾಜನು, ಸೊಂಡಿಲನ್ನು ಅಲ್ಲಾಡಿಸುತ್ತ, ಮುಂದೆ ಬಂದು,-' ನಾನು ಹೆಚ್ಚು

ಹೇಳುವುದಿಲ್ಲ, ಗಾತ್ರದಲ್ಲಿಯೂ, ಶಕ್ತಿಯಲ್ಲಿಯೂ, ಧೈರ್ಯದಲ್ಲಿಯೂ, ಮುಖ್ಯವಾಗಿ ಗಾಂಭೀರ್ಯದಲ್ಲಿಯೂ ಈ ಕಾಡಿನಲ್ಲಿ ನನ್ನಂತೆ ಇನ್ನಾವ ಪ್ರಾಣಿಯಾದರೂ ಉಂಟೆ? ಈ ವಿಷಯವನ್ನು ಸ್ವಲ್ಪ ಮನಸ್ಸಿಗೆ ತೆಗೆದುಕೊಂಡು ನೀವು ಯಾರನ್ನು ಬೇಕಾದರೂ ಗೊತ್ತುಮಾಡಿಕೊಳ್ಳಿರಿ" ಎಂದಿತು.

"ರೂಪಿನಲ್ಲಿಯೂ, ಕಾಲುಬಲದಲ್ಲಿಯೂ ನನಗೆ ಈಡಾರು? ಎಂದು ಕುದುರೆಯೂ; ನನ್ನ ಕಣ್ಣೇ ಸಾಕು! ನನ್ನ ಕಾಲಿನ ಮಹಿಮೆಯೊಂದೇ ಮೇಲು! ದೊರೆತನಕ್ಕೆ ಇನ್ನೇನು ಬೇಕು?" ಎಂದು ಜಿಂಕೆಯೂ; 'ಮನುಷ್ಯರಂತಿರುವ ನಾನಲ್ಲದೆ ಇನ್ನು ಯಾರು ದೊರೆಯಾಗಬಲ್ಲರು? ನನ್ನ ಚೇಷ್ಟೆಗಳಲ್ಲದೆ ಇನ್ನಾವುವು ನಿಮಗೆ ಸಂತೋಷವನ್ನುಂಟುಮಾಡುವುವು?' ಎಂದು ಕಪಿಯೂ; ಕಲಿತ ಎರಡು ಮಾತುಗಳನ್ನು ಮುದ್ದು ಮುದ್ದಾಗಿ ಆಡುತ ಬಂದ ಗಿಳಿಯು, "ಮನುಷ್ಯರು ಮಾತನಾಡುವಂತೆ ಮಾತನಾಡುವ ನಾನುತಾನೆ ನಿಮಗೆಲ್ಲ ದೊರೆಯಾಗಿರಬೇಕು?" ಎಂದೂ ಹೀಗೆಯೇ ಯೋಗ್ಯತೆ ಇಲ್ಲದಿದ್ದರೂ ನಾನು ತಾನೆಂದು ಹೊಡೆದಾಡುತ್ತಿದ್ದ ಇತರ ಅಲ್ಪ ಪ್ರಾಣಿಗಳನ್ನು ಗಣನೆಗೆ ತಾರದೆ, ಮುಖಂಡರಾದ ಕೆಲವು ಮೃಗಗಳು ಸೇರಿ ಪ್ರಾಣಿಹಿಂಸೆ ಮಾಡದ, ಬಲವಾದ, ಗಂಭೀರವಾದ, ಮುಖ್ಯವಾಗಿ ಸ್ತೋತ್ರಪ್ರಿಯನಾದ ಗಜರಾಜನೇ ಈ ಅರಣ್ಯದಲ್ಲಿ ಸದ್ಯಃ ರಾಜನಾಗಿರಬೇಕೆಂದು ಗೊತ್ತುಮಾಡಿಕೊಂಡು, ರಾಜಾಧಿರಾಜಾ ಹೊ! ಎಂದು ಕೂಗಿಕೊಳ್ಳುತ್ತ ತಮ್ಮ ತಮ್ಮ ಬಿಡಾರಕ್ಕೆ ಹೋದುವು.

ಎಲ್ಲವೂ ಹೊರಟು ಹೋಗುವವರೆಗೆ ಕಾದಿದ್ದು ಬಹು ತಂತ್ರಿಯಾದ ಆ ನರಿಯು, ಗಜರಾಜನಿಗೆ ನಯಭಯವನ್ನು ತೋರಿಸುತ ಬಹು ದೂರದಲ್ಲಿ ನಿಂತಿದ್ದು, ಆ ಗಜರಾಜನು ಒಂದು ಆವೃತ್ತಿ ಇದಿದ್ದಕಡೆಗೆ ತಿರುಗಲು ಮೆಲ್ಲನೆ ಹತ್ತಿರಕ್ಕೆ ಹೋಯಿತು. ಆಗ ಆನೆಯು ಎಲೈ ಮಂತ್ರಿಶ್ರೇಷ್ಠನೇ! ನೀನು ಬಂದು ನನಗೆ ಹೇಳದಿದ್ದರೆ ನಾನು ಇಲ್ಲಿಗೆ ಬರುತ್ತಿರಲಿಲ್ಲ, ನನಗೆ ಈ ಪದವಿಯೂ ಸಿಕ್ಕುತ್ತಿರಲಿಲ್ಲ. ನನ್ನ ಮಿತ್ರನಾದ ನೀನೇ ಮಂತ್ರಿಯಾಗಿದ್ದುಕೊಂಡು ನಮ್ಮ ಪ್ರಜೆಗಳ ಕ್ಷೇಮಲಾಭಗಳನ್ನು ತಿಳಿಸುತ್ತಾ ಬಾ- ಎಂದು ಹೇಳಿ, ಗಿಡದೊಳಕ್ಕೆ ನುಗ್ಗಿ, ಸೊಂಡಲಲ್ಲಿ ರೆಂಬೆಗಳನು ಮುರಿದು ತಿರುಗಿಸುತ್ತಾ, ಸಂತೋಷದಿಂದ ತನ್ನ ಹಿಂಡನ್ನು ಸೇರಿತು.

---

## ೩೩. ವರಲಕ್ಷ್ಮೀ ಕಥೆ.

ವಿದರ್ಭದೇಶವೆಂದು ಒಂದು ದೇಶ. ಆ ದೇಶದಲ್ಲಿ ಕುಂಡಿನ ನಗರವೆಂಬುದೊಂದು ಪಟ್ಟಣ. ಆ ಪಟ್ಟಣದಲ್ಲಿ ಚಾರುಮತಿ ಎಂಬ ಪತಿವ್ರತಾಶಿರೋಮಣಿಯೊಬ್ಬಳಿದ್ದಳು. ಆ ಚಾರುಮತಿಯು, ತನ್ನ ಗಂಡನೇ ದೇವರೆಂದು ತಿಳಿದು, ಗಂಡನ ಮಾತಿಗೆ ಇದಿರಾಡದೆ, ಯಾವಾಗಲೂ ಗಂಡನ ಉಪಚಾರದಲ್ಲಿಯೇ ಸಂತೋಷದಿಂದ ಕಾಲವನ್ನು ಕಳೆಯುತ್ತಿದ್ದಳು. ಗಂಡನಾದರೋ ಬಹು ಬಡವ; ಬೆಳಗ್ಗೆ ಊಟಕ್ಕೆ ಇದ್ದರೆ ಸಾಯಂಕಾಲಕ್ಕೆ ಇರುತ್ತಿರಲಿಲ್ಲ; ಬಹು ಕಷ್ಟಪಟ್ಟು ಅನ್ನವನ್ನು ಸಂಪಾದಿಸಿ ತರುತ್ತಿದ್ದನು. ಗಂಡನು ತಂದುದನ್ನು ಸಂತೋಷದಿಂದ ತೆಗೆದಿಟ್ಟು, ದೇವರಿಗೆ ಸಮರ್ಪಿಸಿ, ಗಂಡನಿಗೆ ಊಟಕ್ಕೆ ಇಟ್ಟು, ಮಿಕ್ಕುದನ್ನು ಆ ಚಾರುಮತಿಯು ಊಟಮಾಡಿ ಸುಖವಾಗಿರುತ್ತಿದ್ದಳು. ಒಂದು ದಿನವಾದರೂ ತನ್ನ ಗಂಡ ಬಡವನೆಂದು ಅವಳು ಅಸಮಾಧಾನಪಟ್ಟುದಿಲ್ಲ, ಗಂಡನ ಬಡತನವನ್ನೆತ್ತಾಡಿ ಯಾವಾಗಲೂ ಅವನ ಮನಸ್ಸನ್ನು ನೋಯಿಸಿದುದೂ ಇಲ್ಲ, ನೆರೆಹೊರೆಯವರ ಐಶ್ವರ್ಯವನ್ನು ನೋಡಿ ದುಃಖಪಟ್ಟವಳಲ್ಲ. ಒಬ್ಬರೊಡನೆಯೂ ಅವಳು ಗಟ್ಟಿಯಾಗಿ ಮಾತನಾಡಿದವಳಲ್ಲ. ಯಾವ ಪ್ರಾಣಿಯನ್ನು ಕಂಡರೂ ಅವಳು ಪ್ರೀತಿಸುತ್ತಿದ್ದಳು.

ಹೀಗಿದ್ದ ಚಾರುಮತಿಯ ಒಳ್ಳೆಯತನಕ್ಕೂ, ಸುಗುಣಕ್ಕೂ, ಅವರನ್ನು ಲಕ್ಷ್ಮೀದೇವಿಯೇ ಮೆಚ್ಚಿ, ಒಂದುದಿನ ರಾತ್ರಿ ಚಾರುಮತಿಯ ಸ್ವಪ್ನದಲ್ಲಿ ಬಂದು 'ಎಲೌ! ಚಾರುಮತೀ, ನಿನಗೆ ಗಂಡನಲ್ಲಿರುವ ಭಕ್ತಿವಿಶ್ವಾಸಕ್ಕೂ, ಪ್ರಾಣಿಮಾತ್ರದಲ್ಲಿರುವ ಪ್ರೀತಿಗೂ ನಾನು ಮೆಚ್ಚಿದೆನು. ಇಂತಹವರನ್ನಲ್ಲವೆ ದೇವಾಸುದೇವತೆಗಳು ಮೆಚ್ಚತಕ್ಕುದು! ನಾನು ವರಲಕ್ಷ್ಮೀದೇವಿ. ಏಳು! ಏಳು! ನಾನು ಹೇಳುವುದನ್ನು ಕೇಳು. ಬರುವ ಶ್ರಾವಣಮಾಸದ ಶುಕ್ಲಪಕ್ಷದ ಎರಡನೆಯ ಶುಕ್ರವಾರದಲ್ಲಿ ನನ್ನನ್ನು ಪೂಜೆಮಾಡು. ಹಾಗೆ ನನ್ನನ್ನು ಮನಃಪೂರ್ವಕ ಪೂಜೆಮಾಡಿದವರಿಗೆ ಬೇಕಾದುದನ್ನೆಲ್ಲಾ ಕೊಡುವೆನು' ಎಂದು ಹೇಳಿ ಮಾಯವಾದಳು.

ಬೆಳಗಾಯಿತು. ಚಾರುಮತಿಯು ತನ್ನ ಸ್ವಪ್ನವನ್ನು ಪತಿಗೆ ತಿಳಿಸಿದಳು. ಅವನು ಸಂತೋಷದಿಂದ ಶ್ರಾವಣ ಶುಕ್ರವಾರ ವರಲಕ್ಷ್ಮೀಪೂಜೆಗೆ

ಬೇಕಾದುದನ್ನು ಅಣಿಮಾಡಿದನು. ಸದಾ ನಿರ್ಮಲಚಿತ್ತಳಾದ ಆ ಚಾರುಮತಿಯು ಆ ದಿನ ವರಲಕ್ಷ್ಮಿಯನ್ನು ಮನಸ್ಸಿನಿಂದ ಪೂಜೆಮಾಡಿದಳು. ಲಕ್ಷ್ಮಿಯು ಬೇಕಾದ ವರವನ್ನಿತ್ತಳು. ಚಾರುಮತಿಯ ಮನೆಯಲ್ಲಿ ಧನವೂ ಧಾನ್ಯವೂ ಉಕ್ಕಿದುವು. ಚಾರುಮತಿಯು ಆ ಸಂಪತ್ತಿನಿಂದ ಬಡಬಗ್ಗರಿಗೆ ಅನ್ನದಾನ ಮಾಡುತ್ತಾ, ಐಶ್ವರ್ಯ ಬಂದಿತೆಂದು ಗಂಡನನ್ನು ತಿರಸ್ಕರಿಸದೆ, ಎಂದಿನಂತೆ ಸ್ವಲ್ಪವೂ ಬೇಸರವಿಲ್ಲದೆ ಗಂಡನನ್ನು ಉಪಚರಿಸುತ್ತಾ ವರಲಕ್ಷ್ಮಿಯನ್ನು ಪೂಜಿಸುತ್ತಾ ಸೌಖ್ಯವಾಗಿದ್ದಳು.

---

## ೩೪. ಕಡುಬಿನಕಥೆ.

ಒಂದಾನೊಂದು ಪಟ್ಟಣವಿದ್ದಿತು. ಆ ಪಟ್ಟಣದಲ್ಲಿ ಶಾಸ್ತ್ರಿಗಳೊಬ್ಬರಿದ್ದರು. ಅವರಿಗೆ ಇಬ್ಬರು ಹೆಣ್ಣುಮಕ್ಕಳಿದ್ದರು, ಅವರಿಬ್ಬರಿಗೂ ಚೆನ್ನಾಗಿ ವಿದ್ಯೆಯನ್ನು ಕಲಿಸಿ, ದೊಡ್ಡವಳನ್ನು ತಮ್ಮ ಸೋದರದ ಕಡೆಯ ಒಬ್ಬ ಹುಡುಗನಿಗೆ ಮದುವೆ ಮಾಡಿಕೊಟ್ಟಿದ್ದರು. ಆ ಹುಡುಗನು ಒಂದು ಹಳ್ಳಿಯಲ್ಲಿ ವಾಸವಾಗಿದ್ದನು. ಮದುವೆಯಾದ ಕೆಲವು ವರ್ಷಗಳಲ್ಲಿ ಆ ಹುಡುಗನ ತಂದೆತಾಯಿಗಳು ತೀರಿಹೋಗಲು, ಆ ಹುಡುಗನು ಮಾವನ ಮನೆಗೆ ಹೋಗಿ, ಕೆಲವು ದಿನಗಳು ಅಲ್ಲಿಯೇ ಇದ್ದು ತರುವಾಯ ತನ್ನ ಹೆಂಡತಿಯೊಡನೆ ಹಳ್ಳಿಗೆ ಹೋಗಬೇಕೆಂದು ಹೇಳಿದನು. ಆಗ ಶಾಸ್ತ್ರಿಗಳು ಅಳಿಯನಿಗೂ ಮಗಳಿಗೂ ಒಳ್ಳೆಯ ಔತಣವನ್ನು ಮಾಡಿ ಉಡುಗೆರೆಗಳನ್ನು ಕೊಟ್ಟು ಕಳುಹಿಸಿದರು.

ದಾರಿಯಲ್ಲಿ ಬರುತ್ತಾ, ಮಧ್ಯಾಹ್ನದ ಊಟವನ್ನು ಜ್ಞಾಪಿಸಿಕೊಂಡು, 'ಎಲೆ, ಎಲೆ, ನಾವು ಊರಿಗೆ ಹೋದೊಡನೆ ನೀನು ಅದನ್ನು ಮಾಡಿ ಹಾಕಬೇಕು, ನೋಡು. ಅದು ಬಹು ರುಚಿಯಾಗಿದ್ದಿತು' ಎಂದು ಗಂಡನು ಹೆಂಡತಿಗೆ ಹೇಳಿದನು. 'ಅದು' ಎಂದರೆ ಯಾವುದೋ ತಿಳಿಯದೆ, ಅದು ಯಾವುದು? ಎಂದು ಕೇಳಿದಳು. ಅದಕ್ಕೆ ಗಂಡನು, 'ಅದುಕಾಣೆ ಎಂದರೆ, ಅದು ಬಹು ಚೆನ್ನಾಗಿದ್ದಿತಲ್ಲೇ! ಅದು!' ಎಂದನು. ಜಾಣೆ

ಯಾದ ಹೆಂಡತಿಯು, ಮಧ್ಯಾಹ್ನದಲ್ಲಿ ಮಾಡಿದ ಅಡಿಗೆಯಲ್ಲಿ ಒಂದೊಂದು ಭಕ್ಷ್ಯವನ್ನಾಗಿ ಲಾಡೇ? ಚಿರೋಟಿಯೋ? ಜಿಲೇಬಿಯೋ? ಘೀವರೇ? ಎಂದು ಹೆಸರು ಹೇಳುತ್ತಾ, ಅದರದರ ರುಚಿಯನ್ನು ಸಾಧ್ಯವಾದಮಟ್ಟಿಗೂ ಬಣ್ಣಿಸುತ್ತಾ ಬಂದಳು. ಯಾವುದಕ್ಕೂ-ಅದಲ್ಲ, ಅದೂ ಅಲ್ಲ, ಅದೂ ಅಲ್ಲ,-ಎಂದು ಹೇಳುತ ಬಂದನು. ಅವಳಿಗೆ ಆಗ ಕಡುಬು ಜ್ಞಾಪಕಕ್ಕೆ ಬರಲಿಲ್ಲ. ಅದಲ್ಲದೆ ಕಡುಬನ್ನು ಯಾರುತಾನೆ ತಿಂದು ಅರಿಯರು. ಅದೇನು ಅಂತಹ ಅಪೂರ್ವವಾದ ಭಕ್ಷ್ಯ. ಅಂತೂ ಅವಳು ಕಡುಬಿನ ಹೆಸರು ಹೇಳಲಿಲ್ಲ.

ಹೀಗೆ ಮಾತನಾಡುತ್ತ ಹೋಗುತ್ತಿರುವಷ್ಟರಲ್ಲಿಯೇ ಹಳ್ಳಿಯು ಸಿಕ್ಕಿತು. ಅಲ್ಲಿ ಪ್ರತಿದಿನವೂ ಊಟಮಾಡುವಾಗಲೆಲ್ಲಾ 'ಎಲೆ, ಅದು ಮಾಡುವುದಿಲ್ಲವೇನೆ?' ಎಂದು ಕೇಳುತ್ತಿದ್ದನು. ಅದೇನು ಮಾಡಬೇಕೋ ಅವಳಿಗೆ ತಿಳಿಯದೆ ಅವಳು "ಒಳ್ಳೆಯದು ನಾಳೆ ನಾಡಿದ್ದು," ಎಂದು ದಿನವನ್ನು ಕಳೆಯುತ್ತಿದ್ದಳು. ಒಂದುದಿನ ಇವನು, ಊಟದ ಹೊತ್ತಿಗೆ ಏಳದೆ, ಅದನ್ನು ಮಾಡಿಹಾಕಿದಲ್ಲದೆ ನಾನು ಊಟಕ್ಕೆ ಬಾರೆನು" ಎಂದು ಹಟಹಿಡಿದನು. ಅವಳು ಎಷ್ಟೆಷ್ಟು ಉಪಚಾರ ಹೇಳಿದರೂ ಕೇಳದೆ ಇದ್ದುದರಿಂದ ಏನೂ ತೋರದೆ, "ಹೀಗೆ ನೀವು ಕೋಪಮಾಡಿಕೊಂಡರೆ ನಾನೇನು ಮಾಡಲಿ?" ಎಂದಳು. ಇಷ್ಟಕ್ಕೆ ಆ ಹಳ್ಳಿಯ ಬ್ರಾಹ್ಮಣನಿಗೆ ಕೋಪಬಂದು, ಫಟೀರ್', ಎಂದು ಅವಳ ಕಪಾಳಕ್ಕೆ ಒಂದು ಏಟನ್ನು ಹಾಕಿದನು.

ಅಷ್ಟರಲ್ಲಿಯೇ ಮಗ್ಗುಲ ಮನೆಯ ಹೆಂಗಸು ನೀರಿಗೆ ಬಂದಳು. ಈಕೆಯು ಬೇಗ ಕಣ್ಣೀರನ್ನು ಒರಸಿಕೊಂಡು ನಿಂತಿರಲು, ಈಕೆಯನ್ನು ನೋಡಿ "ಇದೇನಮ್ಮ ಇದು! ಕಡುಬು ಊದಿದಹಾಗೆ ನಿಮ್ಮ ಗಲ್ಲವು ಊದಿದೆಯಲ್ಲ?" ಎಂದಳು. ಆಗ ಒಳಗಿದ್ದ ಬ್ರಾಹ್ಮಣನು ಬೇಗ ಎದ್ದುಬಂದು, 'ಅದು ಕಾಣೆ. ಅಗೋ ಅದು! ಕಡುಬು, ಕಡುಬು ಮಾಡಿಹಾಕು' ಎಂದನು. ಅದಕ್ಕೆ ಹೆಂಡತಿಯು ಮುಗುಳುನಗೆ ನಗುತ್ತಾ, "ಅಗತ್ಯವಾಗಿ ನಾಳೆ ಮಾಡಿ ಹಾಕುತ್ತೇನೆ. ಈಗ ಊಟಕ್ಕೆ ಏಳಿ" ಎನ್ನಲು, ಹಸಿದಿದ್ದ ಬ್ರಾಹ್ಮಣನು ಎದ್ದು, ಕಡುಬು ನಾಳೆ ಸಿಕ್ಕುವುದೆಂಬ ಸಂತೋಷದಿಂದ ಊಟ ಮಾಡಿದನು. ಕಡುಬಿಗೆ ದವಡೆ ಪೆಟ್ಟು ಮೂಲವಾಯಿತು.

## ೩೫. ಹುಡುಗನೂ ಗಿಣಿಯೂ.

ಒಂದು ಮನೆಯಲ್ಲಿ ಗಂಡಹೆಂಡಿರಿಬ್ಬರು ವಾಸವಾಗಿದ್ದರು. ಅವರಿಗೆ ಬಹುಕಾಲ ಮಕ್ಕಳಿರಲಿಲ್ಲ. ಆದುದರಿಂದ ಒಂದು ಮುದ್ದಾದ ಅರಗಿಣಿಯನ್ನು ಮನೆಯಲ್ಲಿ ಸಾಕುತ್ತಿದ್ದರು. ಆ ಗಿಣಿಗೆ ಮಾತನ್ನು ಕಲಿಸುವುದರಲ್ಲಿಯೇ ಆ ಗಂಡಹೆಂಡಿರು ಕಾಲವನ್ನು ಕಳೆಯುತ್ತಿದ್ದರು. ಆ ಗಿಣಿಯನ್ನು ರಾಮನೆಂದು ಕರೆಯುತ್ತಿದ್ದರು. ರಾಮ! ಎಲ್ಲಿದ್ದೀಯೆ? ಎಂದು ಕೇಳಿದೊಡನೆ ಅದು ಎಲ್ಲಿದ್ದರೂ "ನಾನು ಇಲ್ಲಿದ್ದೇನೆ" ಎಂದು ಉತ್ತರ ಕೊಡುವಂತೆ ಕಲಿಸಿದ್ದರು.

ಈ ಗಿಣಿಯೊಡನೆ ಆಡುವುದಕ್ಕೆ ನೆರೆಹೊರೆಯ ಹುಡುಗರು ಬರುತ್ತಿದ್ದರು. ಅವರಲ್ಲಿ ಒಬ್ಬ ಹುಡುಗನು ಈ ಗಿಣಿಯನ್ನು ಹೇಗಾದರೂ ಕದ್ದುಕೊಂಡು ಹೋಗಬೇಕೆಂದು ಇದ್ದನು. ಒಂದು ದಿನ ಆ ಹುಡುಗನು ಮನೆಯ ಯಜಮಾನನು ಇಲ್ಲದಿರುವ ಸಮಯವನ್ನು ನೋಡಿ ಆ ಮನೆಗೆ ಬಂದು, ಪಂಜರದಲ್ಲಿ ಇದ್ದ ಗಿಣಿಯನ್ನು ತೆಗೆದುಕೊಂಡು ಜೇಬಿನಲ್ಲಿಟ್ಟುಕೊಂಡು ಹೊರಟುಹೋಗುತ್ತಿದ್ದನು. ಅಷ್ಟರಲ್ಲೇ ಆ ಮನೆಯ ಯಜಮಾನನು ಬಂದು, ಈ ಹುಡುಗನು ಇದ್ದುದನ್ನು ನೋಡಿ, ಅವನ ಮನಸ್ಸಿಗೆ ಸಂತೋಷಪಡಿಸಬೇಕೆಂದು "ರಾಮ; ಎಲ್ಲಿದ್ದಿಯೆ" ಎಂದು ಕೂಗಿದನು. ಆ ಹುಡುಗನ ಜೇಬಿನಲ್ಲಿದ್ದ ಗಿಣಿಯು ಅಲ್ಲಿಂದಲೇ "ನಾನು ಇಲ್ಲಿದ್ದೇನೆ" ಎಂದಿತು. ಆ ಹುಡುಗನ ಮುಖವು ಕೆಟ್ಟಿತು; ಕಳ್ಳನು ಸಿಕ್ಕಿಬಿದ್ದನು.

---

## ೩೬. ಕೆಲಸದ ಹೆಂಗಸರೂ ಕೋಳಿಯೂ.

ಒಂದು ಊರಿನಲ್ಲಿ ಒಬ್ಬ ಮುದುಕಿ ಇದ್ದಳು. ಅವಳು ಅಡಿಗೆ ಕೆಲಸವನ್ನು ಮಾಡಲಿಕ್ಕೆ ಇಬ್ಬರು ಹೆಂಗಸರನ್ನು ಇಟ್ಟುಕೊಂಡಿದ್ದಳು. ಬೇಗ ಎದ್ದು ಅಡಿಗೆ ಮಾಡಲೆಂದು, ಆ ಮುದುಕಿಯು ಮೊದಲ ಕೋಳಿ ಕೂಗುತ್ತಲೂ ಅವರಿಬ್ಬರನ್ನೂ ಕೆಲಸಕ್ಕೆ ಎಬ್ಬಿಸುತ್ತಿದ್ದಳು. ಅವರಿಗೆ ಆ ಹೊತ್ತಿನಲ್ಲಿ ಬಹು ನಿದ್ರೆ. ಅವರಿಬ್ಬರೂ ಎದ್ದಲ್ಲದೆ ಮುದುಕಿಯು ಬಿಡಳು. ಗೊಣಗುಟ್ಟುತ್ತಾ ಎದ್ದು, ಆ ಇಬ್ಬರು ಹೆಂಗಸರೂ ಕೆಲಸ ಮಾಡುತ್ತಿದ್ದರು.

ಈ ಮನೆಯಲ್ಲಿರುವ ಈ ಹಾಳು ಕೋಳಿ ಕೂಗುವುದರಿಂದಲ್ಲವೆ ನಮ್ಮನ್ನು ಈ ಮುದುಕಿಯು ಬೇಗ ಎಬ್ಬಿಸುವುದು; ಈ ರಾತ್ರಿ ಅದನ್ನು ಕೊಂದು ಹಾಕಿ ನಾವು ಮಲಗಿಕೊಳ್ಳೋಣವೆಂದು, ಆ ಕೆಟ್ಟ ಹೆಂಗಸರು, ಪಾಪ! ಆ ಕೋಳಿಯನ್ನು ಕೊಂದು ಮಲಗಿಕೊಂಡರು.

ಮುದುಕಿಗೆ ಒಂದು ಹೊತ್ತಿಗೆ ಎಚ್ಚರವಾಯಿತು. ಕೋಳಿ ಕೂಗಿರಬಹುದು, ಬೆಳಗಾಗಿರಬಹುದು ಎಂದು ಆ ಮುದುಕಿ ಆ ರಾತ್ರಿ ಹನ್ನೆರಡು ಗಂಟೆಯ ಹೊತ್ತಿಗೇ ಇವರನ್ನು ಕೂಗುವುದಕ್ಕೆ ಮೊದಲುಮಾಡಿದಳು. ಅವರು ಎದ್ದು ಬೆಳಗತನಕ ನಿದ್ರೆಯೇ ಇಲ್ಲದೆ ಕೆಲಸ ಮಾಡಬೇಕಾಯಿತು.

---

## ೩೭. ಶ್ರೀರಾಮನೂ ಚಂದ್ರನೂ.

ಹುಣ್ಣಿಮೆಯ ಸಾಯಂಕಾಲ. ಸೂರ್ಯನು ಪಶ್ಚಿಮ ದಿಕ್ಕಿನಲ್ಲಿ ಆದೇ ಮುಳುಗಿದ್ದನು. ಪೂರ್ವದಿಕ್ಕಿನಲ್ಲಿ ಚಂದ್ರನು ಆಗತಾನೆ ಹುಟ್ಟುತ್ತಿದ್ದನು. ಆ ದಿಕ್ಕು ಕೆಂಪಗೆ ಥಳಥಳಿಸುತಿದ್ದಿತು. ಗಾಳಿಯು ತಣ್ಣಗೆ ಬೀಸುತಿದ್ದಿತು. ಪಕ್ಷಿಗಳು ಗೂಡುಗಳನ್ನು ಸೇರುತಿದ್ದುವು. ಮನೋಹರವಾದ ಆ ಸಂಜೆಯನ್ನೂ ಆ ಚಂದ್ರಮಂಡಲವನ್ನೂ ಶ್ರೀರಾಮನಿಗೆ ತೋರಿಸಬೇಕೆಂದು ತಾಯಿಯಾದ ಕೌಸಲ್ಯೆಯು ಮಗುವನ್ನು ಕರೆತಂದಳು. ಮೇಲಕ್ಕೆ ಎಸೆದ ಬೆಳ್ಳಿಯ ಚೆಂಡಿನಂತೆ ಅಷ್ಟರಲ್ಲಿಯೇ ಕಾಣಿಸಿಕೊಂಡ ಆ ಚಂದ್ರನನ್ನು ಶ್ರೀರಾಮನಿಗೆ ತೋರಿಸಿದಳು. ಶ್ರೀರಾಮನು ಚಂದ್ರನನ್ನು ನೋಡಿ ತನಗೆ ಆಡುವುದಕ್ಕೆ ಅದು ಬೇಕೆಂದು ಮುದ್ದಾದ ಎರಡು ಕೈಗಳನ್ನೂ ಚಂದ್ರನ ಕಡೆ ನೀಡಿ ತೋರಿಸಿದನು. ಕೌಸಲ್ಯೆಗೆ ಶ್ರೀರಾಮನ ಮನಸ್ಸು ತಿಳಿಯದೆ ಇದ್ದುದರಿಂದ, ಅವಳೂ ಚಂದ್ರನಕಡೆ ತೋರಿಸುತಿದ್ದಳು. ಆಗ ಶ್ರೀರಾಮನಿಗೆ ಕೋಪಬಂದಿತು, ಅಳುವುದಕ್ಕೆ ಮೊದಲುಮಾಡಿದನು.

"ನಿನಗೆ ಏನು ಬೇಕಪ್ಪ" ಎಂದು ಕೌಸಲ್ಯೆಯು ಎಷ್ಟೆಷ್ಟು ವಿಧವಾಗಿ ಕೇಳಿದರೂ ಶ್ರೀರಾಮನು ಚಂದ್ರನನ್ನು ತೋರಿಸುತ್ತಾ, ಅಳುವುದನ್ನು ಹೆಚ್ಚು ಮಾಡುತ್ತಿದ್ದನು. ಮಗುವು ಅಳುತಿದೆಯೆಂದು ಆ ಕೌಸಲ್ಯೆಯು ತಿಳಿದು- ಚಂದ್ರನು ಆಕಾಶದಲ್ಲಿ ಬಹು ದೂರದಲ್ಲಿರುವನು, ನಮಗೆ ಸಣ್ಣಗೆ ಕಂಡರೂ

ಬಹುಗಾತ್ರವಾಗಿರುವನು, ನಿನ್ನೊಡನೆ ಆಡುವುದಕ್ಕೆ ಅವನು ಬಾರನಪ್ಪ-ಎಂದು ಎಷ್ಟು ಸಮಾಧಾನ ಹೇಳಿದರೂ ಅವನು ಅಳುವುದನ್ನು ನಿಲ್ಲಿಸಲಿಲ್ಲ.

ಅಷ್ಟರಲ್ಲಿಯೇ ಅಲ್ಲಿದ್ದ ಹೆಂಗಸರೆಲ್ಲರೂ ಬಂದು ಸೇರಿದರು. ಶ್ರೀರಾಮನನ್ನು ಸಮಾಧಾನಿಸಲು ಯಾರಿಂದಲೂ ಆಗಲಿಲ್ಲ. ಆಗ ಒಬ್ಬೊಬ್ಬರು ಒಂದೊಂದು ವಿಧವಾಗಿ ಶ್ರೀರಾಮನ ಅಳುವಿಗೆ ಕಾರಣವನ್ನು ಹೇಳತೊಡಗಿದರು. ಒಬ್ಬಳು "ಶ್ರೀರಾಮನಿಗೆ ನಮ್ಮ ಮುದ್ದು ಕೂಸಿಗೆ ದೃಷ್ಟಿಯಾಗಿದೆ" ಯೆಂದೂ, ಇನ್ನೊಬ್ಬಳು "ಮಗುವಿಗೆ ಸಿಟ್ಟು ಬಂದಿದೆ" ಯೆಂದೂ, ಮತ್ತೊಬ್ಬಳು "ಶ್ರೀರಾಮನಿಗೆ ನಿದ್ದೆಯು ಹೊತ್ತಾಯಿತು, ನಿದ್ದೆಯಿಂದ ಹಠ ಮಾಡುತ್ತಿದ್ದಾನೆ" ಯೆಂದೂ, ಎಲ್ಲೋ ಹೊಟ್ಟೆ ನೋಯುತ್ತಿರಬಹುದೆಂದೂ, ಹೀಗೆ ಒಬ್ಬೊಬ್ಬರು ಒಂದೊಂದು ಕಾರಣವನ್ನೂ, ಅದಕ್ಕೆ ಸಮಾಧಾನವನ್ನೂ ಹೇಳುತ್ತಿದ್ದರು. ಬೇಗನೆ ಒಬ್ಬ ಮುದುಕಿಯು ಬಂದು ಶ್ರೀರಾಮನಿಗೆ ದೃಷ್ಟಿಮಂತ್ರವನ್ನು ಹಾಕಲು ಮೊದಲುಮಾಡಿದಳು. ಯಾವ ಮಂತ್ರಕ್ಕೂ ಯಾವ ಸಮಾಧಾನಕ್ಕೂ ರಾಮನ ಅಳು ನಿಲ್ಲಲಿಲ್ಲ.

ಶ್ರೀರಾಮನು ಏಕೋ ಹಟ ಹಿಡಿದು ಹಂಡಿ ಮಾಡುತ್ತಿರುವನೆಂಬುದನ್ನು ತಂದೆಯಾದ ದಶರಥನು ಕೇಳಿ ಥಟ್ಟನೆ ರಾಮನಿದ್ದಲ್ಲಿಗೆ ಬಂದನು ದಶರಥನು ಬಂದರೂ ರಾಮನಿಗೆ ಸಮಾಧಾನವುಂಟಾಗಲಿಲ್ಲ. ಆಗ ಏನು ಮಾಡುವುದಕ್ಕೂ ತೋರದೆ ದಶರಥನು ತನ್ನ ಮಂತ್ರಿಗೆ ಹೇಳಿಕಳುಹಿಸಿದನು. ದೊರೆಯ ಮಗನಾದ ಶ್ರೀರಾಮನಿಗೆ ಆಲಸ್ಯವೆಂದು ತಿಳಿದೊಡನೆಯೇ ಮಂತ್ರಿಯೂ ಬೇಗ ಬಂದು ಶ್ರೀರಾಮನು ಎಷ್ಟುಹೊತ್ತಿನಿಂದ ಅಳುತ್ತಿರುವನು, ಏಕೆ ಅಳುತ್ತಿರುವನು-ಎಂದು ಕೇಳಿ ಅಲ್ಲಿದ್ದವರಿಂದ ಎಲ್ಲವನ್ನೂ ತಿಳಿದುಕೊಂಡನು. ಆಗ ಚಂದ್ರನನ್ನು ತಂದುಕೊಡಬೇಕೆಂದು ರಾಮನು ಹಂಡಿ ಹಿಡಿದಿರುವನೆಂದು ಗೊತ್ತುಮಾಡಿ, ಮಂತ್ರಿಯು ಬೇಗನೆ ಒಂದು ಕನ್ನಡಿಯನ್ನು ತಂದು ಶ್ರೀರಾಮನ ಕೈಯಲ್ಲಿ ಕೊಟ್ಟು ಅದರಲ್ಲಿ ಚಂದ್ರನನ್ನು ತೋರಿಸಿದನು. ರಾಮನಿಗೆ ಬಹು ಸಂತೋಷವಾಯಿತು. ಆಗ ರಾಮನು ಅಳುವುದನ್ನು ಬಿಟ್ಟು ಸುಖವಾಗಿ ಆಡತೊಡಗಿದನು. ಶ್ರೀರಾಮನ ಆಟಪಾಟವನ್ನು ನೋಡಿ ಅಲ್ಲಿದ್ದವರೆಲ್ಲರಿಗೂ ಸಂತೋಷವಾಯಿತು.

## ೩೮. ಲವಕುಶರ ಕಾಳಗ.

ಲವಕುಶರು ಶ್ರೀರಾಮನ ಮಕ್ಕಳು. ಇವರು ವಾಲ್ಮೀಕಿ ಋಷಿಗಳ ಆಶ್ರಮದಲ್ಲಿ ಹುಟ್ಟಿ, ತಾಯಿಯಾದ ಸೀತಾದೇವಿಯೊಡನೆ ಬೆಳೆಯುತ್ತಿದ್ದರು. ಆಶ್ರಮದಲ್ಲಿಯೆ ಇವರು ಇದ್ದರಾದುದರಿಂದ ಶ್ರೀರಾಮನನ್ನು ನೋಡಿದುದೇ ಇಲ್ಲವು. ಅಲ್ಲಿಯ ಬ್ರಾಹ್ಮಣರ ಹುಡುಗರೊಡನೆ ಇವರು ಆಟಪಾಟಗಳ ನ್ನಾಡಿಕೊಂಡು, ಸಮಿತ್ತು, ದರ್ಭೆ ಇವುಗಳನ್ನು ತಂದುಕೊಂಡು ಇದ್ದರೂ ವಾಲ್ಮೀಕಿ ಋಷಿಗಳ ಅನುಗ್ರಹದಿಂದ ಕ್ಷತ್ರಿಯರಾದ ಲವಕುಶರಿಗೆ ಧನುರ್ವಿದ್ಯೆಯು ಚೆನ್ನಾಗಿ ಬರುತ್ತಿತ್ತು. ಒಂದಾನೊಂದುದಿನ ಆ ಆಶ್ರಮಕ್ಕೆ ಒಂದು ಕುದುರೆ ಬಂದಿತು. ಆ ಕುದುರೆಯು ಬಹು ಚೆನ್ನಾಗಿರುವುದನ್ನು ನೋಡಿ, ಋಷಿಕುಮಾರರು ಅದರ ಹತ್ತಿರಕ್ಕೆ ಹೋದರು. ಲವನೂ ಹೋದನು. ಆಗ ಆ ಕುದುರೆಯ ಹಣೆಯ ಮೇಲೆ ಭಂಗಾರದ ಪಟ್ಟಿಯಲ್ಲಿ "ಶ್ರೀರಾಮನ ಅಶ್ವವು ಇದು. ಶ್ರೀರಾಮನ ಆಳುವಿಕೆಗೆ ಒಪ್ಪದೆ, ಶ್ರೀರಾಮನೊಡನೆ ಯುದ್ಧ ಮಾಡಿ ಸೋಲಿಸಲು ಧೈರ್ಯವುಳ್ಳವರು ಇದನ್ನು ಕಟ್ಟಬಹುದು. ಅಂತಹ ಧೈರ್ಯ ವಿಲ್ಲದವರು, ಶ್ರೀರಾಮನಿಗೆ ಕಪ್ಪಕಾಣಿಕೆಗಳನ್ನು ಒಪ್ಪಿಸಿ, ಕುದುರೆಯ ಗೋಜಿಗೆ ಹೋಗದೆ, ಸುಮ್ಮನಿರುವುದು" ಎಂದು ಬರೆದಿತ್ತು, ಅದನ್ನು ಓದಿಕೊಂಡು ಲವನು, ಕುದುರೆ ಯೇನೋ ಚೆನ್ನಾಗಿದೆ, ನಾವಂತೂ ಇದನ್ನು ಕಟ್ಟಿಹಾಕೋಣ! ಯಾರು ಬರುವರೋ ನೋಡೋಣ! ಎಂದು ದರ್ಭೆಯಲ್ಲಿ ಒಂದು ಹಗ್ಗವನ್ನು ಹೊಸೆದು ಕುದುರೆಯನ್ನು ಕಟ್ಟಿದನು. ಹತ್ತಿರಿದ್ದ ಬ್ರಾಹ್ಮಣರ ಹುಡುಗರು, "ಬೇಡವಯ್ಯ! ನಮಗೀತಂಟೆ ಬೇಡವಯ್ಯ ಬಿಟ್ಟುಬಿಡು! ನಮಗಿದು ಸರಿಯಲ್ಲ!" ಎನ್ನುತ್ತಿದ್ದರೂ ಲವನು ಲಕ್ಷ್ಯಮಾಡದೆ, ಕುದುರೆಯನ್ನು ಕಟ್ಟಿಯೇ ಕಟ್ಟಿದನು.

ಅಷ್ಟರಲ್ಲಿಯೇ ಕುದುರೆಯ ರಕ್ಷಣೆಗಾಗಿ ಬರುತ್ತಿದ್ದ ಸೈನಿಕರು, ಈ ಹುಡುಗರು ಕುದುರೆಯನ್ನು ಕಟ್ಟಿದುದನ್ನು ನೋಡಿ, "ಎಲೋ! ಆ ಹಾರುವ ಹೈಕಳಿಗೆ ಎರಡು ಏಟುಗಳನ್ನು ಕೊಟ್ಟು ಕುದುರೆಯನ್ನು ಬಿಚ್ಚಿಕೊಂಡು ನಡೆಯಿರೊ" ಎಂದರು. ಒಬ್ಬನು ಕುದುರೆಯನ್ನು ಬಿಚ್ಚಲು ಹೋದನು. ಲವನು, ಅವರನ್ನು ನೋಡಿ "ದೂರ ನಿಲ್ಲಿ. ಕುದುರೆಯನ್ನು ಮುಟ್ಟೀರಿ! ನಮ್ಮ ಆಶ್ರಮದಲ್ಲಿ ಕುದುರೆ ಇದೆ" ಎಂದನು. ಅವರು ಧಿಕ್ಕರಿಸಿ

ಮುಂದೆರಡು ಹಜ್ಜೆ ಯಿಡಲು, ಲವನು ಅಲ್ಲಿ ಬಿದ್ದಿದ್ದ ದರ್ಭೆಯನ್ನುಮಂತ್ರಿಸಿ, ಅವರಿಬ್ಬರ ಕಡೆಗೂ ಎಸೆದನು. ಒಬ್ಬನ ಕೈಗಳೂ ಇನ್ನೊಬ್ಬನ ಕಾಲುಗಳೂ ಕತ್ತರಿಸಿ ಹೋದುವು. ಈ ವರ್ತಮಾನವು, ಲಕ್ಷ್ಮಣನ ಮಗನಾದ ಚಂದ್ರಕೇತುವಿಗೆ ತಿಳಿಯಿತು. ಅವನು ಆಶ್ಚರ್ಯಪಟ್ಟು ಬಂದು, ಲವನನ್ನು ನೋಡಿ, ಏನೋ ಒಂದು ವಿಧವಾದ ಪ್ರೀತಿಯುಂಟಾಗಲು, ಇವನು ಮಾಡಿದ ತಪ್ಪನ್ನು ಕ್ಷಮಿಸಿ, 'ಮಗು! ನೀನು ಯಾರು? ಕುದುರೆಯನ್ನು ಏಕೆ ಕಟ್ಟಿದೆ? ನಿನಗೆ ರಾಜರ ಕುದುರೆಯನ್ನು ಕಟ್ಟಿಕೊಂಡು ಏನು ಪ್ರಯೋಜನ?' ಎಂದನು.

ಅದಕ್ಕೆ ಲವನು 'ನಾನು ಯಾರಾದರೇನಪ್ಪ! ನಮ್ಮ ಆಶ್ರಮಕ್ಕೆ ಕುದುರೆ ಬಂದಿತು, ನಾನು ಕಟ್ಟಿದೆನು. ನನ್ನ ಅಪ್ಪಣೆ ಇಲ್ಲದೆ ಅವರು ಬಿಚ್ಚಲು ಬಂದರು, ಅವರನ್ನು ಹೊಡೆದೆನು. ನಾನು ಕುದುರೆಯನ್ನು ಕೊಡುವನಲ್ಲ. ಹೋಗು' ಎಂದನು. ಆಗ ಚಂದ್ರಕೇತುವು ಎಷ್ಟು ಸಮಾಧಾನ ಹೇಳಿದರೂ ಲವನು ಕೇಳದೆ ಹೋದುದರಿಂದ, ಬಾಣದಿಂದ ಹೊಡೆಯಲು ಆರಂಭಿಸಿದನು. ಲವನೂ ಮಂತ್ರ ಶಕ್ತಿಯಿಂದ ಅವನ ಬಾಣಗಳನ್ನೆಲ್ಲಾ ದರ್ಭೆಯಿಂದ ಕತ್ತರಿಸಿ, ಚಂದ್ರಕೇತುವನ್ನೂ ಅವನ ಸೈನ್ಯವನ್ನೂ ಹೊಡೆದಟ್ಟಿದನು.

ಚಂದ್ರಕೇತುವು ಸೋತುಹೋದನೆಂದು ಶತ್ರುಘ್ನಾದಿಗಳು ಬಂದರು. ಅವರೆಲ್ಲರನ್ನೂ ಹೊಡೆದಟ್ಟಿದನು. ಆಗ ಅವರುಗಳಿಗೆ ಬಹು ಕೋಪ ಬಂದು ಲವನಿಗೆ ಮೂರ್ಛೆ ಬರುವಂತೆ ಹೊಡೆದು, ಲವನನ್ನು ಎತ್ತಿಕೊಂಡು ಕುದುರೆಯನ್ನು ಬಿಚ್ಚಿಕೊಂಡು ಹೋಗುತ್ತಿದ್ದರು. ಅಷ್ಟರಲ್ಲಿಯೇ, ಬೇರೆ ಎಲ್ಲಿಗೋ ಹೋಗಿದ್ದ ಕುಶನು ಬಂದು 'ಎಲೈ ಶೂರರಾ, ನಿಲ್ಲಿ ನಿಲ್ಲಿ. ನನ್ನ ಒಡಹುಟ್ಟಿದವನನ್ನು ನೀವು ಎತ್ತಿಕೊಂಡು ಹೋಗುವಾಗ ನಿಮ್ಮನ್ನು ಕತ್ತರಿಸಿ ಹಾಕುವೆನು' ಎಂದು, ಬಹು ತೀಕ್ಷ್ಣವಾದ ಬಾಣಗಳನ್ನು ಬಿಟ್ಟು, ಅವರನ್ನು ತಡೆದು, ಲವನನ್ನೂ ಕುದುರೆಯನ್ನೂ ಬಿಡಿಸಿಕೊಂಡು, ಲವನನ್ನು ಎಚ್ಚರಿಸಿ, ಅವನೊಡನೆ ಕೂಡಿ ಮತ್ತೆ ಯುದ್ಧಕ್ಕೆ ನಿಂತನು. ಶತ್ರುಘ್ನಾದಿಗಳಿಗೆ ಮಕ್ಕಳನ್ನು ನೋಡಿ, ಹೋಗಿ ಮುದ್ದಿಡಬೇಕೆಂಬಷ್ಟು ಮನಸ್ಸುಂಟಾಯಿತು. ಆದರೆ ಮಕ್ಕಳು ಯುದ್ಧ ಮಾಡುವುದರಲ್ಲಿ ಸಿದ್ಧರಾಗಿದ್ದರೇ ಹೊರತು, ಸ್ನೇಹವನ್ನು ಮಾಡುವವರಾಗಿರಲಿಲ್ಲ. ಮತ್ತೆ ಯುದ್ಧವಾಯಿತು. ಆಗ ಶ್ರೀರಾಮನ ಸೈನ್ಯದವರೆಲ್ಲ ಸೋತುಹೋದರು. ಲವ

ಕುಶರು ಕುದುರೆ, ವಸ್ತ್ರಾಭರಣಗಳೊಡನೆ ತಾಯಿಯಾದ ಸೀತಾದೇವಿಯಲ್ಲಿಗೆ ಬಂದು ಬಹು ಸಂಭ್ರಮದಿಂದ ತಾವು ತಂದುದನ್ನೆಲ್ಲಾ ಒಪ್ಪಿಸಿ,ನಡೆದುದನ್ನೆಲ್ಲಾ ಹೇಳಿದರು. ಮಕ್ಕಳನ್ನು ನೋಡಿ ಸಂತೋಷವುಂಟಾದರೂ ಅವಳು ಶ್ರೀರಾಮನನ್ನು ನೆನಸಿಕೊಂಡು ಅಳಲು ಮೊದಲುಮಾಡಿದಳು. ಮಕ್ಕಳು ಕಾರಣ ತಿಳಿಯದೆ ಮಂಕಾಗಿ ನಿಂತರು. ಅಷ್ಟರಲ್ಲಿ ವಾಲ್ಮೀಕಿ ಋಷಿಗಳು ಬಂದು, ಎಲ್ಲರನ್ನೂ ಸಮಾಧಾನಪಡಿಸಿ, ಶ್ರೀರಾಮ ಸೀತಾದೇವಿಯರನ್ನು ಒಟ್ಟುಗೂಡಿಸಿ, ಲವಕುಶರನ್ನು ಒಪ್ಪಿಸಿ, ಅವರಿಗೆ ತಾಯಿತಂದೆಗಳಾದ ಸೀತಾರಾಮರನ್ನು ತೋರಿಸಿ, ಸುಖಿಗಳನ್ನಾಗಿ ಮಾಡಿದರು.

---

## ೩೯. ಪಿಂಡಾರಿಯವರು.

ಆಹಾ! ಈಗಿನಕಾಲ ಎಷ್ಟು ಸುಖವಾಗಿದೆಯೆಂದು ಹೇಳಬೇಕು. ಹಿಂದೆ ನಮ್ಮ ಜನರು ಪಡುತಿದ್ದ ಕಷ್ಟವನ್ನು ನೆನಸಿಕೊಂಡರೆ ಈಗಲೂ ನಮ್ಮ ಮೈನಡುಕ ಹಿಡಿವುದು. ಅದೇನೆಂಬಿರೋ? ಹೇಳುವೆನು ಕೇಳಿ. ಈಗ ನಾವು ಬೇಕಾದಷ್ಟು ಹಣವನ್ನು ಕೂಡಿಹಾಕಬಹುದು. ಬೇಕಾದ ಒಡವೆಗಳನ್ನು ಇಟ್ಟುಕೊಂಡು ತಿರುಗಾಡಬಹುದು. ಬೇಕಾದ ಪೈರನ್ನು ಮಾಡಬಹುದು. ಬೇಕಾದಷ್ಟು ಬೆಳೆಯನ್ನು ಬೆಳೆಯಬಹುದು. ಮನಸ್ಸು ಬಂದೆಡೆಗೆ ಹೋಗಬಹುದು. ನಮ್ಮಲ್ಲಿ ಎಷ್ಟು ಹಣಕಾಸು ಇದ್ದರೂ, ನಮ್ಮ ಗದ್ದೆಯಲ್ಲಿ ಎಷ್ಟು ಚೆನ್ನಾದ ಬೆಳೆ ಬೆಳೆದಿದ್ದರೂ, ನಮ್ಮ ತೋಟದಲ್ಲಿ ಎಂತಹ ಹಣ್ಣುಗಳು ಬಿಟ್ಟಿದ್ದರೂ, ರಾತ್ರಿಯವೇಳೆ ನಾವು ಒಂದೇ ಮನಸ್ಸಿನಲ್ಲಿ ಮಲಗಿಕೊಂಡು, ಸುಖವಾಗಿ ನಿದ್ರೆ ಮಾಡಬಹುದು. ಧರ್ಮರಾಜ್ಯವೆಂದರೆ ಇದೇ ಧರ್ಮರಾಜ್ಯವೆಂದು ಹೇಳಬಹುದು.

ಹಿಂದಿನ ಕಾಲದಲ್ಲಿ ಹೀಗೆ ಸ್ವಸ್ಥಚಿತ್ತರಾಗಿಲು ಅವಕಾಶವುಂಟೆ? ಈಹೊತ್ತೇನು? ಮಗ್ಗುಲ ದುರ್ಗದ ಪಾಳೆಯಗಾರ ಬಂದು ಪೈರನ್ನು ಹಾಳುಮಾಡಿದ; ನಾಳೇ ಏನು? ತುರುಕರ ದಂಡು ಬಂದು, ಕೊಂದವರನ್ನು ಕೊಂದು, ಸಿಕ್ಕಿದುದನ್ನೆಲ್ಲಾ ಎತ್ತಿಕೊಂಡು ಹೋಯಿತು. ಮತ್ತೇನು! ಓಹೊ! ಮರಾಟಿಯವರು ಬರುತಿದ್ದಾರೆ! ಪಿಂಡಾರಿಯವರು ಬರುತಿದ್ದಾರೆ! ಜಾಗ್ರತೆ! ಜಾಗ್ರತೆ! ಅಗೊ! ಮಗ್ಗುಲ ಹಳ್ಳಿಗೆ ಬೆಂಕಿಯನ್ನಿಕ್ಕಿದರು.

ಕಿವಿಗೊಟ್ಟುಕೇಳಿ ! ಹೆಂಗಸರು ಮಕ್ಕಳು ಕಿರಿಚಿಕೊಳ್ಳುವುದು ಇಲ್ಲಿಗೆ ಕೇಳುತ್ತಿದೆ! ರಾಮ ರಾಮ !ಅಲ್ಲಿ ನೋಡಿ. ಹೊಗೆ ! ಓಹೊ ! ಉರಿ ಇಲ್ಲಿಗೆ ಕಾಣುತ್ತಿದೆಯಲ್ಲ ! ಶಿವ ! ಶಿವ! ಇಲ್ಲಿಗೂ ಬರುವರಲ್ಲ. ನಾವೇನು ಮಾಡೋಣ ! ಮುಂದೇನು ಗತಿ ! ಆ ಹಾಳು ಪಿಂಡಾರಿಯವರು ! ಅವರಿಗೆ ದಿಕ್ಕುದಿವಾಳಿಯಾರೂ ಇಲ್ಲವಲ್ಲ ! ಅವರಿಗೆ ದೇಶ, ಮನೆ, ಭೂಮಿ, ಕಾಣಿ ಎಂಬುದೇ ಇಲ್ಲವಲ್ಲ ! ಅವರಿಗೆ ಹೆಂಡಿರು ಮಕ್ಕಳು ಇದ್ದಾರೆಯೊ ಇಲ್ಲವೊ ಅರಿಯೆವಲ್ಲ ! ಅವರಿಗೆ ಕರುಣವೆಂಬುದೇ ಇಲ್ಲವಲ್ಲ ! ಆಗೋ ಕೇಳಿ, ಪಟ, ಪಟ, ಕುದುರೆಯ ಶಬ್ದ ! ಒಂದು ದಿನಕ್ಕೆ ಎಷ್ಟು ಹಳ್ಳಿಗಳನ್ನು ಸುಟ್ಟರೆ ಇವರಿಗೆ ತೃಪ್ತಿಯೋ ಕಾಣೆವಲ್ಲ ! ಇನ್ನೇನು ಬಂದೇ ಬಂದರು ! ನಾವೇನು ಕೊಡೋಣ! ನಾವೆಲ್ಲಿಗೆ ಹೋಗೋಣ! ನಾವೆಲ್ಲಿ ಅವಿತುಕೊಳ್ಳೋಣ! ನಾವೆ ನಮ್ಮ ಊರಿಗೆ ಬೆಂಕಿಹಾಕಿಬಿಟ್ಟು, ಅವರಿಗೆ ನಮ್ಮ ಹೆಂಗಸರು ಮಕ್ಕಳು, ನಮ್ಮ ಹಣ, ಸಿಕ್ಕದಹಾಗೆ ಮಾಡಿಬಿಡೋಣವೇ ? ಎಂಬೀ ಭಯವು ಯಾವಾಗಲೂ ಇದ್ದೇ ಇರುತಿದ್ದಿತು. ಮರಾಟೆಯವರೂ, ಪಿಂಡಾರೆಯವರೂ ದಿನಕ್ಕೆ ನಲವತ್ತು ಐವತ್ತು ಮೈಲಿಗಳದೂರವಾದರೂ ಸವಾರಿಮಾಡಿಕೊಂಡು ಹೋಗುಹೋಗುತ ಕೊಳ್ಳೆಹೊಡೆದು, ಹಳ್ಳಿಗಳಿಗೆ ಬೆಂಕಿಹಚ್ಚಿ, ಸಿಕ್ಕಿದುದನ್ನು ಎತ್ತಿಕೊಂಡುಹೋಗುತಿದ್ದರು. ಇವರ ಹಾವಳಿಯು ಈಚೀಚೆಗೆ, ಎಂದರೆ ಅರವತ್ತು, ಎಪ್ಪತ್ತು ವರ್ಷಗಳಿಂದ ತಪ್ಪಿತು. ಇಂತಹ ಭಯವನ್ನು ತಪ್ಪಿಸಿ, ಜನರಿಗೆ ಸುಖವನ್ನುಂಟುಮಾಡಿದ ಇಂಗ್ಲಿಷರನ್ನು ಈವಿಷಯದಲ್ಲಿ ಎಷ್ಟು ಕೊಂಡಾಡಿದರೂ ಸ್ವಲ್ಪವೆ.

---

## ೪೦. ವಿನಾಯಕನ ಕಥೆ.

ವಿನಾಯಕನು ಪಾರ್ವತೀದೇವಿಯ ಮಗನು. ಒಂದುದಿನ ಪಾರ್ವತಿದೇವಿಯು ನೀರು ಎರೆದುಕೊಳ್ಳಲು ಹೋಗುವಾಗ, ಬಾಗಿಲನ್ನು ಕಾಯಲು, ಮಣ್ಣಿನಿಂದ ಒಂದು ಬೊಂಬೆಯನ್ನು ಮಾಡಿ, ಅದಕ್ಕೆ ಜೀವಕಳೆಯನ್ನು ತುಂಬಿ–ಮಗು, ನಾನು ನೀರೆರೆದುಕೊಳ್ಳಲು ಹೋಗುತ್ತೇನೆ. ನೀನು ಇಲ್ಲಿಯೇ ಇದ್ದು ಯಾರು ಬಂದರೂ ಒಳಕ್ಕೆ ಬಿಡದಂತೆ ಕಾದಿರು–ಎಂದು ಒಳಕ್ಕೆ ಹೋದಳು.

ಸ್ವಲ್ಪಹೊತ್ತಾದಮೇಲೆ ಪಾರ್ವತೀಪತಿಯಾದ ಈಶ್ವರನು ಬಂದನು.
ಬಾಗಿಲಲ್ಲಿ ಇದ್ದ ಆ ಮಣ್ಣಿನ ಹುಡುಗನು, ' ಒಳಕ್ಕೆ ಹೋಗಕೂಡದೆಂದು
ತಡೆದನು, ಈಶ್ವರನಿಗೆ ಕೋಪ ಬಂದು ಅವನ ತಲೆಯನ್ನು ಕತ್ತರಿಸಿ, ಒಳ
ಕ್ಕೆ ನುಗ್ಗಿದನು. ಅಷ್ಟರಲ್ಲಿ ನೀರೆರೆದುಕೊಂಡು ಹೊರಕ್ಕೆ ಬರುತಿದ್ದ ಪಾರ್ವ
ತಿಯು, ವಿನೋದಕ್ಕೆ, ''ನಿಮ್ಮನ್ನಾರೂ ತಡೆಯಲಿಲ್ಲವೆ ? ನೀವು ಒಳಕ್ಕೆ ಹೇಗೆ
ಬಂದಿರಿ ? ' ಎಂದು ಈಶ್ವರನನ್ನು ಕೇಳಿದಳು. ಈಶ್ವರನು ಅದಕ್ಕೆ 'ಮಣ್ಣಿನ
ಬೊಂಬೆಯೊಂದು ತಡೆಯಿತು. ಅದರ ಕತ್ತನ್ನು ಮುರಿದು ಒಳಕ್ಕೆ ಬಂದೆನು'
ಎಂದನು ಪಾರ್ವತಿಯು, ಅಯ್ಯೋ ! ಎಂದು ಗಟ್ಟಿಯಾಗಿ ಅಳುವುದಕ್ಕೆ
ಆರಂಭಿಸಿದಳು. ಈಶ್ವರನು ಎಷ್ಟೆಷ್ಟು ಸಮಾಧಾನ ಹೇಳಿದರೂ ಕೇಳಳು.
ಆಗ ಈಶ್ವರನು ' ನೀನು ಅಷ್ಟೇಕೆ ಅಳುತ್ತೀಯೆ ? ನಾನು ಅವನನ್ನು ಬದುಕಿ
ಸಿಕೊಡುವೆನು ' ಎಂದು ಸಮದಾಯಿಸಿ, ತನ್ನ ಭಟರಿಗೆ, ' ಈಗ ಉತ್ತರ
ದಿಕ್ಕಿಗೆ ತಲೆಯನ್ನು ಇಟ್ಟು ಯಾರು ಮಲಗಿರುತ್ತಾರೋ ಅವರ ತಲೆಯನ್ನು
ಕಡಿದುಕೊಂಡು ಬನ್ನಿ ' ಎಂದು ಹೇಳಿ ಕಳುಹಿಸಿದನು.

ಅವರು ಎಲ್ಲೆಲ್ಲಿ ಹುಡುಕಿದರೂ ಯಾರೂ ಉತ್ತರ ದಿಕ್ಕಿಗೆ ತಲೆಯ
ಯನ್ನಿಟ್ಟು ಮಲಗಿರಲಿಲ್ಲ. ಒಂದು ದೊಡ್ಡ ಅರಣ್ಯದಲ್ಲಿ ಎಲ್ಲಿಯೋ ಒಂದು
ಆನೆ ಮಾತ್ರ ಉತ್ತರಕ್ಕೆ ತಲೆಯನ್ನಿಟ್ಟು ಮಲಗಿದ್ದಿತು. ಆಗ ಅವರು ಅದರ
ತಲೆಯನ್ನು ಕತ್ತರಿಸಿಕೊಂಡು ಬಂದು ಈಶ್ವರನಿಗೆ ಒಪ್ಪಿಸಿದರು. ಪರಮೇ
ಶ್ವರನು ಅದನ್ನೇ ವಿನಾಯಕನ ಮುಂಡದ ಮೇಲೆ ಇಟ್ಟು ಮತ್ತೆ ಜೀವಕಳೆ
ತುಂಬಿ, ಆಗ ಆ ವಿನಾಯಕನಿಗೆ ಬೇಕಾದ ವರಗಳನ್ನು ಕೊಟ್ಟನು. ಯಾ
ರೇ ಆಗಲಿ, ಯಾವ ಕೆಲಸವನ್ನು ಆರಂಭಿಸುವಾಗ ನಿನ್ನನ್ನು ಪೂಜಿಸದೆ
ಆರಂಭಿಸುವರೋ ಅವರ ಕಾರ್ಯವು ನೆರವೇರದಿರಲಿ, ಎಂದು ಹೇಳಿದನು.
ತನ್ನ ಮಾತು ನಿಶ್ಚಯವಾಗಲು ತಾನೇ ತ್ರಿಪುರರನ್ನು ಕೊಲ್ಲುವ ಕಾಲದಲ್ಲಿ
ವಿನಾಯಕನನ್ನು ಪೂಜಿಸಿದನು. ಶ್ರೀರಾಮನು ಸೀತೆಯನ್ನು ಹುಡುಕು
ವಾಗ, ವಿನಾಯಕನನ್ನು ಪೂಜೆ ಮಾಡಿದನು. ಈ ವಿನಾಯಕನನ್ನು
ಗಣಪತಿಯೆಂದೂ ವಿಘ್ನೇಶ್ವರನೆಂದೂ ಕರೆವರು. ವಿದ್ಯೆಯು ನಿರ್ವಿಘ್ನವಾಗಿ
ನಡೆವುದಕ್ಕೆ ಇವನ ಅನುಗ್ರಹವು ಬೇಕೆಂದು ವಿದ್ಯೆಯನ್ನು ಕಲಿಯಬೇಕೆಂ
ಬ ಅಪೇಕ್ಷೆಯುಳ್ಳವರೆಲ್ಲರೂ ಈಗಲೂ ಪೂಜಿಸುವರು. ಈ ವಿನಾಯಕ
ನನ್ನು ಭಾದ್ರಪದ ಶುದ್ಧ ಚತುರ್ಥಿಯದಿನ ಎಲ್ಲರೂ ಪೂಜಿಸುವರು. ಒಂದು

ಚೌತಿಯಲ್ಲಿ ವಿನಾಯಕನು, ಬೇಕಾದಷ್ಟು ಕಡುಬುಗಳನ್ನು ತಿಂದು (ವಿನಾಯಕನಿಗೆ ಕಾಯಿಕಡುಬಿನಲ್ಲಿ ತುಂಬ ಇಷ್ಟ), ಅವನ ವಾಹನವಾದ ಇಲಿಯಮೇಲೆ ಕುಳಿತು ಬರುವಾಗ, ಇಲಿಯು ಒಂದು ಹಾವನ್ನು ನೋಡಿ ಬೆದರಿ ಓಡಿತಂತೆ, ಹೊಟ್ಟೆಯ ಭಾರದಿಂದ ವಿನಾಯಕನು ಮುಗ್ಗರಿಸಿದನಂತೆ, ಆಗ ಹೊಟ್ಟೆಯು ಒಡೆಯಲು ಹತ್ತಿರ ಹೋಗುತಿದ್ದ ಹಾವನ್ನು ಬಿಗಿದು ಹೊಟ್ಟೆಗೆ ಕಟ್ಟಿದನಂತೆ. ಇದನ್ನು ನೋಡಿ ಚಂದ್ರನು ನಕ್ಕನಂತೆ. ಆಗ ಚಂದ್ರನಮೇಲೆ ಕೋಪಬಂದು, ವಿನಾಯಕನು ಚಂದ್ರನಿಗೆ ಶಾಪಕೊಟ್ಟನಂತೆ. ಶಾಪದಿಂದ ಕೂಡಿದ ಆ ಚಂದ್ರನನ್ನು ಭಾದ್ರಪದ ಶುದ್ಧ ಚೌತಿಯಂದು ಯಾರು ನೋಡುತ್ತಾರೋ ಅವರಮೇಲೆ ಇಲ್ಲದ ಕಳ್ಳತನವೇ ಮುಂತಾದ ಅಪವಾದ ಬರುವುದೆಂದು ಹೇಳುತ್ತಾರೆ.

---

## ೪೧. ಮರಗಳು ರಾಜನನ್ನು ಗೊತ್ತು ಮಾಡಿಕೊಂಡುದು.

ಒಂದಾನೊಂದು ಕಾಲದಲ್ಲಿ ಮರಗಳೆಲ್ಲವೂ ಒಟ್ಟಾಗಿ ಸೇರಿ ತಮ್ಮಲ್ಲಿ ಒಂದಕ್ಕೆ ದೊರೆತನವನ್ನು ಕೊಡಬೇಕೆಂದು ಗೊತ್ತುಮಾಡಿಕೊಂಡುವು. ಆಗ ಅವುಗಳು ತಮ್ಮಲ್ಲೆಲ್ಲಾ ದೊಡ್ಡದಾಗಿದ್ದ ಅರಳಿಯ ಮರಕ್ಕೆ ನಮಸ್ಕಾರ ಮಾಡಿ,-ಅರಳಿಯ ಮರವೇ ನೀನು ನಮಗೆಲ್ಲಾ ರಾಜನಾಗಿರುವೆಯಾ, ಎಂದು ಕೇಳಿದುವು.

ಅದಕ್ಕೆ ಅರಳಿಯ ಮರವು ಹೇಳಿದುದೇನೆಂದರೆ, ನಾನು ಎಂದರೇನು! ನಿಮಗೆ ರಾಜನಾಗಿರುವದೆಂದರೇನು? ನನ್ನ ಬುಡ ಮೊದಲ್ಗೊಂಡು ಕೊನೆಯವರೆಗೂ ದೇವತೆಗಳು ವಾಸವಾಗಿರುವರೆಂದು ಜನರು ತಿಳಿದು, ನನಗೆ ಮುಂಜಿ ಮದುವೆ ಮಾಡುವರು. ನನ್ನನ್ನು ಕಡಿದು ಹಾಕುವುದು ಪಾಪವೆಂದು ತಿಳಿದಿರುವರು. ತಮಗೆ ಬೇಕಾದುದನ್ನು ಕೊಡುವೆನೆಂದು ಜನರು ನನಗೆ ಪ್ರದಕ್ಷಿಣೆ ನಮಸ್ಕಾರ ಮಾಡುವರು; ನನ್ನ ಬುಡದ ಸುತ್ತಲೂ ನನ್ನ ಪಾದಸೇವೆಯನ್ನು ಮಾಡಿಕೊಂಡು ಬಹುಮಂದಿ ನಾಗರಾಜರು ಹಗಲೂ ರಾತ್ರಿಯೂ ನಿಂತಿರುವರು. ಇಂತಹ ಗೌರವವನ್ನು ಬಿಟ್ಟು ಜಡರಾದ ನಿಮಗೆ ರಾಜನಾದರೆ ನನಗೆ ಬರುವುದೇನು? ನಾನು ಆಗಲಾರೆ, ಇನ್ನಾರನ್ನಾದರೂ ನೋಡಿಕೊಳ್ಳಿ ಎಂದಿತು.

ಆಗ ಮರಗಳೆಲ್ಲವೂ ಆಲದ ಮರವನ್ನು ನೋಡಿ- ಆಲದಮರವೇ ? ಆಲದಮರವೇ ? ನಮ್ಮೆಲ್ಲರಿಗೂ ನೀನು ರಾಜನಾಗುವೆಯಾ ? ಎಂದು ಕೇಳಿದುವು. ಅದಕ್ಕೆ ಆಲದಮರವು ಚೆನ್ನಾಯಿತು. ನೀವು ಪುರಾಣಗಳನ್ನು ಕೇಳಲಿಲ್ಲವೆ ? ಲೋಕಕ್ಕೆಲ್ಲಾ ಒಡೆಯನಾದ ಆ ಕೃಷ್ಣದೇವರು ಕ್ಷೀರಸಮುದ್ರದಲ್ಲಿ ಮುಳುಗಿಹೋಗದೆ ತೇಲಾಡುತ್ತಿರುವುದು ನನ್ನ ಸಹಾಯದಿಂದಲ್ಲವೆ ? ನನ್ನ ಮೇಲಲ್ಲವೇ ಆ ಶ್ರೀ ಕೃಷ್ಣನು ಮಲಗಿರುವುದು ; ಎಲ್ಲರಿಗಿಂತಲೂ ದೊಡ್ಡವನಾದ ಆ ದೇವರೇ ನನ್ನ ಆಶ್ರಯದಲ್ಲಿರುವಾಗ ನಿಮ್ಮನ್ನು ಕಟ್ಟಿಕೊಂಡು ನನಗೇನು ಕೆಲಸ ? ನನಗೆ ಅವಶ್ಯವಿಲ್ಲ-ಎಂದಿತು.

ಬಳಿಕ ಅವು ಅಲ್ಲಿ ಕೋಮಲವಾಗಿ ಬೆಳದಿದ್ದ ಮಾವಿನಮರವನ್ನು ನೋಡಿ, ಮಾವಿನಮರವೆ ! ನಿನ್ನ ಕೋಮಲವಾದ ಎಲೆಯೂ, ಮಧುರವಾದ ಹಣ್ಣೂ ನಮ್ಮನ್ನು ಬೆರಗುಮಾಡಿರುವುವು. ನಮ್ಮೊಡೆಯನಾಗುವುದಕ್ಕೆ ನೀನಲ್ಲದೆ ಇನ್ನಾರುತಾನೆ ಚೆನ್ನಾಗಿರುವರು ; ಬಹುಕಾಲ ನಮಗೆ ನೀನು ದೊರೆಯಾಗಿದ್ದುಕೊಂಡು ಸುಖವಾಗಿ ಕಾಪಾಡಬೇಕು ಎಂದುವು. ಆಗ ಮಾವಿನಮರವು 'ಎಲೈ ಜಡರೆ! ಎಂತಹ ಎಂತಹ ಕವಿಗಳ ಹೊಗಳುವಿಕೆಗೂ ನಾನು ಬೆರಗಾಗದಿದ್ದವನು ನಿಮ್ಮಸ್ತೋತ್ರಕ್ಕೆ ಬೆರಗಾಗುವೆನೆ? ನಾನು ಸ್ವಲ್ಪ ನಕ್ಕರೆ ಸಾಕು, ನನ್ನ ಸೊಬಗನ್ನು ಬಣ್ಣಿಸುವುದಕ್ಕೆ ಕವಿಗಳನ್ನು ಕರೆಯಲು ಕೋಗಿಲೆಗಳೇ ಭಟರಾಗಿ ಹೊರಡುವುವು, ನಿಮ್ಮಿಂದ ನನಗೇನಾಗಬೇಕಾಗಿದೆ ? ಇನ್ನಾರನ್ನಾದರೂ ಕೇಳಿಕೊಳ್ಳಿಹೋಗಿ, ಎಂದಿತು.

ಆಗ ಅಲ್ಲಿಯೇ ಇದ್ದ ತೇಗಿನ ಮರವನ್ನು ನೋಡಿ,— ನಮ್ಮೆಲ್ಲರಿಗಿಂತಲೂ ಗಟ್ಟಿಯೆಂದು ಹೆಸರುಗೊಂಡಿರುವ ತೇಗವೇ ! ನೀನು ನಮ್ಮೊಡೆಯನಾಗಿರಬೇಕು, ಎಂದುವು. ಆಗ ತೇಗವು-ಅಯ್ಯೋ ? ನಾನೇನು ಮಾಡೇನು ! ನನ್ನನ್ನೇ ಜನರು ಉಳಿಬಾಳಿಸುವಂತಿಲ್ಲ. ಹಿಂದೆ ಮನೆ ಮಠವನ್ನು ಕಟ್ಟುವುದಕ್ಕೆ ಮಾತ್ರ ನನ್ನನ್ನು ಉಪಯೋಗಿಸುತ್ತಿದ್ದರು. ಈಗ ಕುರ್ಚಿ, ಮೇಜು, ಬಂಡಿ ಇವೆಲ್ಲವನ್ನೂ ಮಾಡುವುದಕ್ಕೆ ನನ್ನನ್ನೇ ಕಡಿದು ಬಿಸಲಲ್ಲಿ ಒಣಗಿಸಿ, ಮಳೆಯಲ್ಲಿ ನೆನಸಿ, ಕೆತ್ತಿ, ಕೊಯಿದು, ಕೊಲ್ಲುತ್ತಿರುವರು. ನನ್ನ ಶಕ್ತಿಯೇ ನನಗೆ ಮೃತ್ಯುವಾಗಿದೆ. ಹಡಗುಗಳನ್ನು ಕಟ್ಟುವುದಕ್ಕೆ ನನ್ನ ಸಮಾನರಿಲ್ಲವೆಂದು ತಿಳದು ನನ್ನನ್ನು ದೇಶ ದೇಶಾಂತರಕ್ಕೆ

ಓಡಾಡಿಸುತ್ತಿರುವರು. ಹೀಗಿರುವಾಗ ನಾನು ನಿಮಗೆ ಏನು ಸಹಾಯ ಮಾಡೇನು ! ಇನ್ನಾರನ್ನಾದರೂ ಕೇಳಿಕೊಳ್ಳಿ-ಎಂದಿತು.

ಅಲ್ಲಿದ್ದ ಮರಗಳಲ್ಲೆಲ್ಲಾ ಉದ್ದವಾದ ತೆಂಗಿನಮರವನ್ನು ನೋಡಿ, ನೀನು ನಮಗೆ ದೊರೆಯಾಗಿ ಇರೆಂದು ಕೇಳಲು, 'ಎಲೈ ಸ್ನೇಹಿತರಿರಾ ; ನಾನು ಎಲ್ಲರಿಗಿಂತಲೂ ದೊಡ್ಡವನೆಂದು ತಿಳಿದು, ನೀವು ನನ್ನನ್ನು ದೊರೆಯಾಗಿರೆಂದು ಕೇಳಿದುದು ನನಗೆ ಬಹಳ ಸಂತೋಷ. ಆದರೆ ನಾನು ಸಾಲಗಾರನೆಂಬುದು ನಿಮಗೆ ತಿಳಿಯದೆಂದು ಕಾಣುತ್ತದೆ. ನಾನು ಚಿಕ್ಕವನಾಗಿದ್ದಾಗ ಜನರು ನನಗೆ ನೀರನ್ನು ಕೊಟ್ಟು ಸಾಕಿದರು. ಅವರು ಮಾಡಿದ ಉಪಕಾರವನ್ನು ನನ್ನ ತಲೆಯಮೇಲೆ ಹೊತ್ತಿರುವೆನು. ಈಗೀಗ ಅವರು ಕೊಟ್ಟ ಸಾಲವನ್ನು ಪ್ರತಿವರ್ಷದಲ್ಲೂ ನಾನಾಬಗೆಯಾಗಿ ತೀರಿಸುತ್ತಿರುವೆನು. ಜೀತಗಾರನಂತೆ ನಾನೇ ದುಡಿಯುತ್ತಿರುವಾಗ ನನಗೆ ದೊರೆತನವೆಂತಹುದು. ನನ್ನಂತಿರುವ ಸಾಲಗಾರರು ದೊರೆತನಕ್ಕೆ ಬಂದರೆ ನಿಮಗೆ ಬಹುಕೇಡು ಉಂಟಾದೀತು. ಆದುದರಿಂದ ನೀವು ಚನ್ನಾಗಿ ಯೋಚಿಸಿ ತಕ್ಕವರಿಗೆ ದೊರೆತನವನ್ನು ಕೊಡಿ, ಎಂದು ತೆಂಗಿನಮರವು ಅವುಗಳಿಗೆ ವಿವೇಕವನ್ನು ಹೇಳಿತು.

ಆಗ ಮರಗಳೆಲ್ಲವೂ ಇನ್ನು ಯಾರನ್ನು ಕೇಳಬೇಕೆಂದು ಯೋಚಿಸುತ ಇದ್ದಾಗ ಗುಂಪಾಗಿ ಬೆಳದಿದ್ದ ಬಿದಿರ ಮೆಳೆಯನ್ನು ನೋಡಿ, 'ನೀನು ವಂಶ ಪರಂಪರೆಯಾಗಿ ನಮ್ಮನ್ನು ಕಾಪಾಡಿಕೊಂಡು ಬರಬೇಕು ಎಂದು ಬೇಡಿಕೊಂಡವು. ಆಗ ಬಿದಿರು ತನ್ನಲ್ಲಿಯೇ, ನಾನು ಜಾತಿಯಲ್ಲಿ ಹುಲ್ಲಾದರೂ ನನ್ನ ವಂಶಾವಳಿ ಏನೋ ಬಲವಾಗಿಯೇ ಇದೆ ; ಗಿಡಗಳ ಗುಂಪಿನಲ್ಲೆಲ್ಲಾ ನಾನು ಸಾಧಾರಣವಾಗಿ ಇದ್ದೇ ಇರುತ್ತೇನೆ. ಈಗ ಈ ಮರಗಳೆಲ್ಲವೂ ತಮ್ಮಲ್ಲಿ ಒಬ್ಬ ದೊರೆ ಇರಬೇಕೆಂದು ಅಪೇಕ್ಷಿಸುತ್ತಿರುವುವು, ನನ್ನ ಮಾತಿಗೆ ಇವು ಒಪ್ಪುವುದಾದರೆ ನಾನು ಏಕೆ ದೊರೆಯಾಗಿರಬಾರದು, ಎಂದು ಯೋಚಿಸಿ, ಮರಗಳನ್ನು ಕುರಿತು, "ನೀವು ನನಗೆ ಕೊಟ್ಟ ಮರ್ಯಾದೆಗೆ ನಾನು ತುಂಬ ಕೃತಜ್ಞನಾಗಿರುವೆನು. ನನ್ನ ಮಾತಿನಂತೆ ನೀವು ನಡೆವವರೆಗೂ ನಿಮಗೆ ನನ್ನಿಂದ ತೊಂದರೆಯುಂಟಾಗಲಾರದು. ಮಾತಿಗೆ ಮೀರಿ ನಡೆದರೆ ನಾನು ಬೆಂಕಿಯನ್ನು ಕಾರಿ ನಿಮ್ಮನ್ನೆಲ್ಲಾ ಸುಟ್ಟುಬಿಡುವೆನು. ಇದಕ್ಕೆ

ನೀವು ಒಪ್ಪುವುದಾದರೆ, ನಾನು ನಿಮಗೆ ದೊರೆಯಾಗಲೂ ಒಪ್ಪುವೆನು " ಎಂದಿತು. ಬೆಂಕಿಯನ್ನು ಕಾರುವೆನೆಂದು ಬೆದರಿಸಿದ ಬಿದಿರಿಗೆ ಬೆದರಿ, ಅದರ ದೊರೆತನಕ್ಕೆ ಒಪ್ಪಿ ಎಲ್ಲವೂ ತಮ್ಮತಮ್ಮ ಸ್ಥಳಗಳಿಗೆ ಹೋಗಿ ನಿಂತವು.

---

## ೪೨. ಬಲಿಚಕ್ರವರ್ತಿ.

ಬಹುಕಾಲದ ಹಿಂದೆ ಬಲಿಚಕ್ರವರ್ತಿ ಎಂಬ ರಾಜಾಧಿರಾಜನೊಬ್ಬನು ಬಹು ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು. ಇವನನ್ನು ಕಂಡರೆ ದೇವಾನುದೇವತೆಗಳೆಲ್ಲರೂ ಹೆದರುತಿದ್ದರು. ಸ್ವರ್ಗಲೋಕವನ್ನಾಳುವ ಇಂದ್ರನೂ ತನ್ನ ಸಿಂಹಾಸನವನ್ನು ಬಲಿಚಕ್ರವರ್ತಿಗೆ ಬಿಟ್ಟುಕೊಡಬೇಕಾಗಿ ಬಂದಿತು. ಆಗ ದೇವತೆಗಳೆಲ್ಲರೂ ಜಗದ್ರಕ್ಷಕನಾದ ವಿಷ್ಣುವಿನಲ್ಲಿ ಮೊರೆಯಿಟ್ಟರು. ಆಗ ವಿಷ್ಣುವು–ನಿಮ್ಮನ್ನೆಲ್ಲಾ ಕಾಪಾಡಿ ನಿಮ್ಮ ನಿಮ್ಮ ಪದವಿಯನ್ನು ನಿಮನಿಮಗೆ ಕೊಡಿಸುವೆನು—ಎಂದು ಧೈರ್ಯವನ್ನು ಕೊಟ್ಟು ಕಳುಹಿಸಿದನು. ಬಲಿಚಕ್ರವರ್ತಿಯು ಇಂದ್ರಪದವಿಯನ್ನು ಅನುಭವಿಸುತ್ತಿದ್ದರೂ ಅಧರ್ಮವನ್ನು ಮಾಡುತ್ತಿರಲಿಲ್ಲ; ಸುಳ್ಳು ಹೇಳುತ್ತಿರಲಿಲ್ಲ ; ದೇವರ ಭಕ್ತನಾಗಿದ್ದನು. ಇಂತಹ ಮಹಾನುಭಾವನನ್ನು ನಾಶಮಾಡುವುದಕ್ಕೆ ದೇವರು ತಾನೇ ಒಪ್ಪಾನೆ?

ಆಗ ದೇವರು ಕಶ್ಯಪ ಋಷಿಗಳ ಮಗನಾಗಿ ಹುಟ್ಟಿ, ಬ್ರಹ್ಮಚಾರಿಯಂತೆ ಕೃಷ್ಣಾಜಿನವನ್ನು ಹೊದೆದು, ದಂಡವನ್ನೂ ಕಮಂಡಲವನ್ನೂ ಹಿಡಿದುಕೊಂಡು, ಬಲಿಚಕ್ರವರ್ತಿಯು ಯಜ್ಞಮಾಡುತ್ತಿದ್ದ ಸ್ಥಳಕ್ಕೆ ಬಂದನು. ಯಜ್ಞ ಮಾಡತಕ್ಕ ರಾಜನು, ಬ್ರಾಹ್ಮಣರು ಬೇಡಿದುದನ್ನು ಕೊಡಬೇಕಾದುದು ಧರ್ಮವು. ಹೀಗಿರುವಾಗ ವಾಮನಮೂರ್ತಿಯು ಬಂದು ಬಲಿಚಕ್ರವರ್ತಿಯನ್ನ ಮೂರು ಹಜ್ಜೆ ಭೂಮಿಯನ್ನು ಬೇಡಿದನು. ಬೇಡಿದುದನ್ನು ಕೊಡತಕ್ಕ ವ್ರತವುಳ್ಳ ಬಲಿಯು, ' ಆಗತ್ಯವಾಗಿ ಕೊಟ್ಟೆನು ತೆಗೆದುಕೋ, ' ಎಂದನು. ಬಲಿಚಕ್ರವರ್ತಿಗೆ ಗುರುವಾದ ಶುಕ್ರಾಚಾರ್ಯರು, ಕೊಡಬೇಡವೆಂದು ಎಷ್ಟೋ ವಿಧವಾಗಿ ತಿಳಿಸಿದರು. ಬಲಿಚಕ್ರವರ್ತಿಯು, ತಾನು ಕೊಟ್ಟ ಭಾಷೆಯನ್ನು ತಪ್ಪೆನೆಂದು, ದಾನವನ್ನು ಕೊಟ್ಟೇ ಕೊಟ್ಟನು.

ದೇವರಾದ ವಾಮನನು, ಅದ್ಭುತಾಕಾರವನ್ನು ತಾಳಿ, ಭೂಮಿಯನ್ನೆಲ್ಲಾ ಒಂದು ಹಜ್ಜೆಯೆಂದು ಅಳೆದನು ; ಆಕಾಶವನ್ನೆಲ್ಲಾ ಒಂದು ಹಜ್ಜೆ

ಯು ಆವರಿಸಿತು. ಎರಡು ಹೆಜ್ಜೆಯಷ್ಟು ಸ್ಥಳವಂತೂ ಸಿಕ್ಕಿತು. ಇನ್ನೊಂದು ಹೆಜ್ಜೆಗೆ ಏನು ಹೇಳುತ್ತೀಯೆ ? ಎನಲು, ಸತ್ಯಸಂಧನಾದ ಬಲಿಯು, ನನ ತಲೆಯ ಮೇಲೆ ವಹಿಸುವೆನು ಎಂದು ತಲೆಯನ್ನು ಬಗ್ಗಿಸಿಕೊಂಡು, ಕೈಮುಗಿದು ಕುಳಿತುಕೊಂಡನು. ದೇವರು ತನ್ನ ಪಾದವನ್ನು ಬಲಿಚಕ್ರವರ್ತಿಯ ತಲೆಯ ಮೇಲೆ ಇಟ್ಟು ಅವನನ್ನು ಪಾತಾಳಲೋಕಕ್ಕೆ ತುಳಿದು, ಅಲ್ಲಿ ಚಿರಕಾಲ ಆಳಿಕೊಂಡು ಸುಖವಾಗಿರು ಎಂದು ವರವನ್ನು ಕೊಟ್ಟು, ಭಕ್ತನಾದ ಬಲಿಯನ್ನು ಈ ರೀತಿಯಾಗಿ ಕಾಪಾಡಿ, ಇಂದ್ರಾದಿ ದೇವತೆಗಳನ್ನೂ ಸಂತೋಷ ಪಡಿಸಿ, ಮಾಯವಾದನು. ಈಗಲೂ ಬಲಿಪಾಡ್ಯಮಿ ಎಂದು ಹಬ್ಬವನ್ನು ಮಾಡಿ, ಅಂದು ಬಲಿಚಕ್ರವರ್ತಿಯನ್ನು ಪೂಜಿಸುವರು.

---

## ೪೩. ಟೀಪುಸುಲ್ತಾನ್.

ಸುಮಾರು ನೂರು ವರ್ಷಗಳ ಕೆಳಗೆ ಮೈಸೂರು ದೇಶವನ್ನು ಟೀಪುಸುಲ್ತಾನನು ಆಳುತಿದ್ದನು. ಇವನು ದೊಡ್ಡ ನವಾಬ ಹೈದರನ ಮಗನು. ಹೈದರನು ಸತ್ತಮೇಲೆ ಇವನು ಸುಲ್ತಾನನೆಂಬ ಬಿರುದಿನಿಂದ ಪಟ್ಟಕ್ಕೆ ಬಂದನು. ಇವನ ರಾಜಧಾನಿ ಶ್ರೀರಂಗಪಟ್ಟಣವು. ಈ ಶ್ರೀರಂಗಪಟ್ಟಣದ ಸುತ್ತಲೂ ಬಲವಾದ ಕಲ್ಲುಕೋಟೆಯಿದೆ. ಕೋಟೆಯ ಸುತ್ತಲೂ ಕಾವೇರೀ ನದಿ ಹರಿಯುತ್ತಿದೆ.

ಸುಲ್ತಾನನ ಕಾಲದಲ್ಲಿ ಕೋಟೆಯೊಳಕ್ಕೆ ಹೊಸಬರು ಯಾರೂ ಅಪ್ಪಣೆ ಇಲ್ಲದೆ ಹೋಗಿ ಬರುವುದಕ್ಕೆ ಅವಕಾಶವಿರಲಿಲ್ಲ. ಜನರಿಗೆಲ್ಲಾ ಸುಲ್ತಾನನ ಹೆದರಿಕೆಯು ಬಹಳವಾಗಿದ್ದಿತು. ಇವನಿಗೆ ಮುಸಲ್ಮಾನರಲ್ಲಿ ಬಹಳ ಪ್ರೀತಿ; ಮಹಮ್ಮದೀಯ ಮತವನ್ನು ಹೆಚ್ಚಿಸಬೇಕೆಂಬುದು ಇವನ ಮನಸ್ಸು. ಇವನು ಓದು ಬರೆಹವನ್ನು ಚೆನ್ನಾಗಿ ಕಲಿತಿದ್ದನು. ಇವನು ಬಹು ಧೈರ್ಯಶಾಲಿ, ಯುದ್ಧದಲ್ಲಿ ಶೂರನು.

ಹೀಗಿದ್ದ ಇವನಿಗೆ ಇಂಗ್ಲೀಷ್‌ರಲ್ಲಿ ದ್ವೇಷವಿದ್ದಿತು ; ಇವನು ಕಾಲವನ್ನೆಲ್ಲಾ ಯುದ್ಧ ಮಾಡುವುದರಲ್ಲಿಯೂ, ಯುದ್ಧಕ್ಕೆ ಸಿದ್ಧನಾಗುವುದರಲ್ಲಿಯೂ ಕಳೆದು, ಕೊನೆಗೆ, ಶ್ರೀರಂಗಪಟ್ಟಣದ ಕೋಟೆಯ ಮೇಲೆ ಬಹು

ಧೈರ್ಯವಾಗಿ ಇಂಗ್ಲಿಷ್‌ರ ಮೇಲೆ ಯುದ್ಧಮಾಡಿ ಸತ್ತನು. ಇವನು ಕುಳಿತುಕೊಳ್ಳುವುದಕ್ಕಾಗಿ ಭಂಗಾರದ ವ್ಯಾಘ್ರಾಸನವನ್ನು ಮಾಡಿಸಿದ್ದನು. ಇವನನ್ನು 'ಮೈಸೂರು ಹುಲಿ' ಎಂದು ಕರೆಯುತ್ತಿದ್ದರು.

---

## ೪೪. ರಾಜನು ಜೇಡರ ಹುಳುವಿನಿಂದ ಬದುಕಿದುದು.

ಒಬ್ಬ ರಾಜನು ಯುದ್ಧದಲ್ಲಿ ಸೋತು ಒಂದು ಕಾಡನ್ನು ಹೊಕ್ಕನು. ಶತ್ರುಗಳು ಅವನನ್ನು ಬೆನ್ನಟ್ಟಿಕೊಂಡು ಬಹುದೂರ ಹೋದರು. ಅಷ್ಟರಲ್ಲಿಯೇ ಕತ್ತಲಾಯಿತು. ಬೆನ್ನಟ್ಟಿ ಬರುತ್ತಿದ್ದವರು ಅಲ್ಲಲ್ಲಿ ನಿಂತರು. ರಾಜನೂ ಒಂದು ಕಲ್ಲುಪೊಟರೆಯಲ್ಲಿ ರಾತ್ರಿಯನ್ನೆಲ್ಲಾ ಕಳೆದನು. ಆ ರಾತ್ರಿ ಒಂದು ಜೇಡರ ಹುಳುವು ಆ ಕಲ್ಲು ಪೊಟರೆಯ ಬಾಯಿಗೆ ದಾರವನ್ನು ಬೀಸಿ, ಒಂದು ದೊಡ್ಡ ಗೂಡನ್ನು ಕಟ್ಟಿತು.

ಬೆಳಗಾಯಿತು. ರಾಜನು ಎದ್ದು ಮುಂದೆ ಹೊರಡಲು ಸಿದ್ಧನಾದನು. ಅಷ್ಟರಲ್ಲಿಯೇ ಕುದುರೆಯ ಓಟದ ಶಬ್ದವು ಕೇಳಿಸಿತು. ರಾಜನು ಅಲ್ಲಿಯೇ ಅಡಗಿಕೊಂಡನು. ಕುದುರೆಯ ಹಜ್ಜೆಯ ಶಬ್ದಕ್ಕಿಂತ ಅವನ ಎದೆಯು ಹೊಡೆದುಕೊಳ್ಳುತ್ತಿದ್ದ ಶಬ್ದವೇ ಅವನಿಗೆ ಹೆಚ್ಚಾಗಿ ಕೇಳಿಸುತಿದ್ದಿತು. ಇಬ್ಬರು ಸವಾರರು ಪೊಟರೆಯ ಹತ್ತಿರಕ್ಕೇ ಬಂದರು. ಅವರಲ್ಲಿ ಒಬ್ಬನು, 'ಇಲ್ಲಿ ಏನಾದರೂ ಆ ರಾಜನು ಅವಿತುಕೊಂಡಿರುವನೋ, ನೋಡೋಣ, ಇಳಿ' ಎಂದನು.

ಆ ಮಾತನ್ನು ಕೇಳಿ ರಾಜನು ತನ್ನ ಕೊನೆಯು ಹತ್ತಿರವಾಯಿತೆಂದು ತಿಳಿದನು. ಅಷ್ಟರಲ್ಲಿ ಇನ್ನೊಬ್ಬನು ಪೊಟರೆಯ ಬಾಯನ್ನು ಚೆನ್ನಾಗಿ ನೋಡಿ, 'ರಾಜನು ಈ ಪೊಟರೆಯಲ್ಲಿ ಇರಲಾರನು. ಪೊಟರೆಯ ಬಾಗಿಲಲ್ಲಿರುವ ಜೇಡರ ಗೂಡನ್ನು ನೋಡು. ಆ ಗೂಡಿನ ಒಂದು ಎಳೆಯೂ ಕಿತ್ತುಹೋಗಿಲ್ಲ. ರಾಜನು ಒಳಕ್ಕೆ ಹೋಗಿದ್ದರೆ ಗೂಡು ಹೀಗೆ ಇರುತ್ತಿದ್ದಿತೆ? ಮುಂದೆ ನಡೆ' ಎಂದು ಕುದುರೆಯನ್ನು ಓಡಿಸಿದನು. ಜತೆಯಲ್ಲಿದ್ದವನೂ ಹೊರಟನು. ರಾಜನು ಬದುಕಿಕೊಂಡನು. ಈ ವಿಪತ್ತಿನಿಂದ ಕಾಪಾಡಿದುದಕ್ಕಾಗಿ ರಾಜನು ದೇವರನ್ನು ಬಹಳವಾಗಿ ಸ್ತೋತ್ರಮಾಡಿದನು.

## ೪೫. ಸಾವಿತ್ರಿಯ ಕಥೆ—೧ ನೆಯ ಭಾಗ.

ಮದ್ರದೇಶವೆಂದು ಒಂದು ರಾಜ್ಯವಿದ್ದಿತು. ಆ ರಾಜ್ಯಕ್ಕೆ ಅಶ್ವಪತಿ ಎಂಬುವನು ದೊರೆಯಾಗಿದ್ದನು. ಆತನಿಗೆ ಬಹುಕಾಲ ಮಕ್ಕಳೇ ಇರಲಿಲ್ಲ. ಆದುದರಿಂದ ಅವನು ಸಾವಿತ್ರೀದೇವಿಯನ್ನು ಕುರಿತು ತಪಸ್ಸು ಮಾಡಿದನು. ಸಾವಿತ್ರಿಯು ಮೆಚ್ಚಿ ಅವನಿಗೆ ಪತಿವ್ರತೆಯಾದ ಒಬ್ಬಳು ಹೆಣ್ಣುಮಗಳು ಜನಿಸುವಳೆಂದು ವರವನ್ನು ಕೊಟ್ಟಳು. ಹಾಗೆಯೆ ದೊರೆಯ ಹೆಂಡತಿಯು ಬಹು ಚೆನ್ನಾದ ಒಂದು ಹೆಣ್ಣು ಮಗುವನ್ನು ಹೆತ್ತಳು. ಆ ಮಗುವಿಗೆ ಸಾವಿತ್ರಿಯೆಂದು ದೇವಿಯ ಹೆಸರನ್ನೇ ಇಟ್ಟರು. ಸಾವಿತ್ರಿಯು ಸುಖವಾಗಿ ಬೆಳೆದಳು. ಚಿಕ್ಕ ವಯಸ್ಸಿನಲ್ಲೇ ವಿದ್ಯೆಯನ್ನು ಚೆನ್ನಾಗಿ ಕಲಿತಳು.

ಸಾವಿತ್ರಿಗೆ ಮದುವೆ ಮಾಡಬೇಕೆಂದು ದೊರೆಯು ಯೋಚಿಸಿ, ವರನನ್ನು ಹುಡುಕಿಸಿದನು. ದೊರೆಯು ಎಷ್ಟು ಹುಡುಕಿದರೂ ಅನುಕೂಲನಾದ ವರನು ಸಿಕ್ಕಲಿಲ್ಲ. ಆದುದರಿಂದ ಬೇಕಾದ ವರನನ್ನು ಹುಡುಕುವುದಕ್ಕೆ ಸಾವಿತ್ರಿಯನ್ನೇ ಕಳುಹಿಸಿದನು. ಸಾವಿತ್ರಿಯು ಬಹು ದೇಶಗಳನ್ನು ಸುತ್ತಿದಳು. ಎಲ್ಲಿಯೂ ಅನುಕೂಲನಾದ ವರನು ಸಿಕ್ಕದೆ ಇರಲು, ಕಾಡಿನಲ್ಲಿದ್ದ ಆಶ್ರಮಗಳಲ್ಲಿ ಹುಡುಕುವುದಕ್ಕೆ ಹೊರಟಳು. ಕೊನೆಗೆ ಒಂದು ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದ ದ್ಯುಮತ್ಸೇನನೆಂಬ ದೊರೆಯ ಮಗ ಸತ್ಯವಾನನನ್ನು ಮೆಚ್ಚಿ, ಹಿಂದಿರುಗಿ ಬಂದು ತನ್ನ ತಂದೆಗೆ ತಿಳಿಸಿದಳು.

ಇಷ್ಟರಲ್ಲಿಯೇ ಅಶ್ವಪತಿಯನ್ನು ನೋಡುವುದಕ್ಕೆ ನಾರದರು ಬಂದರು. ದೊರೆಯು ಅವರೊಡನೆ ಮಾತನಾಡುತ್ತಾ ಸಾವಿತ್ರಿಯು ಸತ್ಯವಾನನನ್ನು ಮೆಚ್ಚಿ ಬಂದಿರುವಳೆಂದು ತಿಳಿಸಿದನು. ನಾರದರು 'ಅಯ್ಯಾ, ಮಹಾರಾಜನೆ! ಸತ್ಯವಾನನು ಬಹು ಗುಣ ಸಂಪನ್ನನು, ಯೋಗ್ಯನು! ನಿಜ; ಆದರೆ ಅವನು ಬಹು ಕಾಲ ಬದುಕುವುದಿಲ್ಲ,ಇನ್ನೊಂದುವರ್ಷಕ್ಕೆ ಸರಿಯಾಗಿ ಅವನುಸಾಯುವನು' ಎಂದು ಹೇಳಿದರು. ರಾಜನು, ಇದನ್ನುಕೇಳಿ ವ್ಯಸನಪಟ್ಟು,ಮಗಳನ್ನು ಕರೆದು 'ಅಮ್ಮಾ ಮಗುವೇ! ನಿನ್ನನ್ನು ಆವರನಿಗೆ ಕೊಡುವದು ನನಗೆ ಇಷ್ಟವಿಲ್ಲ. ಬೇರೆ ವರನನ್ನು ಹುಡುಕು' ಎಂದು ಹೇಳಿದನು. ಅದಕ್ಕೆ ಸಾವಿತ್ರಿಯು, 'ಸತ್ಯವಾನನನ್ನು ನೋಡಿದಂದಿನಿಂದಲೂ, ಮನಸ್ಸಿನಲ್ಲಿ ನಾನು ಆತನ ಹೆಂಡತಿಯೆಂದೇ ತಿಳಿದಿರುವೆನು. ಆತನಲ್ಲದೆ ಇತರರನ್ನು ನಾನು ಎಂದಿಗೂ ವರಿಸುವಳಲ್ಲ. ಆತ

ನಿಗೇ ನನ್ನನ್ನು ಕೊಟ್ಟು ವಿವಾಹ ಮಾಡಬೇಕು' ಎಂದು ತಂದೆಯನ್ನು ಬೇಡಿಕೊಂಡಳು. ಕೊನೆಗೆ ಸಾವಿತ್ರಿಗೂ ಸತ್ಯವಾನನಿಗೂ ಮದುವೆಯಾಯಿತು.

ಸಾವಿತ್ರಿಯು ಗಂಡನೊಡನೆ ಹೊರಟು ದ್ಯುಮತ್ಸೇನನಿದ್ದ 'ಆಶ್ರಮಕ್ಕೆ ಹೋದಳು. ಅಲ್ಲಿ ಅತ್ತೆ ಮಾವಂದಿರನ್ನೂ, ಸತ್ಯವಾನನನ್ನೂ ಸೇವಿಸುತ್ತಾ ಆಶ್ರಮಕ್ಕೆ ಬಂದವರನ್ನೂ ಆದರಿಸುತ್ತಾ ಮಹಾ ಪತಿವ್ರತೆಯೆಂದು ಹೆಸರಾಗಿದ್ದಳು. ಒಂದು ವರ್ಷವು ಆಗುತ ಬಂದಿತು. ನಾರದರ ಮಾತು ಸುಳ್ಳಾಗದು ಎಂದು, ಗಂಡನು ಸಾಯುವುದಕ್ಕೆ ಮೂರು ದಿವಸ ಮುಂಚಿನಿಂದಲೂ ಸಾವಿತ್ರಿಯು ಬಹು ಕಠಿನವಾದ ವ್ರತವನ್ನು ಹಿಡಿದಿದ್ದಳು. ಪತಿಯು ಸಾಯುವನೆಂದು ತಾನೊಬ್ಬಳು ತಿಳಿದು ಇದ್ದಳೇ ಹೊರತು, ಇತರ ಯಾರಿಗೂ ಅವಳು ಹೇಳಿರಲಿಲ್ಲ.

ಆ ಕೊನೆಯ ದಿವಸ ಮಧ್ಯಾಹ್ನ ಸತ್ಯವಾನನು ಕೊಡಲಿಯನ್ನು ಹೆಗಲಿಗೆ ಹಾಕಿಕೊಂಡು ಸವುದೆಯನ್ನು ತರುವುದಕ್ಕೆ ಕಾಡಿಗೆ ಹೊರಟನು. ಸಾವಿತ್ರಿಯೂ ಆದಿನ ಗಂಡನ ಜತೆಯಲ್ಲಿಯೇ ಹೊರಟಳು. ಬರಬೇಡವೆಂದು ಪತಿಯು ಎಷ್ಟು ಹೇಳಿದರೂ ಅಂದು ಕೇಳಲಿಲ್ಲ. ಇಬ್ಬರೂ ಹೊರಟರು. ಸತ್ಯವಾನನು ಬಹಳ ಹೊತ್ತು ಕಟ್ಟಿಗೆಯನ್ನು ಕಡಿದು ಆಯಾಸದಿಂದ ಕುಳಿತುಕೊಂಡನು. ಆಗ ಅವನಿಗೆ ತಲೆನೊಂದಹಾಗೆ ಆಯಿತು. ಹತ್ತಿರದಲ್ಲಿದ್ದ ಸಾವಿತ್ರಿಯನ್ನು ಕರೆದು, ಪ್ರಿಯಳೆ! ನನಗೆ ತಲೆನೋವು ಹೆಚ್ಚಾಗುತ ಇದೆ. ಏಕೋ ಬಹು ಸಂಕಟವಾಗುತ್ತಿದೆ; ಕುಳಿತುಕೊಳ್ಳಲಾರೆ' ಎಂದನು. ತನ ಪತಿಗೆ ಮರಣಕಾಲವು ಸಮೀಪವಾಯಿತೆಂದು ತಿಳಿದು, ಸಾವಿತ್ರಿಯು, ಪತಿಯನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಸತ್ಯವಾನನ ಮುಖವನ್ನೇ ನೋಡುತಿದ್ದಳು.

---

## ೪೬. ಸಾವಿತ್ರಿಯ ಕಥೆ—೨ ನೆಯ ಭಾಗ.

ಒಂದು ಕ್ಷಣದಲ್ಲಿಯೇ ಯಮನು ಬಂದು ನಿಂತು, ಸತ್ಯವಾನನನ್ನು ದೃಷ್ಟಿಸಿ ನೋಡುತ್ತಿದ್ದನು. ಆಗ ಸಾವಿತ್ರಿಯು ಕತ್ತೆತ್ತಿ, ಯಮನನ್ನು ನೋಡಿ, 'ನಿಮ್ಮನ್ನು ನೋಡಿದರೆ ನೀವು ಮನುಷ್ಯರಂತೆ ಇಲ್ಲ. ಅಯ್ಯಾ! ನೀವು ಯಾರು?' ಎಂದು ಕೇಳಿದಳು. ಯಮನು ಅದಕ್ಕೆ, 'ಅಮ್ಮಾ!

ನಾನೇ ಯಮಧರ್ಮರಾಯನು. ನನ್ನ ದೂತರಿಗೆ ಅಸಾಧ್ಯವಾದ ನಿನ್ನ ಗಂಡನ ಪ್ರಾಣವನ್ನು ನಾನೇ ತೆಗೆದುಕೊಂಡು ಹೋಗಲು ಬಂದಿರುವೆನು. ನೀನು ಮಹಾ ಪತಿವ್ರತೆಯಾದುದರಿಂದಲೂ, ನಿನ್ನ ಗಂಡನು ಧರ್ಮಿಷ್ಠನಾದುದರಿಂದಲೂ, ನನ್ನ ದೂತರು, ಅವನ ಪ್ರಾಣವನ್ನು ಎಳೆದು ತರಲಾರದೆ ಹೋದರು' ಎಂದು ಹೇಳಿ ಸತ್ಯವಾನನ ಪ್ರಾಣವನ್ನು ತೆಗೆದುಕೊಂಡು ಹೊರಟನು.

ಆಗ ಸಾವಿತ್ರಿಯು ಯಮನ ಹಿಂದೆಯೇ ಹೊರಟಳು. ಅವನು ಸಾವಿತ್ರಿಯನ್ನು ನೋಡಿ 'ಅಮ್ಮಾ, ನೀನು ಬರಬಾರದು. ಹಿಂದಿರುಗು' ಎಂದನು. ಸಾವಿತ್ರಿಯು ಅದಕ್ಕೆ 'ನನ್ನ ಪತಿಯನ್ನು ಬಿಟ್ಟು ನಾನೆಲ್ಲಿ ಹೋಗಲಿ! ಅವನನ್ನು ಅಗಲಿ ನಾನು ಹೇಗೆ ಇರಲಿ! ಆ ಪ್ರಾಣವೇ ಹೋದಮೇಲೆ ನಾನು ಪ್ರಾಣದಿಂದ ಇದ್ದು ಏನು ಫಲ? ಈ ಪ್ರಪಂಚದಿಂದ ನನಗೇನು ಆಗಬೇಕು? ಸ್ತ್ರೀಯರಿಗೆ ಸರ್ವಸ್ವವೂ ಪತಿಯೇ ಅಲ್ಲವೇ? ಪತಿಯೇ ದೇವರು. ಅಂತಹ ದೇವರನ್ನು ಬಿಟ್ಟು ಸ್ತ್ರೀಜನರು ಇರುವುದು ಹೇಗೆ? ಒಂದು ಕ್ಷಣವೂ ನಾನು ನನ್ನ ದೇವರನ್ನಗಲಿ ಇರಲಾರೆನು' ಎಂದಳು.

ಸಾವಿತ್ರಿಯ ಸಹಜವಾದ ಸಂಕಟವನ್ನು ಕೇಳಿ ಯಮನಿಗೂ ಕರುಣ ಹುಟ್ಟಿತು. ಆಗ ಯಮನು ಸಾವಿತ್ರಿಯನ್ನು ನೋಡಿ, 'ನಿನ್ನ ಪತಿಭಕ್ತಿಗೆ ನಾನು ಮೆಚ್ಚಿದೆನು. ನಿನ್ನ ಪತಿಯ ಪ್ರಾಣ ಒಂದು ಹೊರತು, ನೀನು ಬೇಕಾದ ವರಗಳನ್ನು ಕೇಳು, ಕೊಡುವೆನು' ಎಂದನು. ಆಗ ಸಾವಿತ್ರಿಯು ಹಾಗಾದರೆ, ಕುರುಡನಾಗಿರುವ ನಮ್ಮ ಮಾವನಿಗೆ ಕಣ್ಣು ಬರಲಿ; ಶತ್ರುಗಳ ವಶವಾಗಿರುವ ನಮ್ಮ ಮಾವನ ರಾಜ್ಯವು ಮತ್ತೆ ನಮ್ಮ ಮಾವನ ಕೈಸೇರಲಿ; ನಮ್ಮ ತಂದೆಗೆ ಗಂಡುಮಕ್ಕಳಾಗಲಿ, ನನಗೆ ಸಂತಾನವೃದ್ಧಿಯಾಗಲಿ' ಈ ವರಗಳನ್ನು ಕೊಡಬೇಕೆಂದು ಬೇಡಿದಳು. ಯಮನು ಇವಳ ಗುಣಕ್ಕೆ ಮೆಚ್ಚಿ 'ನೀನು ಬೇಡಿದ ವರಗಳನ್ನೆಲ್ಲಾ ಕೊಟ್ಟಿರುವೆನು, ಇನ್ನು ಹೋಗು' ಎಂದನು.

ಆದರೂ ಸಾವಿತ್ರಿಯು ಯಮನ ಬೆನ್ನು ಹತ್ತಿದಳು. ಯಮನು, ನೀನು ಬೇಡಿದ ವರಗಳನ್ನೆಲ್ಲಾ ಕೊಟ್ಟದು ಆಯಿತು; ಇನ್ನು ಸುಖವಾಗಿ ಹೋಗಬಹುದಲ್ಲವೆ? ಹೋಗು' ಎಂದನು. ಅದಕ್ಕೆ ಸಾವಿತ್ರಿಯು 'ಅಯ್ಯಾ! ಯಮಧರ್ಮರಾಯನೇ! ಪತಿಯನ್ನು ಕಳೆದುಕೊಂಡ ನನಗೆ ಸಂತಾನ ಹೆಚ್ಚು

ನಬಗೆ ಯೆಲ್ಲಿ? ನೀನು ಕೊಟ್ಟ ವರಕ್ಕೆ ಸಾರ್ಥಕ್ಯವೆಲ್ಲಿ? ಪತಿಯು ಹೋದ ಮೇಲೆ ಸ್ತ್ರೀಯರಿಗೆ ಸುಖವೆಂದರೇನು? ನನ್ನ ಪತಿಯನ್ನು ಬಿಡದಿದ್ದಮೇಲೆ ನ್ನ ವರಗಳು ಏತಕ್ಕೆ? ಎಂದು ಬಾರಿಬಾರಿಗೂ ಹೇಳುತ್ತಾ ಹಿಂದೆಯೇ ಹೊರಟಳು.

ಸಾವಿತ್ರಿಗೆ ಪತಿಯಮೇಲಿರುವ ಪ್ರೀತಿಗೆ ಯಮನು ಮೆಚ್ಚಿ, 'ನಿನಗೆ ಬೇಕಾದ ಇನ್ನೊಂದು ವರವನ್ನೂ ಕೇಳು' ಎಂದನು. ಸಾವಿತ್ರಿಯು, ಸ್ವಾಮಿ! ನನ್ನ ಪತಿಯ ಪ್ರಾಣವನ್ನು ಉಳಿಸಬೇಕು' ಎಂದು ಕೈಮು ಗಿದು ಬೇಡಿದಳು. ಆಗ ಯಮಧರ್ಮರಾಯನು ಸತ್ಯವಾನನನ್ನು ಬದುಕಿಸಿ ಗಂಡ ಹೆಂಡರಿಬ್ಬರನ್ನೂ ಹರಿಸಿ, ಹೊರಟುಹೋದನು. ಸಾವಿತ್ರಿಯು ಗಂಡನನ್ನು ಕರೆದುಕೊಂಡು, ಅತ್ತೆ ಮಾವಂದಿರ ಬಳಿಗೆ ಹೋಗಿ ಕಾಡಿನಲ್ಲಿ ನಡೆದ ಸಂಗತಿಯನ್ನೆಲ್ಲಾ ತಿಳಿಸಿದಳು. ಅವರಿಗೆ ಬಹಳ ಸಂತೋಷವಾಯಿತು. ಯಮಧರ್ಮರಾಯನ ವರಗಳೆಲ್ಲವೂ ಕೈಗೂಡಿದುವು. ದ್ಯುಮತ್ಸೇನನಿಗೆ ರಾಜ್ಯವು ಬಂದಿತು. ಅಶ್ವಪತಿಗೆ ಗಂಡು ಮಕ್ಕಳಾದರು. ಸತ್ಯವಾನನು ದೀರ್ಘಾಯುವಾದನು. ಸಾವಿತ್ರಿಯು ಸುಖಿಯಾದಳು.

---

## ೪೭. ಕಂಠೀರವ ನರಸರಾಜ ಒಡೆಯರು.

ಈ ಮೈಸೂರು ದೇಶವನ್ನು ಆಳಿ ಪ್ರಸಿದ್ಧಿಗೊಂಡ ರಾಜರಲ್ಲಿ ಕಂಠೀರವ ನರಸರಾಜ ಒಡೆಯರೊಬ್ಬರು. ಇವರು ಮಹಾಶೂರರು. ಇವರು ಸಿಂ ಹಕ್ಕೆ ಸಮಾನವಾದ ಬಲವನ್ನೂ ಧೈರ್ಯವನ್ನೂ ಪಡೆದಿದ್ದರು. ಮೈಸೂರ ಸಂಸ್ಥಾನಕ್ಕೆ ಸೇರಿದ ತೆರಕಣಾಂಬಿ ಎಂಬ ಊರಿನಲ್ಲಿ, ಪಟ್ಟವಾಗುವುದಕ್ಕೆ ಮುಂಚೆ ಇವರು ಇದ್ದರು. ಅಲ್ಲಿಗೆ ಒಂದು ದಿವಸ ಒಬ್ಬ ಬ್ರಾಹ್ಮಣನು ಬಂದನು. ಆ ಬ್ರಾಹ್ಮಣನು ತಾನು ನೋಡಿದ ಪಟ್ಟಣಗಳ ವಿಚಾರವನ್ನೆಲ್ಲಾ ನರಸರಾಜರ ಮುಂದೆ ಹೇಳಿ, ಕೊನೆಗೆ, 'ತಿರುಚನಾಪಳ್ಳಿ ಎಂದು ಒಂದು ಪಟ್ಟಣವಿದೆ. ಆ ಪಟ್ಟಣದ ಅರಸಿನ ಬಳಿ ಒಬ್ಬ ಜಟ್ಟಿ ಇರುತ್ತಾನೆ. ಅವನೊ ಡನೆ ಯಾರೂ ಕಾಳಗ ಮಾಡುವವರೇ ಇಲ್ಲ' ಎಂದು ಹೇಳಿದನು. ಅದನ್ನು ಕಂಠೀರವ ನರಸರಾಜರು ಕೇಳಿ, ತಿರುಚನಾಪಳ್ಳಿಗೆ ಗುಟ್ಟಾಗಿ ಬೇರೆ ವೇಷ

ದಿಂದ ಹೋಗಿ, ಆ ಜಟ್ಟಿಯು ಊರು ಬಾಗಿಲಲ್ಲಿ ಕಟ್ಟಿದ್ದ ದಟ್ಟಿಯನ್ನು ಕಿತ್ತು ಊರೊಳಗೆ ನುಗ್ಗಿದರು. ಆಗ ಆ ಊರದೊರೆಯು ಇದಿರಿಗೆ ಇವರಿಗೂ ಆ ಜಟ್ಟಿಗೂ ದೊಡ್ಡ ಕಾಳಗವಾಯಿತು. ಆ ಕಾಳಗದಲ್ಲಿ ಗೆದ್ದು ಜಟ್ಟಿಯ ಬಿರುದುಗಳೆಲ್ಲಾ ತೆಗೆದುಕೊಂಡು ಊರಿಗೆ ಬಂದು ಸೇರಿದರು.

ಇವರಿಗೆ ಪಟ್ಟವಾದಮೇಲೂ, ಇವರನ್ನು ಕೊಲ್ಲಬೇಕೆಂದು ಏಳು, ಎಂಟು ಮಂದಿ ಶೂರರು, ರಾತ್ರಿಯ ವೇಳೆಯಲ್ಲಿ ಇವರ ಮನೆಗೆ ನುಗ್ಗಿ, ಇವರ ಮೇಲೆ ಬೀಳಲು, ಮಹಾ ಪರಾಕ್ರಮದಿಂದ ಅವರೆಲ್ಲರನ್ನೂ ಜಯಿಸಿದರು. ಇವರ ಕಾಲದಲ್ಲಿ ತುರುಕರು ಶ್ರೀರಂಗಪಟ್ಟಣವನ್ನು ಮುತ್ತಿಗೆ ಹಾಕಲು ದೊರೆಗಳು ತಾವೇ ಕತ್ತಿಯನ್ನು ಹಿರಿದುಕೊಂಡು ಶತ್ರುಗಳ ಮೇಲೆ ಬಿದ್ದರು. ತುರುಕರ ಸೇನಾಪತಿಯು, ದಿಗಿಲುಪಟ್ಟು, ಇವರೊಡನೆ ಸಮಾಧಾನವನ್ನು ಮಾಡಿಕೊಂಡು ಹೊರಟು ಹೋದನು. ಇವರು ಕುಣಿಗಲು, ಸತ್ಯಮಂಗಲ ಮುಂತಾದುವುಗಳನ್ನು ಮೈಸೂರು ಸೀಮೆಗೆ ಸೇರಿಸಿಕೊಂಡು, 'ಕಂಠಿರಾಯಿ ಹಣ, ಕಂಠೀರಾಯಿ ವರಹಾ' ಎಂಬ ಚಿನ್ನದ ನಾಣ್ಯಗಳನ್ನು ಹಾಕಿಸಿದರು. ಇವರು ಇರುವವರೆಗೂ ಮೈಸೂರ ಸಿಂಹವಾಗಿದ್ದರು.

---

## ೪೮. ಬೇಸಗೆಕಾಲ ಮಳೆಗಾಲ.

ಉರಿ ಬೇಸಗೆ. ಮಟಮಟ ಮಧ್ಯಾಹ್ನ. ಗಿಡದ ಒಂದು ಸಣ್ಣ ಎಲೆ ಸಹಿತ ಅಲ್ಲಾಡುತ್ತಿರಲಿಲ್ಲ. ಬಿಸಲಿನ ತಾಪವನ್ನು ತಡೆಯಲಾರದೆ ದೊಡ್ಡದೊಡ್ಡ ಮನೆಗಳ ನೆಳಲಲ್ಲಿ ನಾಲಗೆಯನ್ನು ನೀಡಿಕೊಂಡು, ಹಾ,ಹಾ, ಎಂದು ನಾಯಿಗಳು ಮಂಕಾಗಿ ಬಿದ್ದಿದ್ದುವು. ಅಲ್ಲಲ್ಲಿ ಮರದ ನೆಳಲಲ್ಲಿ ದನಗಳು ಮೇಯುವುದಕ್ಕೆ ಹಸಿರಿಲ್ಲದೆ, ಕುಡಿವುದಕ್ಕೆ ನೀರಿಲ್ಲದೆ ಬೆಪ್ಪಾಗಿ ನಿಂತಿದ್ದುವು. ದಾರಿಹೋಕರು, ನಡೆಯಲಾರದೆ ನೆಳಲಿದ್ದ ಸ್ಥಳದಲ್ಲಿ, ಶಾಂತರಾಗಿ, ಮಲಗಿ ನಿದ್ದೆಹೋಗುತಿದ್ದರು. ಮನೆಗಳಲ್ಲಿ ಮುದುಕರೂ ಹುಡುಗರೂ ಬಿಸಿಲ ಬೇಗೆಯನ್ನು ತಡೆಯಲಾರದೆ ಮೈಮೇಲಿನ ಬಟ್ಟೆಯನ್ನು ಬಿಸಾಟು, ನೆಲದಮೇಲೆ ಬಿದ್ದು ಹೊರಳಾಡುತ್ತಿದ್ದರು. ಎಳೆ ಮಕ್ಕಳು ಸೆಕೆಯನ್ನು ಸಹಿಸಲಾರದೆ ಜಂಡಿ ಹಿಡಿದಿದ್ದುವು. ಪಾಠಶಾಲೆಗಳಲ್ಲಿಯೂ

ಕಛೇರಿಗಳಲ್ಲಿಯೂ, ಬಾಲಕರೂ, ಗುಮಾಸ್ತರೂ ತೂಕಡಿಸುತ್ತಿದ್ದರು. ಹಣಗಾರರು, ಅಧಿಕಾರಿಗಳು, ರಾಜಕುಮಾರರು, 'ಆ' ಎಂದು ಆಗುಳಿಸುತ ಗಾಳಿಯನ್ನು ಬೀಸಿಸಿಕೊಳ್ಳುತ ಕಾಲವನ್ನು ಕಳೆಯುತ್ತಿದ್ದರು. ವ್ಯಾಪಾರಿಗಳು ಅಂಗಡಿಯಮೇಲೆ ಕುಳಿತು, ಹಾಗೆ ನಿದ್ದೆಮಾಡಿ, ಆಗಾಗ ಬೆಚ್ಚಿಬಿದ್ದು ಎಚ್ಚರಗೊಳ್ಳುತಿದ್ದರು. ಅಲ್ಲಲ್ಲಿಯೆ ಅರವಟ್ಟಿಗೆಗಳಲ್ಲಿ ಪಾನಕ, ನೀರುಮಜ್ಜಿಗೆ, ತಣ್ಣನೆಯ ನೀರು, ಶ್ರೀಗಂಧ ಇವುಗಳನ್ನು ಕೊಡುತಿದ್ದರು. ನದಿಯ ತೀರಗಳಲ್ಲಿ, ತೋಪುಗಳಲ್ಲಿ, ತೋಟಗಳಲ್ಲಿ, ತಣ್ಣನೆಯ ನೆಳಲಲ್ಲಿ, ಅಲ್ಲೊಬ್ಬರು ಇಲ್ಲೊಬ್ಬರು ಪಕ್ಷಿಗಳ ಇಂಪಾದ ಧ್ವನಿಯನ್ನು ಕೇಳುತ್ತ, ಆನಂದ ಪಡುತ್ತಿದ್ದರು. ಪ್ರಯಾಣಿಕರ ಗಾಡಿಗಳು ಅಲ್ಲಲ್ಲಿಯೆ ನಿಲ್ಲುತ್ತಿದ್ದುವು. ಎತ್ತುಗಳನ್ನು, ಹುಸ್ ಎಂದು ಅಟ್ಟಿ, ಗಾಡಿ ಹೊಡೆವವನು ಹಾಗೆಯೆ ನಿದ್ದೆ ಹೋಗುತ್ತಿದ್ದನು. ಎತ್ತುಗಳು ಹಜ್ಜೆಯಮೇಲೆ ಹಜ್ಜೆಗಳನ್ನು ಹಾಕುತ, ಹಾಗೆಯೆ ತೂಕಡಿಸುತ ಮುಗ್ಗರಿಸುತಿದ್ದುವು.

ಪ್ರಾಣಿಗಳ ಈ ಕಷ್ಟವನ್ನು ಸಹಿಸಲಾರದೆ ಮಳೆಗಾಲವು ಆಕಾಶದಲ್ಲಿ ಕಪ್ಪು ಮೋಡವನ್ನು ಕಟ್ಟಿ, ಕಠಿನವಾದ ಬಿಸಿಲುಗಾಲವನ್ನು ಹೊಡೆದು ಓಡಿಸಲು ಗುಡುಗು, ಮಿಂಚು, ಸಿಡಿಲುಗಳೊಡನೆ, ಮಳೆಯನ್ನು ಕರೆದು ಬಿಸಿಲ ಬೇಗೆಯನ್ನು ಆರಿಸಲು, ತಲೆದೋರುತಿರಲು ಬೇಸಗೆಗೆ ಕೋಪಬಂದು-ನೀನೇನು ಜನರಿಗೆ ಹಿತವನ್ನು ಮಾಡುವೆನೆಂದು ಬರುತ್ತೀಯೆ ? ನಿಲ್ಲು ! ನಿಲ್ಲು ! ಇಗೋ ನನ್ನ ಮಾಹಾತ್ಮ್ಯವನ್ನು ತೋರಿಸುವೆನು. ಅಲ್ಲಿ ನೋಡು ತೂಕಡಿಸುತಿದ್ದ ಜನರು ಹೇಗೆ ಹೊರಟಿರುವರು. ಅವರ ನವಿರಾದ ಉಡಿಗೆಯನ್ನು ನೋಡು. ಅವರು ಮುಡಿದಿರುವ ಹೂವನ್ನು ನೋಡು. ಅವರು ತೊಡೆದಿರುವ ಗಂಧದ ವಾಸನೆಯು ಇಲ್ಲಿಗೆ ಬರುತಿರುವುದು. ನನ್ನ ಮಿತ್ರನಾದ ಮಂದಮಾರುತನು ಜನರೆಲ್ಲರನ್ನೂ ಈಚೆಗೆ ಕರತರುವನು. ಗಿಡಗಳೆಲ್ಲಾ ಹೇಗೆ ನಗುತಿರುವುವು. ಚಳಿಗಾಲದಲ್ಲಿ ನರಟಿ ಹೋಗಿದ್ದಗಿಡಗಳೆಲ್ಲಾ ಈಗ ಒಡೆದು ಹೂ ಬಿಡುತಿರುವುವು. ಆ ಮಾವಿನ ಚಿಗುರನ್ನು ನೋಡು! ಈ ಸಾಲುಮರದ ಕೆಂಪು ಹೂವನ್ನು ನೋಡು. ಪಕ್ಷಿಗಳ ಉಲ್ಲಾಸವನ್ನು ನೋಡು. ಕೋಗಿಲೆಯ ಧ್ವನಿಯನ್ನು ಕೇಳು. ನವಿಲ ಆಟವನ್ನು ನೋಡು. ಸ್ತ್ರೀಯರ ಸಡಗರವು ಹೇಗಿರುವುದು ? ಇಲ್ಲಿ ನೋಡು, ರಾಮಧ್ಯಾನಮಾಡು

ತ್ತ, ತಂಬೂರಿ, ಮೃದಂಗದೊಡನೆ ಜನರು ಗುಂಪುಗುಂಪಾಗಿ ಹೊರಟಿರುವರು. ಜನರಿಗೆ ಸೌಖ್ಯವೆಂಬುದು ನನ್ನ ಕಾಲದಲ್ಲಿ ಅಲ್ಲದೆ ಇನ್ನಾವ ಕಾಲದಲ್ಲಿ ಉಂಟು, ನಾನು ಬರುವುದಕ್ಕೆ ಮುಂಚೆ ಮೊದಲು ಮೊದಲಲ್ಲಿ ಚಳಿಯಲ್ಲಿ ನಡುಗಿ, ಹಿಮದಲ್ಲಿ ನೆನೆದು, ದವಸ ಧಾನ್ಯಗಳನ್ನು ತುಂಬಿ ಒದೆದಾಡುತ್ತಿದ್ದರು. ಒಂದು ಗಿಡದಲ್ಲಾದರೂ ಎಲೆ ಇಲ್ಲ, ಚಿಗುರು ಇಲ್ಲ. ಹಣ್ಣಿನ ಹೆಸರೇ ಇಲ್ಲ. ಈಗ ನೋಡು ಹೇಗಿರುವುದು?—ಎನ್ನಲು, ಮಳೆಗಾಲವು ಒಂದು ಮಾತನ್ನೂ ಆಡದೆ ಆಕಾಶವನ್ನೆಲ್ಲಾ ಕರಿಯ ಮೋಡದಿಂದ ಮುಚ್ಚಿ ಗುಡುಗು ಮಿಂಚು ಸಿಡಿಲುಗಳೊಡನೆ ಆರ್ಭಟಿಸುತ್ತ ಪಟಪಟನೆ ಆಲಿಕಲ್ಲುಗಳನ್ನು ಬೀಸಿ ಭರಭರನೆ ಬಿರುಸಾಗಿ ಮಳೆಯನ್ನು ಕರೆಯಿತು. ಆಕಾಶವು ನಿರ್ಮಲವಾಯಿತು. ಗಿಡಗಳು ಮೈಯನ್ನೆಲ್ಲಾ ತೊಳದುಕೊಂಡಂತೆ ಕಂಗೊಳಿಸುತ್ತಿದ್ದುವು. ಊರಧೂಳು ಅಡಗಿತು, ಬೇಸಗೆಯ ಕೊಳೆಯಲ್ಲಾ ಕೊಚ್ಚಿಹೋಯಿತು. ಕೆರೆ ಬಾವಿಗಳಲ್ಲಿ ನೀರು ತುಂಬಿತು. ಕೊಟರಕೊಟರ, ಒಪ್ಪುಟ್ ಒಬಟ್, ಎಂದು ಕಪ್ಪೆಗಳು ಒರಳಲು ಆರಂಭಿಸಿದುವು. ರೈತನು ನೇಗಿಲನ್ನು ಕಟ್ಟಿಕೊಂಡು, ಹೊಲವನ್ನು ಉಳಲಿಕ್ಕೆ ಹೊರಟನು. 'ಮಳೆಬಂದಿತು, ದೇಶಕ್ಕೆ ತಂಪಾಯಿತು. ಇನ್ನು ಯೋಚನೆ ಇಲ್ಲ' ಎಂದು ಜನರು ಚಟುವಟಿಕೆಯಿಂದ ಕೆಲಸಮಾಡಲು ತೊಡಗಿದರು. ಮಳೆಗಾಲದ ಆರ್ಭಟದಿಂದ ಬೇಸಗೆಯು ಹಿಂಜರಿಯಿತು. ಎಲ್ಲೆಲ್ಲೂ ನೀರೂ, ಎಲ್ಲೆಲ್ಲೂ ಹಸಿರೂ ಮನಸ್ಸನ್ನು ಸಂತೋಷಪಡಿಸುತಿದ್ದುವು.

---

## ೪೯. ಪುಷ್ಪಮಂಜರಿಯ ಕಥೆ—೧ನೆಯ ಭಾಗ.

ಪುಷ್ಪಪುರಿಯೆಂದು ಒಂದು ಪಟ್ಟಣವಿದ್ದಿತು. ಆ ಪಟ್ಟಣದಲ್ಲಿ ಪುಷ್ಪಶೇಖರನೆಂಬ ಒಬ್ಬ ದೊರೆಯು ಆಳುತ್ತಿದ್ದನು. ಅವನಿಗೆ 'ಮಕರಂದನೆಂಬ ಒಬ್ಬ ಮಗನಿದ್ದನು. ಅವನು ನೋಡುವುದಕ್ಕೆ ಬಹಳ ಚೆಲುವನಾಗಿಯೂ ಶಕ್ತಿ ಯುಕ್ತಿ ಯುಳ್ಳವನಾಗಿಯೂ ಇದ್ದನು.

ಒಂದು ದಿವಸ ಆ ರಾಜಕುಮಾರನು ಬೇಟೆಗೆ ಹೋಗಿ ಒಂದು ಹುಲ್ಲೆಯನ್ನು ಅಟ್ಟಿಕೊಂಡು ಕಾಡಿನಲ್ಲಿ ಬಹುದೂರ ಹೋದನು ; ಜತೆಯಲ್ಲಿದ್ದ ಜನರೆಲ್ಲರೂ ಹಿಂದೆ ನಿಂತರು. ಹುಲ್ಲೆಯು ಸಿಕ್ಕಲಿಲ್ಲ, ಮಟಮಟ ಮಧ್ಯಾಹ್ನ; ಹಸಿವು, ಬಾಯಾರಿಕೆ, ಆಯಾಸ, ಹೆಚ್ಚುತ್ತಾ ಬಂದುವು. ಆಗ ದೊರೆಯ ಮಗನು ದಿಕ್ಕು ಕಾಣದೆ ನಿಂತಿರಲು, ನಿಶ್ಶಬ್ದವಾಗಿದ್ದ ಆ ಕಾಡಿನಲ್ಲಿ ಎಲ್ಲೋ ಅತ್ತ ಶಬ್ದವು ಕೇಳಬಂದಿತು. ಆ ಶಬ್ದವು ಬಂದೆಡೆಗೆ ಕಿವಿಗೊಟ್ಟು ಕೇಳಿ, ‘ ಇದೇನು ! ಈ ಅರಣ್ಯ ಮಧ್ಯದಲ್ಲಿ ಯಾರೋ ಹೆಂಗಸು ಅಳುತಿರುವಂತೆ ಕೇಳುತಿದೆ. ಅಯ್ಯೋ ಪಾಪ! ಏನು ಕಷ್ಟವೋ ವಿಚಾರಿಸೋಣ ’ ಎಂದು ತನ್ನ ಆಯಾಸವನ್ನು ಮರೆತು ಒಡನೆಯೆ ಹೊರಟನು. ಮೆದೆ ಮೆಳೆಗಳಲ್ಲಿ ನುಗ್ಗಿ, ಮುಳ್ಳು ಕಲ್ಲುಗಳನ್ನು ತುಳಿದು ಆತುರದಿಂದ ಹೋಗುವಾಗ ಬಹು ಹೊತ್ತಾಯಿತು. ಸೂರ್ಯನು ಮುಳುಗುತ್ತಿದ್ದನು. ಅಳುವ ಶಬ್ದವು ಇನ್ನೂ ಹೆಚ್ಚಾಗಿ ಕೇಳಿಸುತ್ತಾ ಬಂದಿತು. ಕತ್ತಲೆ ಆಗುವುದರೊಳಗಾಗಿ ಹೇಗಾದರೂ ಆ ಸ್ಥಳವನ್ನು ಕಂಡು ಹಿಡಿಯಬೇಕೆಂದು, ಹತ್ತಿರವಿದ್ದ ಒಂದು ದೊಡ್ಡ ಮರವನ್ನೇರಿ ಸುತ್ತಲೂ ನೋಡಿದನು. ಆ ಮರಕ್ಕೆ ಸ್ವಲ್ಪ ದೂರದಲ್ಲಿಯೇ ಯಾರೋ ಇದ್ದಂತೆ ಕಾಣಬಂದಿತು. ಒಡನೆಯೆ ಮರವನ್ನು ಇಳಿದು, ಆ ಮಾರ್ಗವಾಗಿ ಹೊರಟು ನೋಡುವಾಗ ಮುದಕಿಯೊಬ್ಬಳು ಒಂದು ಹಳ್ಳದಲ್ಲಿ ಬಿದ್ದು ಗೋಳಿಡುತಿದ್ದಳು. ಒಡನೆಯೆ ಅವಳನ್ನು ಮೇಲಕ್ಕೆ ಎತ್ತಿದನು.

ಆಗ ಮುದಕಿಯು ಉಸ್ಸಪ್ಪ ! ಎಂದು ನಿಟ್ಟುಸಿರುಬಿಟ್ಟು ಸ್ವಲ್ಪ ಚೇತರಿಸಿಕೊಂಡು ‘ ಅಪ್ಪಾ. ನೀನು ಪುಣ್ಯವಂತನಾಗಿ ಬದುಕು, ನನ್ನ ಗುಡಿಸಲು ಇಲ್ಲಿಯೇ ಇರುವುದು. ನೀನು ಹಸಿದು, ಆಯಾಸಪಟ್ಟಿರುವಂತಿದೆ. ನನ್ನ ಮನೆಯಲ್ಲಿ ಸ್ವಲ್ಪ ಊಟಮಾಡಿ, ತಳಾರಿಸಿಕೊ, ಬೆಳಿಗ್ಗೆ ನಾನು ಊರದಾರಿಯನ್ನು ತೋರಿಸುವೆನು, ನೀನು ಸುಖವಾಗಿ ಹೋಗಬಹುದು ’ ಎಂದಳು.

ರಾಜಕುಮಾರನು ಬಹು ಸಂತೋಷಗೊಂಡು, ದೇವರನ್ನು ಸ್ತುತಿಸಿ, ಅವಳೊಡನೆ ಹೊರಟನು. ದಾರಿಯಲ್ಲಿ ಆ ಮುದುಕಿ ಇವನ ವೃತ್ತಾಂತವನ್ನೆಲ್ಲಾ ತಿಳಿದು-ನಿನಗೆ ತಕ್ಕ ಕನ್ನಿಕೆಯೊಬ್ಬಳು ಇರುವಳು. ಅವಳನ್ನು ಪುಷ್ಪ ಮಂಜರಿಯೆಂದು ಕರೆಯುವರು. ಆವಳು ಒಬ್ಬ ರಾಕ್ಷಸನ ಕೈಗೆ ಸಿಕ್ಕಿರು

ವಳು. ನೀನು ಅವಳನ್ನು ಬಿಡಿಸಿಕೊಂಡುಬಂದು ಮದುವೆಯಾಗು. ನನ್ನ ಪ್ರಾಣವನ್ನು ಉಳಿಸಿದುದಕ್ಕೆ ಪ್ರತಿಯಾಗಿ ನಿನಗೆ ಆ ಕನ್ಯಾರತ್ನವನ್ನು ಸಾಧಿಸಲು ಮಂತ್ರಿಸಿದ ಒಂದು ಕೈಗೋಲನ್ನು ಕೊಡುವೆನು—ಎಂದು ಹೇಳುತಿರುವಷ್ಟರಲ್ಲಿಯೇ ಗುಡಿಸಲು ಸಿಕ್ಕಲು ಆ ರಾಜಕುಮಾರನಿಗೆ ತನ್ನ ಕೈಯಲ್ಲಾದ ಉಪಚಾರಗಳನ್ನೆಲ್ಲಾ ಮಾಡಿದಳು. ಬೆಳಗಾಯಿತು. ರಾಜಕುಮಾರನು ಊರಿಗೆ ಹೊರಡುವುದಕ್ಕೆ ಸಿದ್ಧನಾದನು. ಆ ಮುದುಕಿಯು ಮಂತ್ರಸಿದ್ಧವಾದ ಕೋಲನ್ನು ಕೊಟ್ಟು, ಅದರ ರಹಸ್ಯವನ್ನು ತಿಳಿಸಿ, ಊರದಾರಿಯನ್ನು ತೋರಿಸಿ, ರಾಜಕುಮಾರನನ್ನು ಆಶೀರ್ವದಿಸಿ, ಕಳುಹಿಸಿಕೊಟ್ಟಳು.

---

## ೫೦ ಪುಷ್ಪಮಂಜರಿಯ ಕಥೆ—೨ನೆಯ ಭಾಗ.

ರಾಜಕುಮಾರನು ಊರನ್ನು ಸೇರಿ, ಚಿಂತೆಯಲ್ಲಿ ಮುಳುಗಿದ್ದ ತಾಯಿತಂದೆಗಳನ್ನೂ, ಪುರಜನರನ್ನೂ ಸಂತೋಷಪಡಿಸಿದನು. ಮರುದಿನ, ರಾಜಕುಮಾರನು ತಂದೆಯಬಳಿಗೆ ಹೋಗಿ, ನಮಸ್ಕಾರಮಾಡಿ, ಕಾಡಿನಲ್ಲಿ ನಡೆದುದನ್ನೆಲ್ಲಾ ತಿಳಿಸಿ, ಪುಷ್ಪಮಂಜರಿಯನ್ನು ಬಿಡಿಸಿಕರೆತರಲು ತನಗೆ ಅಪ್ಪಣೆಯಾಗಬೇಕೆಂದು ಕೇಳಿಕೊಂಡನು. ಮುದುಕನಾದ ದೊರೆಗೆ ಮಗನು ಹೊರಟುಹೋಗುವುದು ಬಹು ಯೋಚನೆಗೆ ಕಾರಣವಾಗಿದ್ದರೂ ಮಗನಿಗೆ ಅಪ್ಪಣೆಯನ್ನು ಕೊಟ್ಟನು.

ರಾಜಕುಮಾರನು ಅಲ್ಲಿಂದ ಹೊರಟು ಊರೂರು ದೇಶದೇಶಗಳನ್ನೆಲ್ಲಾ ಅಲೆದಲೆದು ಎಲ್ಲಿಯೂ ಪುಷ್ಪಮಂಜರಿಯ ವೃತ್ತಾಂತವನ್ನು ತಿಳಿಯದೆ, ಬೆಟ್ಟಗುಟ್ಟಗಳಲ್ಲಿಯಾದರೂ ಪುಷ್ಪಮಂಜರಿಯು ಸಿಕ್ಕಬಹುದೆಂದು ಕಾಡುಮಾರ್ಗವಾಗಿ ಹೊರಟನು. ಕಾಡಿನಲ್ಲೆಲ್ಲಾ ಅಲೆದು ಬೆಟ್ಟಗಳಲ್ಲೆಲ್ಲಾ ಹುಡುಕಿದರೂ ಪುಷ್ಪಮಂಜರಿಯು ಸಿಕ್ಕಲಿಲ್ಲ; ಸುತ್ತಿಸುತ್ತಿ ಕಂಗೆಟ್ಟು ಒಂದು ಮರದಕೆಳಗೆ ಮಲಗಿಕೊಂಡನು.

ಅಲ್ಲಿಗೆ ಒಬ್ಬ ವೃದ್ಧನು ಬರಲು ರಾಜಕುಮಾರನು ಎಚ್ಚತ್ತು, ಈ ಮುದುಕನಿಗೇನಾದರೂ ಪುಷ್ಪಮಂಜರಿಯ ವೃತ್ತಾಂತವು ತಿಳಿದಿರಬಹುದೋ

ಕೇಳೋಣವೆಂದು, ಆ ಮುದುಕನ ಹತ್ತಿರಕ್ಕೆ ಹೋಗಿ ನಮಸ್ಕಾರಮಾಡಿ, 'ಅಯ್ಯಾ, ನೀನು ಪುಷ್ಪಮಂಜರಿಯ ಸಮಾಚಾರವನ್ನು ಬಲ್ಲೆಯಾ ?' ಎಂದು ಕೇಳಿದನು. ಅದಕ್ಕೆ ಆ ಮುದುಕನು 'ನನಗೆ ಸ್ವಲ್ಪಮಟ್ಟಿಗೆ ತಿಳಿದಿರುವುದು ; ನಾನು ತಿಳಿದಿರುವುದನ್ನು, ಮುಚ್ಚಿಡುವುದು ಏಕೆ? ವಂಚನೆಯಿಲ್ಲದೆ ನಿನಗೆ ಹೇಳುವೆನು, ಕೇಳು :—

'ಇಲ್ಲಿಗೆ ಕಾಣುವ ಮೂರನೆಯ ಬೆಟ್ಟದ ತುದಿಯಲ್ಲಿ ಒಂದುಕೋಟೆ ಇರುವುದು. ಅಲ್ಲಿ ಒಬ್ಬ ರಾಕ್ಷಸನು ಅವಳನ್ನು ಸೆರೆಹಾಕಿಸಿರುವನು. ಆ ರಾಕ್ಷಸನು ಪುಷ್ಪಮಂಜರಿಯನ್ನು ಬಹು ಎಚ್ಚರಿಕೆಯಿಂದ ಕಾದುಕೊಂಡಿರುವನು. ಕೋಟೆಯ ಸುತ್ತಲೂ ನೂರಾರುಮಂದಿ ರಾಕ್ಷಸರನ್ನು ಕಾವಲು ಇಟ್ಟಿರುವನು. ಎಷ್ಟೋಜನ ರಾಜಕುಮಾರರು ಬಂದು ಪುಷ್ಪಮಂಜರಿಯನ್ನು ಬಿಡಿಸಿಕೊಂಡು ಹೋಗಲಾರದೆ ಅಲ್ಲಿಯೆ ಸತ್ತಿರುವರು. ನೀನು ಬಂದಿರುವ ಸಮಯವು ಬಹು ಅನುಕೂಲವಾದುದು. ಆ ರಾಕ್ಷಸಾಧಮನು ಈಗ ಮಲಗಿರುವನು. ಇನ್ನು ಹದಿನೈದು ದಿನಗಳು ಅವನು ಏಳುವಂತೆ ಇಲ್ಲ. ಈಗ ಪುಷ್ಪಮಂಜರಿಯು ಆ ರಾಕ್ಷಸನ ತಾಯಿಯ ವಶದಲ್ಲಿರುವಳು. ಈಗ ಅವಳನ್ನು ಬಿಡಿಸಿಕೊಂಡರೆ ಸರಿ. ಇಲ್ಲದಿದ್ದರೆ, ನಿನ್ನ ಪ್ರಯತ್ನ ಎಂದಿಗೂ ಕೈಗೂಡುವುದಿಲ್ಲ. ನೀನು ಈಗಲೇ ಹೊರಡು. ನಿನಗೆ ಜಯವಾಗಲಿ' ಎಂದು ಹೇಳಿ ಹೊರಟುಹೋದನು.

ರಾಜಕುಮಾರನು ಒಡನೆಯೆ ಹೊರಟನು. ಮೂರು ದಿವಸಗಳು ಹಗಲೂ ರಾತ್ರಿ ಒಂದೇ ಸಮನಾಗಿ ನಡೆದು ನಾಲ್ಕನೆಯ ರಾತ್ರಿ ಆಕೋಟೆಯ ಬಳಿಗೆ ಸೇರಿದನು. ಕೋಟೆಯ ಬಾಗಿಲಲ್ಲಿ, ಥಳಥಳಿಸುವ ಕತ್ತಿಗಳನ್ನು ಹಿಡಿದುಕೊಂಡು ಆರುಮಂದಿ ರಾಕ್ಷಸರು, ಕಾವಲುಕೊಡುತ್ತಿದ್ದರು. 'ನಾನು ಇವರೊಡನೆ ಸುಮ್ಮನೆ ಯುದ್ಧಮಾಡಿ ಇವರನ್ನು ಕೊಂದು, ಒಳಗೆ ಹೋಗುವುದಾದರೆ ಗಲಭೆಯು ಹೆಚ್ಚಿ, ತೊಂದರೆಗೆ ಗುರಿಯಾಗುವೆನು' ಎಂದು ಯೋಚಿಸಿ ರಾಜಕುಮಾರನು ಆ ಮಾರ್ಗವನ್ನು ಬಿಟ್ಟು ಬೇರೆ ಎಲ್ಲಿಯಾದರೂ ದಿಡ್ಡಿಬಾಗಿಲಿದ್ದರೆ, ಅಲ್ಲಿಂದಾದರೂ ಒಳಹೋಗುವ ಪ್ರಯತ್ನಮಾಡಬೇಕೆಂದು ಅದನ್ನು ಹುಡುಕುವುದಕ್ಕೆ ಕೋಟೆಯ ಸುತ್ತಲೂ ಹೋದನು.

## ೫೧. ಪುಷ್ಪಮಂಜರಿಯ ಕಥೆ—೩ನೆಯ ಭಾಗ.

ಹಾಗೆ ರಾಜಕುಮಾರನು ಕೋಟೆಯ ಸುತ್ತಲೂ ಬರುತ್ತ ಅಲ್ಲಲ್ಲೆ ಕತ್ತಿಗಳನ್ನು ಹಿಡಿದುಕೊಂಡು ತೂಕಡಿಸುತ್ತಿದ್ದ ಭಯಂಕರರಾದ ರಾಕ್ಷಸರನ್ನು ನೋಡಿದನು. ಒಂದು ಕಡೇ ಮಾತ್ರ ಒಂದು ಸಣ್ಣಬಾಗಿಲು ಇದ್ದುದನ್ನೂ, ಅಲ್ಲಿದ್ದ ಒಬ್ಬ ಕಾವಲುಗಾರನು ನಿದ್ದೆ ಹೋಗುತಿದ್ದುದನ್ನೂ ಕಂಡನು. ಆಗ ಸದ್ದಿಲ್ಲದೆ ಅವನ ಸಮೀಪಕ್ಕೆ ಹೋಗಿ ನೋಡಲು, ಅವನು ಮೈಮರೆತು ಬಿದ್ದಿದ್ದನು. ಆಗ ಮೆತ್ತಗೆ ಆ ಬಾಗಿಲನ್ನು ತೆರೆದು ಒಳಕ್ಕೆ ಹೋದನು. ಕೋಟೆಯಲ್ಲಿ ನಿಶ್ಶಬ್ದವಾಗಿದ್ದಿತು. ಎಲ್ಲಿನೋಡಿದರೂ ಬಯಲು; ಮಧ್ಯದಲ್ಲಿ ಮಾತ್ರ ಒಂದು ದೊಡ್ಡಮನೆಯು ಇರುವಂತೆ ಕಾಣಿಸಿತು.

ಆ ಮನೆಯ ಮಾರ್ಗವಾಗಿ ಹೊರಟು, ಕಾವಲು ಇಲ್ಲದ ಅರಮನೆಯನ್ನು ಪ್ರವೇಶಮಾಡಿದನು. ಅಷ್ಟು ಹೊತ್ತಿಗೆ ಸರಿಯಾಗಿ ಚಂದ್ರೋದಯವಾಗಿ ಬೆಳದಿಂಗಳು ಬಂದಿತು. ಅದು ಎಂತಹ ಅರಮನೆ! ಎಲ್ಲೆಲ್ಲಿ ನೋಡಿದರೂ ಬೆಳ್ಳಿಯಗೋಡೆ, ಭಂಗಾರದ ಬಾಗಿಲು, ಪಚ್ಚೆಯ ಕಂಬ, ನೀಲದ ತೋರಣ, ಮುತ್ತಿನ ಜಾಲರಿ, ಕೆಂಪಿನ ಕಾರಣೆ. ಆ ಐಶ್ವರ್ಯವನ್ನೂ ಅಂದವನ್ನೂ ನೋಡಿ ರಾಜಕುಮಾರನು ಬೆರಗಾಗಿ ಒಂದು ಗಳಿಗೆ ನಿಂತಿದ್ದು ತರುವಾಯ ಇನ್ನೇನು ಆಶ್ಚರ್ಯವಿರುವುದೋ ನೋಡಬೇಕೆಂದು ಮುಂದೆ ಒಂದೆರಡು ಹಜ್ಜೆಗಳನ್ನು ಇಟ್ಟನು. ಅಲ್ಲಿ ಕಿವಿಗೆ ಇಂಪಾದ ಧ್ವನಿಯೂ ದಿವ್ಯವಾದ ಪುಷ್ಪಪರಿಮಳವೂ ಬಂದುವು. ಅಷ್ಟರಲ್ಲಿ ಸಿಕ್ಕಿದ ತೊಟ್ಟಿಯಬಾಗಿಲನ್ನು ತೆರೆದೊಡನೆ, ಒಳಗಿನ ಹೊಳಪು ಒಂದು ಕ್ಷಣಮಾತ್ರ ಇವನ ಕಣ್ಣುಗಳನ್ನು ಕೋರೈಸಿತು. ಆತೊಟ್ಟಿಯ ನಡುವೆ ನವರತ್ನಖಚಿತವಾದ ಸಿಂಹಾಸನ, ಆ ಸಿಂಹಾಸನದ ಮೇಲೆ ಥಳಥಳಿಸುತ್ತಿರುವ ಕನ್ಯಾರತ್ನ. ಆ ಕನ್ನಿಕೆಯೂ ಸಿಂಹಾಸನವೂ ಅಲ್ಲಿದ್ದ ಸಾಲದೀವಿಗೆಗಳೂ ನಾಲ್ಕುಕಡೆಯ ರತ್ನಭಿತ್ತಿಗಳಲ್ಲಿಯೂ ಪ್ರತಿಬಿಂಬಿಸಿ ನೂರಾರು ಕನ್ನೆಯರು ನೂರಾರು ಸಿಂಹಾಸನಗಳೂ ಇರುವಂತೆ ಕಾಣುತಿದ್ದುವು. ಈ ಹೊಳಪಿನಲ್ಲಿ ಕಾಳರಾಕ್ಷಸಿಯಂತೆ ಕಪ್ಪಗೆ ಆ ರಾಕ್ಷಸನ ತಾಯಿಯು ಕುಳಿತಿರದಿದ್ದರೆ ಇವನು ಎಷ್ಟು ಹೊತ್ತು ನಿಂತಿದ್ದರೂ ಇವನ ಕಣ್ಣಿಗೆ ಪ್ರಕಾಶ ವಿನಾ ಇನ್ನೇನೂ ಕಾಣುತ್ತಿರಲಿಲ್ಲ.

ಅಲ್ಲಿಯೆ ಒಂದೆರಡು ನಿಮಿಷಕಾಲ ನಿಂತು ಸುತ್ತಲೂ ಚೆನ್ನಾಗಿ ನೋಡಲು ಆ ಪುಷ್ಪ ಮಂಜರಿಯ ವೈಭವವು ಕಾಣಿಸಿತು. ಒಂದುಕಡೆ ಸ್ತ್ರೀಯರು ನಾಟ್ಯವಾಡುತ್ತಿದ್ದರು; ಒಂದುಕಡೆ ಗಾನಮಾಡುತ್ತಿದ್ದರು. ಇವುಗಳನ್ನೆಲ್ಲಾ ನೋಡಿ ಈ ರಾಜಕುಮಾರನು ಬೆಪ್ಪಾಗಿ ನಿಂತನು. ಅಷ್ಟರಲ್ಲಿಯೇ ಆ ರಾಕ್ಷಸಸ್ತ್ರೀಯ ಗರ್ಜನೆಯು ಕೇಳಿಸಿತು. ಅಲ್ಲಿದ್ದ ಹೆಂಗಸರೆಲ್ಲಾ ಒಂದು ಕ್ಷಣಮಾತ್ರದಲ್ಲಿ ಎಲ್ಲೋ ಮಾಯವಾದರು. ಈ ರಾಜಕುಮಾರನಿಗೆ ಆ ಸ್ತ್ರೀಯರ ಕಾಲುಗೆಜ್ಜೆಯ ಧ್ವನಿಮಾತ್ರ ಕೇಳಿಸಿತಲ್ಲದೆ ಅವರು ಮಾಯವಾದ ಬಗೆ ಕಾಣಿಸಲಿಲ್ಲ.

ಆಗ ಆ ರಾಕ್ಷಸಿಯು 'ಎಲೊ! ನರಾಧಮ, ನಿಲ್ಲು, ನಿಲ್ಲು. ನೀನು ಯಾರು? ಹೇಗೆ ಬಂದೆ? ಒಂದು ನಿಮಿಷದಲ್ಲಿ ರಾಕ್ಷಸರು ಬಂದು ನಿನ್ನನ್ನು ಕಡಿದು ತಿಂದುಹಾಕುವರು. ಹಾ! ಹೋ!' ಎಂದು, ಆರ್ಭಟಿಸಿದಳು. ಆಗ ರಾಜಕುಮಾರನು ಸ್ವಲ್ಪ ಧೈರ್ಯವನ್ನು ತಾಳಿ, ಒಂದೆರಡು ಹಜ್ಜೆ ಮುಂದೆ ಹೋಗಿ, ಕೈಮುಗಿದು, 'ತಾಯೆ! ಕ್ಷಮಿಸಿ, ನಾನು ನಿಮ್ಮ ಗುಣಾತಿಶಯಗಳನ್ನು ಕೇಳಿ ಆಶ್ಚರ್ಯಯುಕ್ತನಾಗಿ ನಿಮ್ಮನ್ನು ಸೇವಿಸಿಕೊಂಡಿರಲು ಇಲ್ಲಿಗೆ ಬಂದಿರುವೆನು. ದಯಪಾಲಿಸಬೇಕು' ಎಂದು ಅವಳನ್ನು ಸ್ವಲ್ಪ ಸ್ತೋತ್ರಮಾಡಿದನು. ಸ್ತೋತ್ರಕ್ಕೆ ಒಳಗಾಗದಿರುವರು ಯಾರು? ಇವನ ಸ್ತೋತ್ರಕ್ಕೆ ಆ ಮುದುಕಿಯು ಮೆಚ್ಚಿ, 'ಒಳ್ಳೆಯದು! ಹಾಗಾದರೆ, ನಮ್ಮದೊಂದು ಕುದುರೆ ಇರುವುದು. ಅದನ್ನು ನೀನು ಮೂರುದಿನಗಳು ಹೊರಕ್ಕೆ ತೆಗೆದುಕೊಂಡು ಹೋಗಿ ಮೇಯಿಸಿಕೊಂಡು ಬಂದರೆ, ನಿನ್ನನ್ನು ಇಲ್ಲಿಯೆ ಇಟ್ಟುಕೊಳ್ಳುವೆನು' ಎಂದಳು.

ಅದಕ್ಕೆ ಆ ರಾಜಕುಮಾರನು ಸಂತೋಷದಿಂದ ಒಪ್ಪಲು ಅವನಿಗೆ ಆಗ ಆಹಾರವನ್ನು ಕೊಟ್ಟು, ಮರುದಿನ ಬೆಳಗ್ಗೆ ಕುದುರೆಯನ್ನು ಕೊಟ್ಟು ಕಳುಹಿಸಿದಳು. ಕುದುರೆಯನ್ನು ಮೇಯುವುದಕ್ಕೆ ಬಿಟ್ಟು ರಾಜಕುಮಾರನು, ರಾತ್ರಿಕಂಡ ಸೊಬಗನ್ನೇ ಯೋಚಿಸುತ್ತಾ ಇರಲು, ಕುದುರೆಯು ಎಲ್ಲೊ ತಪ್ಪಿಸಿಕೊಂಡಿತು. ಎಲ್ಲೆಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ರಾಜಕುಮಾರನಿಗೆ ಬಹುದುಃಖಬಂದಿತು.

---

## ೫೨. ಪುಷ್ಪಮಂಜರಿಯ ಕಥೆ—೪ನೆಯ ಭಾಗ.

ರಾಜಕುಮಾರನು ಮಾಯವಾದ ಆ ಕುದುರೆಯನ್ನು ಬಲವಾಗಿ ಹುಡು ಕಾಡಿದನು. ಎಲ್ಲಿಯೂ ಸಿಕ್ಕಲಿಲ್ಲ. ಆಗ ಅದುವರೆಗೂ ತಾನು ಪಟ್ಟ ಶ್ರಮ ವೆಲ್ಲವೂ ವ್ಯರ್ಥವಾಯಿತೆಂದು ಚಿಂತಿಸುತ ಕುಳಿತಿರುವಾಗ ತನ್ನ ಹತ್ತಿರದ ಲ್ಲಿದ್ದ ಆ ಕೈಗೋಲು ಕೆಳಕ್ಕೆ ಬಿದ್ದಿತು. ಆಗಲೆ ನೂರಾರು ಪಕ್ಷಿಗಳು ಬಂದುವು, ಪಕ್ಷಿರಾಜನಾದ ಗರುಡನು ಬಂದು, 'ನನ್ನಿಂದ ತಮಗೆ ಏನು ಆಗಬೇಕು ?' ಎಂದು ಕೇಳಿದನು.

ಆಗ ರಾಜಕುಮಾರನಿಗೆ, ಆ ಕೋಲನ್ನು ನೆಲಕ್ಕೆ ಗಟ್ಟಿಯಾಗಿ ಒಂ ದಾವೃತ್ತಿ ತಗುಲಿಸಿದರೆ, ಪಕ್ಷಿಗಳು ಬರುವುವು ಎಂದೂ, ಎರಡಾವೃತ್ತಿ ಹೊಡೆದರೆ ಮೃಗಗಳು ಬರುವುವೆಂದೂ, ಮೂರಾವೃತ್ತಿ ಹೊಡೆದರೆ ಮೊಸ ಳೆಗಳು ಬರುವುವೆಂದೂ, ಕಾಡಿನಲ್ಲಿ ಆ ಮುದುಕಿಯು ಅಂದು ಹೇಳಿದುದು ಜ್ಞಾಪಕಕ್ಕೆ ಬಂದಿತು. ಆಗ ಅವನು, ಎಲೈ ! ಪಕ್ಷಿರಾಜನೇ ! ನನ್ನ ಕುದು ರೆಯು ಎಲ್ಲೋ ಮಾಯವಾಗಿರುವುದು. ನೀನು ಹುಡುಕಿಕೊಟ್ಟರೆ, ನಿನ್ನ ಉಪಕಾರವನ್ನು ನಾನು ಎಂದಿಗೂ ಮರೆಯೆನು' ಎಂದನು. ಗರು ಡನು ಪಕ್ಷಿಸಮೂಹದೊಡನೆ ಹೊರಟು, ಸ್ವಲ್ಪ ಕಾಲದಲ್ಲಿಯೇ ಆ ಕುದು ರೆಯನ್ನು ಹಿಡಿದು ತಂದುಕೊಟ್ಟನು. ರಾಜಕುಮಾರನು ಗರುಡನಿಗೆ ವಂದಿಸಿ, ಆ ಕುದುರೆಯನ್ನು ಹಿಡಿದುಕೊಂಡು ಹೋಗಿ ರಾಕ್ಷಸಿಗೆ ಕೊ ಟ್ಟನು. ಆ ರಾಕ್ಷಸಿಯು ಆಶ್ಚರ್ಯಪಟ್ಟಳು.

ಮಾರನೆಯ ಬೆಳಗ್ಗೆ,ಕುದುರೆಯನ್ನು ತೆಗೆದುಕೊಂಡು ಹೊರಟನು. ಕುದುರೆಯು ಅಂದೂ ಅದೃಶ್ಯವಾಯಿತು. ಆಗ ಮೃಗಗಳ ಸಹಾಯದಿಂದ ಕುದುರೆಯನ್ನು ಪಡೆದು ರಾಕ್ಷಸಿಗೆ ಒಪ್ಪಿಸಿದನು.

ಮರುದಿನ ಬೆಳಿಗ್ಗೆ ಮತ್ತೆ ಆ ಮಾಯದ ಕುದುರೆಯನ್ನು ತೆಗೆದು ಕೊಂಡುಹೋಗಲು ಸಿದ್ಧನಾಗಿದ್ದನು. ಆಗ ಪುಷ್ಪಮಂಜರಿಯು ಸರ್ರನೆ ಬಂದು, ಇವನ ಕಿವಿಯಲ್ಲಿ, 'ಸಾಯಂಕಾಲ ನೀನು ಕುದುರೆಯೊಡನೆ ಬಂ ದರೆ, ಈ ಕುದುರೆಯ ಮರಿಯನ್ನು ನನಗೆ ಕೊಡೆಂದು ರಾಕ್ಷಸಿಯನ್ನು ಬೇಡು," ಎಂಬುದಾಗಿ ಹೇಳಿ, ಮಿಂಚಿನಂತೆ ಮಾಯವಾದಳು. ಆ ಮಾತು ಗಳನ್ನು ಕೇಳಿ, ಇನ್ನು ತನ್ನ ಕೆಲಸ ಕೈಗೂಡಿತೆಂದು ಹಿಗ್ಗಿ. ಆದಿನ ಮೊಸ

ಳಿಯ ಸಹಾಯದಿಂದ ಕುದುರೆಯನ್ನು ಹಿಡಿದು ತಂದನು. ಆಗ ರಾಕ್ಷಸಿಯು ಸಂತೋಷಪಟ್ಟು, 'ನಿನಗೆ, ಏನು ಬೇಕು ? ಕೇಳು," ಎಂದಳು. ರಾಜಕುಮಾರನು, ಇಲ್ಲಿಯೆ ಈ ಕುದುರೆಯ ಮರಿಯ ಕೆಲಸವನ್ನು ಮಾಡಿಕೊಂಡು ಇರುವೆನು ; ಅಪ್ಪಣೆಯಾಗಬೇಕು ' ಎಂದನು. ರಾಕ್ಷಸಿಯು ಒಪ್ಪಿ ಕುದುರೆಯ ಮರಿಯನ್ನು ಇವನ ವಶಕ್ಕೆ ಬಿಟ್ಟಳು.

ಆ ಬೆಳಗ್ಗೆ, ರಾಜಕುಮಾರನು ಮರಿಯನ್ನು ನೋಡುತಿದ್ದಾಗ ಇವನ ಸಾಹಸವನ್ನೂ, ಇವನ ಧೈರ್ಯವನ್ನೂ, ಇವನ ರೂಪಲಾವಣ್ಯವನ್ನೂ ನೋಡಿ ಮೆಚ್ಚಿದ ಪುಷ್ಪಮಂಜರಿಯು ಬಂದು ' ಬೇಗ ಕುದುರೆಯನ್ನೇರಿ, ನಾನೂ ಬರುವೆನು. ತಡಮಾಡಬೇಡಿ, ರಾಕ್ಷಸರೆಲ್ಲರೂ ನಿಮ್ಮನ್ನು ಕೊಲ್ಲಲು ಯೋಚಿಸುತ್ತಿರುವರು ' ಎಂದು ಕುದುರೆಯನ್ನು ತಾನೇ ಮುಂದಾಗಿ ಹತ್ತಿದಳು. ಒಡನೆಯೆ ರಾಜಕುಮಾರನೂ ಹತ್ತಿದನು. ಪುಷ್ಪಮಂಜರಿಯು ಆ ಕುದುರೆಯನ್ನು ತಟ್ಟಲು, ಕುದುರೆಯು ಆಕಾಶಮಾರ್ಗವಾಗಿ ಹೊರಟಿತು.

ಕಾವಲಿದ್ದ ರಾಕ್ಷಸರು, ಪುಷ್ಪಮಂಜರಿಯು ರಾಜಕುಮಾರನೊಡನೆ ಹೋಗುತ್ತಿದ್ದುದನ್ನು ನೋಡಿ, ಮಲಗಿದ್ದ ರಾಕ್ಷಸಾಧಿಪನನ್ನು ಎಚ್ಚರಿಸಲು ಬೊಬ್ಬೆಯಿಟ್ಟರು. ಅವನಿಗೆ ಗಾಢನಿದ್ರೆ. ಅವನು ಏಳುವುದರಲ್ಲಿ ಇವರು ನೂರುಗಾವುದ ದೂರ ಹೋಗಿದ್ದರು. ಅವನೆದ್ದು ವರ್ತಮಾನವನ್ನು ಕೇಳುವುದರಲ್ಲಿ ಇವರು ತಮ್ಮ ಪಟ್ಟಣವನ್ನೇ ಸೇರಿದ್ದರು. ನಿದ್ರೆಗೆಟ್ಟು ಎದ್ದ ರಾಕ್ಷಸನಿಗೆ ಕೋಪಬಂದು, ಕಾವಲಿದ್ದ ರಾಕ್ಷಸರನ್ನೆಲ್ಲಾ ಕೊಂದನು ಪುಷ್ಪಮಂಜರಿಯು ಹೊರಟುಹೋದಳೆಂಬ ದುಃಖದಲ್ಲಿ ತಾನೂ ಪ್ರಾಣವನ್ನು ಬಿಟ್ಟನು. ಮಗನು ಸತ್ತನೆಂದು ಆ ರಾಕ್ಷಸಿಯೂ ಸತ್ತಳು.

ಇತ್ತಲಾಗಿ ರಾಜಕುಮಾರನ ವೃದ್ಧಮಾತಾಪಿತೃಗಳು ಬಹುಕಾಲ ಅಗಲಿದ್ದ ಮಗನನ್ನೂ ಬಲು ಚಲುವೆಯಾದ ಪುಷ್ಪಮಂಜರಿಯನ್ನೂ ನೋಡಿ ಸಂತೋಷಗೊಂಡರು. ಅಂದು ಕಾಡಿನಲ್ಲಿ ಕಂಡ ಮುದುಕಿಯೇ ಪುಷ್ಪಮಂಜರಿಯ ತಾಯಿ. ಮಗಳು ಬಂದ ವರ್ತಮಾನವನ್ನು ಕೇಳಿ, ಅವಳೂ ಬಂದಳು. ಪುಷ್ಪಮಂಜರಿಯನ್ನು ರಾಜಕುಮಾರನು ಮದುವೆಯಾಗಿ ಬಹುಕಾಲ ಸುಖವಾಗಿದ್ದನು.